
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಮೇ 7, 2008 ರೂ. 12/-



ಯಡ್ಡಿ
ಗರ್ವ 'ಬಂ'ಗ

ನಾದಿನಿ
ಪೀಡಕ
ಯಡ್ಡಿ

ಶೋಭಕ್ಕಾ
ಇಷ್ಟೊಂದು ಹಣ
ಬಂತೆಲ್ಲಿಂದ?





ಡೀಲ್!



ಧನಾಧನ್ ಮಂಡ್ಯ



ಜೈಜಗದೀಶನ ನಾಟಕವೂ
ಸೋದರಿಯ ಆಕಾಂಕ್ಷೆಯೂ




ಶಿವಮೊಗ್ಗ: ಕುಮಾರಸ್ವಾಮಿಯ
ಜಾತಿ ಯಾವುದಯ್ಯಾ?



ಹಾವೇರಿ: ಉದಾಸಿ
ಸಾರಥ್ಯದಲ್ಲಿ ಬಿಜೆಪಿ ಗೋತ!



ಚನ್ನಪಟ್ಟಣ
ಮೆಗಾಸಿಟಿ V/s ಅಕ್ಕರ್






ಎಂ.ಪಿ. ಪ್ರಕಾಶ್
V/s ಹಣ ಮದದ ರೆಡ್ಡಿ!

ಪ್ರಜಾತಂತ್ರ-ನೇಪಾಳದ ಮಾದರಿ, ಭಾರತದ ಮಾ'ದರಿ'

ಕಳೆದ ಸಂಚಿಕೆಯಲ್ಲಿ ನೇಪಾಳದಲ್ಲಿ ನಡೆದಿರುವ ಚುನಾವಣೆ ಮತ್ತು ಅದರಲ್ಲಿ ಮಾವೋವಾದಿಗಳು ಸಾಧಿಸಿರುವ ಗೆಲುವಿಗಿರುವ ಮಹತ್ವವೇನೆಂದು ಚರ್ಚಿಸಿದ್ದೆವು.



ನೇಪಾಳದಲ್ಲಿ ಅಲ್ಲಿನ ಜನತೆ ಸಾರ್ವತ್ರಿಕ ಮತದಾನದ ಮೂಲಕ ಆಯ್ಕೆ ಮಾಡಿರುವುದು ಶಾಸನಾತ್ಮಕ ಅಧಿಕಾರವನ್ನುಳ್ಳ ಸರ್ಕಾರವನ್ನು ಮಾತ್ರವಲ್ಲ. ಬದಲಿಗೆ ಅದಕ್ಕಿಂತಲೂ ಮಹತ್ವವಾದ ಸಂವಿಧಾನ ಸಭೆಯನ್ನು. ಹಾಗಿದ್ದಲ್ಲಿ ಈ ಸಂವಿಧಾನ ಸಭೆ ಎಂದರೇನು?

ಒಂದು ದೇಶದ ಸಂವಿಧಾನ ಆ ದೇಶದ ಜನತೆಯ ಭವಿಷ್ಯದ ಸಾಮೂಹಿಕ ಕನಸಿನ ಅಭಿವ್ಯಕ್ತಿ ಮತ್ತು ಆ ಕನಸನ್ನು ಸಾಕಾರಗೊಳಿಸುವ ಸಾಧನ. ಹೀಗಾಗಿ ಒಂದು ದೇಶದಲ್ಲಿ ನಿಜವಾದ ಪ್ರಜಾತಂತ್ರ ಇದೆಯೋ ಇಲ್ಲವೋ ಎಂದು ತೀರ್ಮಾನಿಸಬೇಕಾದರೆ ಆ ದೇಶದ ಸಂವಿಧಾನ ಹೇಗೆ ಮತ್ತು ಯಾರಿಂದ ರಚಿತವಾಗಿದೆ ಎಂಬುದು ತುಂಬಾ ಮುಖ್ಯವಾಗುತ್ತದೆ.

ಈ ಹಿನ್ನೆಲೆಯಲ್ಲಿಯೇ ಭಾರತ ಮತ್ತು ನೇಪಾಳದ ಸಂವಿಧಾನ ಸಭೆಯ ರಚನೆಯ ಪ್ರಕ್ರಿಯೆಗಳಲ್ಲಿನ ವ್ಯತ್ಯಾಸಗಳು ಎರಡು ದೇಶದಲ್ಲಿನ ಪ್ರಜಾತಂತ್ರಕ್ಕೆ ಇರುವ ವ್ಯತ್ಯಾಸಗಳನ್ನು ಸ್ಪಷ್ಟಪಡಿಸುತ್ತದೆ.

ಈಗಾಗಲೇ ನೇಪಾಳದ ಸಂವಿಧಾನ ರಚಿಸುವ ಸಂವಿಧಾನ ಸಭೆಯನ್ನು ಅಲ್ಲಿನ ಎಲ್ಲಾ ಜನತೆ, ಜಾತಿ, ಭಾಷೆ, ಲಿಂಗ ಮತ್ತು ವರ್ಗಗಳ ಭೇದವಿಲ್ಲದೆ ಕೇವಲ 18 ವರ್ಷಕ್ಕೆ ಮೇಲ್ಪಟ್ಟು ವಯಸ್ಸಾಗಿದ್ದರೆ ಸಾಕೆಂಬ ಸಾಮೂಹಿಕ ಮತದಾನದ ತತ್ವವನ್ನು ಆಧರಿಸಿ ಯಾವುದೇ ಸಾಮ್ರಾಜ್ಯಶಾಹಿ ದೇಶಗಳ ಒತ್ತಡಕ್ಕಾಗಲಿ, ನಿಯಂತ್ರಣಕ್ಕಾಗಲಿ ಸಿಗದೆ ಆಯ್ಕೆ ಮಾಡಿದ್ದಾರೆ.

ಭಾರತದಲ್ಲಿ ಸಂವಿಧಾನ ಸಭೆ ಆಯ್ಕೆ ಆದದ್ದು ಹೇಗೆ?

ಭಾರತದ ಸಂವಿಧಾನ ಸಭೆ ರಚಿತವಾದದ್ದು 1946ರಲ್ಲಿ, ಅಂದರೆ ಭಾರತವಿನ್ನೂ ಬ್ರಿಟಿಷ್ ವಸಾಹತುಶಾಹಿಯ ಆಳ್ವಿಕೆ ಒಳಪಟ್ಟಿದ್ದಾಗ. ಭಾರತದ ಸಂವಿಧಾನ ಸಭೆ ರಚಿತವಾಗಬೇಕೆಂಬ ಪ್ರಸ್ತಾಪವನ್ನು ಇಟ್ಟಿದ್ದು ಮತ್ತು ಅದಕ್ಕೆ ಶಾಸನಾತ್ಮಕ ಮಾನ್ಯತೆ ಕೊಟ್ಟಿದ್ದು, ಭಾರತಕ್ಕೆ ಹೇಗೆ ಅಧಿಕಾರ ಹಸ್ತಾಂತರ ಮಾಡಬೇಕೆಂದು ಚರ್ಚಿಸಲು ಕಳಿಸಲಾಗಿದ್ದ ಬ್ರಿಟಿಷ್ ವಸಾಹತುಶಾಹಿಯ ಕ್ಯಾಬಿನೆಟ್ ಮಿಷನ್. ಅದರಲ್ಲಿದ್ದ ಕ್ರಿಪ್ಸ್ ಎಂಬ ಬ್ರಿಟಿಷ್ ಆಡಳಿತಗಾರನ ಸಲಹೆ ಮೇರೆಗೆ ಮತ್ತು ಬ್ರಿಟಿಷ್ ಚಕ್ರಾಧಿಪತ್ಯದ ಕೆಳಗೆ ಒಂದು ಸಂಸ್ಥಾನವಾಗಿ (ಡೊಮಿನಿಯನ್) ಉಳಿಯುವ ಷರತ್ತಿನೊಂದಿಗೆ ಭಾರತದಲ್ಲಿ ಸಂವಿಧಾನ ಸಭೆಯೊಂದನ್ನು ರಚಿಸುವ ಪ್ರಕ್ರಿಯೆ ಚಾಲ್ತಿ ಪಡೆದುಕೊಂಡಿತು.

ಚಾರ್ವಾಕ

ಶಿವಸುಂದರ್

ಅದಕ್ಕೆ ಮುನ್ನ 1935ರಲ್ಲಿ ಬ್ರಿಟಿಷರ ಚಕ್ರಾಧಿಪತ್ಯದಡಿಯಲ್ಲಿ ಮತ್ತು ಭಾರತದ ಮೇಲೆ ಬ್ರಿಟಿಷ್ ಸಾರ್ವಭೌಮತೆಯನ್ನು ಒಪ್ಪಿಕೊಂಡು ಒಂದು ಹಾಸ್ಯಾಸ್ಪದ ಕಾಯಿದೆ ಪಾಸಾಯಿತು. ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟ್-1935 ಎಂದು ಕರೆಯಲಾಗುವ ಆ ಕಾಯಿದೆಯ ಪ್ರಕಾರ ಸೀಮಿತ ಶಾಸನಾತ್ಮಕ ಅಧಿಕಾರವುಳ್ಳ ಒಂದು ಶಾಸನ ಸಭೆಯನ್ನು ರಚಿಸಿಕೊಳ್ಳಲು ಬ್ರಿಟಿಷರು ಭಾರತಕ್ಕೆ ಅನುಮತಿ ನೀಡಿದರು. ಆದರೆ ಈ ಶಾಸನಸಭೆಯನ್ನು ಆಯ್ಕೆ ಮಾಡುವ ಮತದಾರರು ಯಾರು? ಬ್ರಿಟಿಷ್ ವಸಾಹತುಶಾಹಿಯ ಪ್ರಕಾರ ಭಾರತದ ಬಹುಪಾಲು ಜನರು ಅನಕ್ಷರಸ್ಥರು ಮತ್ತು ಅನಾಗರಿಕರು ಆಗಿರುವುದರಿಂದ ಈ ಶಾಸನಸಭೆಯನ್ನು ಆಯ್ಕೆ ಮಾಡುವ ಮತದಾರರು ಒಂದೋ ಪದವೀಧರರಾಗಿರಬೇಕು ಅಥವಾ ಆಸ್ತಿವಂತರಾಗಿರಬೇಕು ಎಂದು ನಿರ್ಧರಿಸಲಾಯಿತು. ಭಾರತದ ನಾಯಕರೂ ಸಹ ಸಾರ್ವತ್ರಿಕ ಮತದಾನಕ್ಕೇನೂ ಆಗ್ರಹಿಸಲಿಲ್ಲ, ಹೀಗಾಗಿ 17.5 ಕೋಟಿ ಜನರಿದ್ದ ಭಾರತದಲ್ಲಿ ಈ ಶಾಸನಸಭೆಯನ್ನು ಆಯ್ಕೆ ಮಾಡಿದವರು ಕೇವಲ 3 ಕೋಟಿ ಆಸ್ತಿವಂತರು ಮತ್ತು ಪದವೀಧರರು ಮಾತ್ರ! 1935ರ ಶಾಸನ ಸಭೆಯ ಕುರಿತು ಇಷ್ಟೆಲ್ಲಾ ಏಕೆ ಹೇಳಬೇಕಾಯಿತೆಂದರೆ ಆ ನಂತರ ಭಾರತ ಸಂವಿಧಾನ ಸಭೆಯನ್ನು ಆಯ್ಕೆ ಮಾಡಿದ್ದು ಈ ಶಾಸನಸಭೆಗಳೇ!



1946ರಲ್ಲಿ ಸಂವಿಧಾನ ಸಭೆಯನ್ನು ರಚಿಸಬೇಕೆಂಬ ಪ್ರಸ್ತಾಪ ಬಂದಾಗ ಪ್ರಾರಂಭದಲ್ಲಿ ಸಾರ್ವತ್ರಿಕ ಮತದಾನದಿಂದ ಅದನ್ನು ಆಯ್ಕೆ ಮಾಡಬೇಕೆಂಬ ಕ್ಷೀಣದನಿ ಕಾಂಗ್ರೆಸ್ ಕಡೆಯಿಂದ ಬಂದಿದ್ದು ನಿಜವಾದರೂ ಅದಕ್ಕೆ ಸಮಯ ಹಿಡಿಯುತ್ತದೆಂಬ ನೆಪದ ಮೇಲೆ ಆ ಪ್ರಸ್ತಾಪವನ್ನು ಕೈಬಿಡಲಾಯಿತು. ಭಾರತದ ಸ್ವತಂತ್ರ ಸಂವಿಧಾನ ಸಭೆಯ ಸಂಖ್ಯಾಬಲವನ್ನು 389 ಎಂದು ನಿಗದಿಗೊಳಿಸಲಾಯಿತು. ಅದರಲ್ಲಿ 296 ಜನರನ್ನು ಬ್ರಿಟಿಷ್ ಭಾರತದ ಮೇಲೆ ಹೇಳಲ್ಪಟ್ಟ ಶಾಸನಸಭೆಗಳು ಆಯ್ಕೆಮಾಡಬೇಕಿತ್ತು, ಉಳಿದ 93 ಮಂದಿಯನ್ನು ರಾಜ ಸಂಸ್ಥಾನಗಳು ನೇಮಕ ಮಾಡಬೇಕೆಂದು ತೀರ್ಮಾನಿಸಲಾಯಿತು. ಈ ಶಾಸನ ಸಭೆಗಳನ್ನು ಆಯ್ಕೆ ಮಾಡುವಲ್ಲಿ ಶಿಕ್ಷಣ ಪಡೆಯದ ಅಥವಾ ಆಸ್ತಿ ಇಲ್ಲದ ಈ ದೇಶದ ಶೇ.83 ರಷ್ಟು ಜನತೆಯ ಪ್ರತಿನಿಧಿಗಳಿರಲಿಲ್ಲ ಎಂಬುದನ್ನು ಈಗಾಗಲೇ ನೋಡಿದ್ದೇವೆ. ಹೀಗಾಗಿ ಈ ಶಾಸನಸಭೆಯು ಆಯ್ಕೆ ಮಾಡಿದ 296 ಜನರೂ ಸಹ ಸಾರಾಂಶದಲ್ಲಿ ಸಾಮಾನ್ಯ ಜನರ ಪ್ರತಿನಿಧಿಗಳಾಗಿರಲಿಲ್ಲ ಅಥವಾ ಸಾಮಾನ್ಯ ಜನರಿಂದ ಆಯ್ಕೆಗೊಂಡಿರಲಿಲ್ಲ, ಇನ್ನು ರಾಜಸಂಸ್ಥಾನದಿಂದ ನೇಮಕಗೊಂಡವರ ವಿಷಯವಂತೂ ಸರಿಯೇ ಸರಿ! ಹೀಗಾಗಿ ಭಾರತದ ಸಂವಿಧಾನ ಸಭೆ ಯಾವ ರೀತಿಯಿಂದಲೂ ಸಾಮಾನ್ಯ ಜನರ ಆಶೋತ್ತರಗಳನ್ನು ಪ್ರತಿನಿಧಿಸುವ ಸಭೆಯಾಗಿರಲಿಲ್ಲ.

ಇದಕ್ಕೆ ದೊಡ್ಡ ಉದಾಹರಣೆ ಈ ದೇಶದ ದುಡಿಯುವ ಜನತೆಯ ಮತ್ತು ದಲಿತರ ಆಸಕ್ತಿಗಳಿಗೆ ಧ್ವನಿಯಾಗುತ್ತಾ ಬಂದಿದ್ದ ಅಂಬೇಡ್ಕರ್‌ರನ್ನು ಕಾಂಗ್ರೆಸ್ ಮೆಜಾರಿಟಿಯಲ್ಲಿದ್ದ ಮುಂಬೈ ಪ್ರಾಂತ್ಯದ ಶಾಸನ ಸಭೆ ಆಯ್ಕೆ ಮಾಡಲಿಲ್ಲ. ಬದಲಿಗೆ ಅಂಬೇಡ್ಕರ್ ಅವರು ದೂರದ ಕೊಲ್ಕತ್ತದಿಂದ ಮುಸ್ಲಿಂ ಲೀಗ್‌ನ ಬೆಂಬಲದೊಂದಿಗೆ ಆಯ್ಕೆಯಾಗಬೇಕಾಯಿತು. ಆ ವೇಳೆಗಾಗಲೇ ಪೂನಾ ಒಪ್ಪಂದ ಆಗಿದ್ದರಿಂದ ದಲಿತರಿಗೆ ಪ್ರತ್ಯೇಕ ಮತಕ್ಷೇತ್ರಗಳು ದೊರೆಯದಿದ್ದರೂ ಮೂವತ್ತು ಜನ ದಲಿತರು ಸಂವಿಧಾನ ಸಭೆಯನ್ನು ಪ್ರವೇಶಿಸುವಂತಾಯಿತು ಮತ್ತು ಮುಸ್ಲಿಮರು ಹಾಗೂ ಇತರ ಪ್ರಮುಖ ಧರ್ಮಗಳಿಗೆ ಜನಸಂಖ್ಯಾವಾರು ಪ್ರಾತಿನಿಧ್ಯ ನೀಡುವ ಪದ್ಧತಿ ಜಾರಿಗೆ ಬಂದದ್ದರಿಂದ ಸಾಕಷ್ಟು ಮುಸ್ಲಿಮರು ಸಂವಿಧಾನ ಸಭೆಯಲ್ಲಿ ಇರುವಂತಾಗಿತ್ತು, ಆದರೆ ಅಂಬೇಡ್ಕರ್ ಮತ್ತು ಬಂಗಾಳ ಪ್ರಾಂತ್ಯದಿಂದ ಆಯ್ಕೆಯಾದ ಏಕೈಕ ಕಮ್ಯುನಿಸ್ಟ್ ಒಬ್ಬರನ್ನು ಬಿಟ್ಟರೆ ದುಡಿಯುವ ಜನತೆಯ ಧ್ವನಿ ಸಂವಿಧಾನ ಸಭೆಯಲ್ಲಿ ಇರಲಿಲ್ಲ. ಅದರಲ್ಲೂ 1947ರಲ್ಲಿ ಭಾರತ ವಿಭಜನೆಯಾದ ಮೇಲೆ ಇದ್ದ ಕಮ್ಯುನಿಸ್ಟ್ ಸದಸ್ಯನ ಸದಸ್ಯತ್ವವೂ ರದ್ದಾಯಿತು ಮತ್ತು ಸಂವಿಧಾನ ಸಭೆಯಲ್ಲಿ ಕಾಂಗ್ರೆಸ್ ಪ್ರಾಬಲ್ಯ ಶೇ.85ಕ್ಕೇರಿತು. ಹೀಗಾಗಿ ಸಂವಿಧಾನ ಸಭೆಯಲ್ಲಿ ಮೂವತ್ತು ದಲಿತರಿದ್ದರೂ ಅವರ ಧ್ವನಿ ಸಂವಿಧಾನ ಸಭೆಯಲ್ಲಿ ಆದ ಚರ್ಚೆಗಳಲ್ಲಿ ಕೇಳದೇಹೋಯಿತು. ಮಾತ್ರವಲ್ಲ ಸಾಕ್ಷಾತ್ ಅಂಬೇಡ್ಕರರೇ ಈ ಸಂವಿಧಾನದ ಸಾಮಾಜಿಕ ಬದಲಾವಣೆಯ ಸಾಮರ್ಥ್ಯದ ಬಗ್ಗೆ ಅಪಾರ ಸಂದೇಹ ವ್ಯಕ್ತಪಡಿಸುವಂತಾಯಿತು. ಮಾತ್ರವಲ್ಲ 1955ರಲ್ಲಿ ಕಾಂಗ್ರೆಸ್ ಸರ್ಕಾರಕ್ಕೂ ರಾಜೀನಾಮೆ ಕೊಟ್ಟು ಹೊರಬರುವಂತಾಯಿತು. ಕಳೆದ ಅರವತ್ತು ವರ್ಷಗಳು ಅಂಬೇಡ್ಕರ್‌ರ ಸಂದೇಹವು ನೂರಕ್ಕೆ ನೂರು ಪಾಲು ಸರಿಯೆಂಬುದನ್ನು ಸಾಬೀತುಪಡಿಸುತ್ತಿದೆ!

ಇದಕ್ಕೆ ತದ್ವಿರುದ್ಧವಾಗಿ ನೇಪಾಳದಲ್ಲಿ ಆಸ್ತಿ ಅಥವಾ ಶಿಕ್ಷಣದ ನಿರ್ಬಂಧವಿಲ್ಲದೆ ಸಾರ್ವತ್ರಿಕ ಮತದಾನದ ಆಧಾರದಲ್ಲಿ ಸಂವಿಧಾನ ಸಭೆಯ ಆಯ್ಕೆ ನಡೆದಿದೆ. ನೇಪಾಳದ ಈಗಿನ ಜನಸಂಖ್ಯೆ 2.2 ಕೋಟಿ. ಅದರಲ್ಲಿ 1.75 ಕೋಟಿ ಮತದಾರರಿದ್ದಾರೆ. ಅವರಲ್ಲಿ 1.01 ಕೋಟಿ ಜನ ಮತ ಚಲಾಯಿಸಿದ್ದಾರೆ. ಅಮೆರಿಕದ ವೀಕ್ಷಕರೇ ವರದಿ ಮಾಡಿರುವಂತೆ ಈ ಮತದಾನದಲ್ಲಿ ನಗರದ ಮತ್ತು ಗ್ರಾಮೀಣ ಪ್ರದೇಶದ ಬಡವರು, ಮಹಿಳೆಯರು, ಆದಿವಾಸಿಗಳು ಮತ್ತು ಇತರ ದಮನಿತ ಜನಜಾತಿಗಳು ವಿಶೇಷವಾಗಿ ಮತ ಚಲಾಯಿಸಿದ್ದಾರೆ ಮತ್ತು ಅಂಥ ಕಡೆಗಳಲ್ಲೆಲ್ಲಾ ಮಾವೋವಾದಿಗಳು ಪ್ರಚಂಡ ಜಯ ಸಾಧಿಸಿದ್ದಾರೆ.

ನೇಪಾಳದ ಸಂವಿಧಾನ ಸಭೆಯ ವಿಶೇಷತೆ ಇಷ್ಟು ಮಾತ್ರವಲ್ಲ, ಒಟ್ಟಾರೆ ಸಂವಿಧಾನ ಸಭೆಯ ಬಲ 601. ಅದರಲ್ಲಿ 240 ಜನರನ್ನು ನೇರ ಮತದಾನದಿಂದ ಅಂದರೆ ಯಾರಿಗೆ ಹೆಚ್ಚು ಮತಗಳು ಸಿಕ್ಕಿರುತ್ತವೆಯೋ ಆ ಅಭ್ಯರ್ಥಿ ಗೆದ್ದವರು ಎಂದು ತೀರ್ಮಾನಿಸುವ ಪದ್ಧತಿಯಲ್ಲಿ ಆಯ್ಕೆ ಮಾಡಲಾಗಿದೆ. ಈ ಪದ್ಧತಿಯಲ್ಲಿ ಈಗ ಮಾವೋವಾದಿಗಳು 120 ಸ್ಥಾನವನ್ನು ಪಡೆದಿದ್ದಾರೆ. ಇದಲ್ಲದೆ ಜನಸಂಖ್ಯಾವಾರು ಪ್ರಾತಿನಿಧ್ಯದ ಆಧಾರದಲ್ಲಿ ಉಳಿದ 335 ಸ್ಥಾನಗಳನ್ನು ಆಯ್ಕೆ ಮಾಡಲಾಗುತ್ತದೆ. ಅಂದರೆ ಈ ಪದ್ಧತಿಯಲ್ಲಿ ನೇಪಾಳದಲ್ಲಿರುವ ಎಲ್ಲಾ ಜನಜಾತಿಗಳು, ಮಹಿಳೆಯರು, ಆದಿವಾಸಿಗಳು, ರಾಷ್ಟ್ರೀಯತೆಗಳು ಪ್ರತಿಯೊಬ್ಬರಿಗೂ ಅವರ ಜನಸಂಖ್ಯಾಧಾರದಲ್ಲಿ ತಮ್ಮ ದೇಶದ ಸಂವಿಧಾನ ಬರೆಯಲು ಪ್ರಾತಿನಿಧ್ಯ ಪಡೆದುಕೊಳ್ಳುತ್ತವೆ. ಉಳಿದ 26 ಸ್ಥಾನಗಳಿಗೆ ಸರ್ವಸಮ್ಮತಿಯ ಆಧಾರದ ಮೇಲೆ ನೇಮಕ ಮಾಡಲಾಗುತ್ತದೆ. ಹೀಗೆ ನೇಪಾಳದ ಸಂವಿಧಾನ ಸಭೆ ಎಲ್ಲ ಜನತೆಯ ಪ್ರಾತಿನಿಧ್ಯ ಉಳ್ಳ ಸಂವಿಧಾನ ಸಭೆಯಾಗಲಿದೆ.



ಭಾರತ ಮತ್ತು ನೇಪಾಳದ ಸಂವಿಧಾನ ಸಭೆಗಳ ವ್ಯತ್ಯಾಸವನ್ನು ಸ್ಪಷ್ಟಪಡಿಸಲು ಇನ್ನೊಂದು ಉದಾಹರಣೆ ಸಾಕು. ನೇಪಾಳ ಸಂವಿಧಾನ ಸಭೆಯ ಮೊಟ್ಟ ಮೊದಲ ತೀರ್ಮಾನ ರಾಜಸತ್ತೆಯ ರದ್ಧತಿಯಾಗಿರುತ್ತದಾದರೆ ಭಾರತದ ಸಂವಿಧಾನ ಸಭೆಯಲ್ಲಿ ರಾಜ ಪ್ರತಿನಿಧಿಗಳೇ ಸಾಕ್ಷಾತ್ತಾಗಿ ಹಾಜರಿದ್ದು ಪ್ರಜಾಸತ್ತೆಯಲ್ಲೂ ತಮ್ಮ ಸ್ಥಾನ-ಮಾನ, ಆಸ್ತಿ-ಪಾಸ್ತಿಗಳನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾದರು!

ಆದ್ದರಿಂದಲೇ ಜಯಪ್ರಕಾಶ್ ನಾರಾಯಣರಂಥವರೂ ನಮ್ಮ ಭಾರತದ ಸಂವಿಧಾನ ಸಭೆಯನ್ನು ಬ್ರಿಟಿಷ್ ಸಾಮ್ರಾಜ್ಯಶಾಹಿಯಿಂದ ರಚಿಸಲ್ಪಟ್ಟ ಮತ್ತು ಭಾರತಕ್ಕೆ ನಿಜವಾದ ವಿಮೋಚನೆ ತರಲು ಅಶಕ್ತವಾದ "ನಿರ್ಬಂಧಿತ ಮತ್ತು ಹತ್ತಿಕ್ಕಲ್ಪಟ್ಟ ಸಂವಿಧಾನ ಸಭೆ" ಯೆಂದು ಕರೆದಿದ್ದರು! ■

No Comments



"ಟ್ವೆಂಟಿ-ಟ್ವೆಂಟಿ ಕ್ರಿಕೆಟ್ಟನ್ನು ಫ್ಯಾಷನ್‌ಗೆ ಹೋಲಿಸಿ ಮಾತನಾಡುವುದಾದರೆ ನಾನದನ್ನು ಬಿಕಿನಿ ಕ್ರಿಕೆಟ್ಟೆಂದು ಕರೆಯುತ್ತೇನೆ."

-ರಾಹುಲ್ ದ್ರಾವಿಡ್

"ಸಂಸತ್ ಸದಸ್ಯರ ಕ್ಷೇತ್ರಾಭಿವೃದ್ಧಿ ನಿಧಿಯನ್ನು 2 ಕೋಟಿಯಿಂದ 5 ಕೋಟಿಗೇರಿಸುವ ಪ್ರಸ್ತಾಪಕ್ಕೆ ನನ್ನ ಸಮ್ಮತಿಯಿಲ್ಲ. ಬದಲಿಗೆ ಅದನ್ನು ಸಂಪೂರ್ಣವಾಗಿ ರದ್ದು ಮಾಡಬೇಕು."

-ಸೋಮನಾಥ ಚಟರ್ಜಿ



"ನಾವು ಹುತ್ತ ಬಡಿಯುತ್ತಿದ್ದೇವೆಯೇ ಹೊರತು ಹಾವು ಹಿಡಿಯುತ್ತಿಲ್ಲ. ಉತ್ತಮ ನಾಯಕರನ್ನು ಆಯ್ಕೆ ಮಾಡುವಲ್ಲಿ ನಾವು ಮತ್ತೆ ಮತ್ತೆ ವಿಫಲರಾಗುತ್ತಿದ್ದೇವೆ."

-ಸಾ.ಶಿ.ಮರುಳಯ್ಯ

"ಧರ್ಮಸಿಂಗ್ ಮತ್ತು ಖರ್ಗೆಯವರನ್ನು ಮತದಾರ ಮನೆಗೆ ಕಳಿಸಿದಾಗ ಮಾತ್ರ ಹೈದರಾಬಾದ್ ಕರ್ನಾಟಕ ಉದ್ಧಾರವಾಗುತ್ತದೆ."

-ಜಗದೀಶ್ ಶೆಟ್ಟರ್

"ಕ್ರಿಕೆಟ್ ಮೈದಾನದಲ್ಲಿ ತುಂಡುಡುಗೆ ನೃತ್ಯ ನಿಷೇಧ ಸಾಧ್ಯವಿಲ್ಲ. ಏಕೆಂದರೆ ಅದೂ ಒಂದು ಬಗೆಯ ನೃತ್ಯವೇ. ಹಾಗೆ ನೋಡಿದರೆ ಪೊಲೀಸರ ಡ್ರಿಲ್ ಕೂಡಾ ಒಂದು ಬಗೆಯ ನೃತ್ಯವೇ!"

-ಪಾಟೀಲ್. ಮಹಾರಾಷ್ಟ್ರ ಗೃಹಮಂತ್ರಿ

ನಂಬಿದ್ರೆನಂಬಿ ಬಿಟ್ರೆಬಿಡಿ

"ರಾಹುಲ್ ಗಾಂಧಿಯೇ ಭವಿಷ್ಯದ ನಾಯಕ ಎಂದು ಮೊದಲು ಹೇಳಿದ್ದು ನಾನೇನಲ್ಲ, ಹಾಗೆ ಮೊದಲು ಹೇಳಿದ್ದು ಮನಮೋಹನ್ ಸಿಂಗ್ ಅವರೇ."

-ಅರ್ಜುನ್ ಸಿಂಗ್

"ಈ ಚುನಾವಣೆಯ ನಂತರ ಯಡಿಯೂರಪ್ಪನವರು ಮುಖ್ಯಮಂತ್ರಿ ಆಗದಿದ್ದರೆ ನಾನು ರಾಜಕೀಯ ನಿವೃತ್ತಿ ಹೊಂದುತ್ತೇನೆ."

-ಜನಾರ್ಧನ ರೆಡ್ಡಿ

"ಬಿಜೆಪಿ ಪ್ರಣಾಳಿಕೆ ಜೆಡಿಎಸ್ ಕಾರ್ಯಕ್ರಮದ ನಕಲು."

-ಹೆಚ್.ದಿ.ಕುಮಾರಸ್ವಾಮಿ

"ಬಿಜೆಪಿ ಪ್ರಣಾಳಿಕೆ ಕಾಂಗ್ರೆಸ್ ಘೋಷಣೆಗಳ ನಕಲು."

-ಮಲ್ಲಿಕಾರ್ಜುನ ಖರ್ಗೆ

"ಬುದ್ಧ-ಗಾಂಧಿಯ ನಾಡಿನಲ್ಲಿ ಹಿಟ್ಲರ್ ಹುಟ್ಟಲಾರ."

-ನರೇಂದ್ರ ಮೋದಿ

ಅಟ್ಟದಿಂದ ಬಿದ್ದವರನ್ನು ದಡಿ ತೆಗೆದುಕೊಂಡು ಚಚ್ಚಿದಂತೆ!

"ಆಹಾರ ವಸ್ತುಗಳ ಕೊರತೆಯ ಬಗ್ಗೆಗಾಬರಿ ಹುಟ್ಟಿಸಬೇಡಿ. ಇದರಿಂದ ಕಳ್ಳ ದಾಸ್ತಾನುದಾರರಿಗೆ ಹೆಚ್ಚಿನ ಸಹಾಯವಾಗುತ್ತದೆ."

-ಮನಮೋಹನ್ ಸಿಂಗ್

ಭಾರತದ ಕಾಮ್ರೇಡರೂ ಕೇಳಿಸಿಕೊಳ್ಳಬೇಕು!

"ಇನ್ನು ಮುಂದೆ ನೇಪಾಳದಲ್ಲಿ ಎರಡೇ ಪಕ್ಷಗಳಿರುತ್ತವೆ. ಒಂದು ನೇಪಾಳದ ಶ್ರೀಮಂತರ ಹಿತಾಸಕ್ತಿಯನ್ನು ಪ್ರತಿನಿಧಿಸುವ ಕಾಂಗ್ರೆಸ್ ಪಕ್ಷ. ಏಕೆಂದರೆ ಅವರಿಗೆ ಶ್ರೀಮಂತರ ಹಿತಾಸಕ್ತಿಯನ್ನು ಕಾಪಾಡುವ ಸ್ಪಷ್ಟ ಸಿದ್ಧಾಂತ ಮತ್ತು ಕಾರ್ಯಕ್ರಮಗಳಿವೆ. ಆದ್ದರಿಂದ ಅದು ಮುಂದೆಯೂ ಅಸ್ತಿತ್ವವಿರುತ್ತದೆ. ಅದೇ ರೀತಿ ನೇಪಾಳದ ಬಡಜನತೆಯ ಹಿತಾಸಕ್ತಿಗಾಗಿ ಹೋರಾಡುವ ಎಡಪಕ್ಷವಾದ ನಮ್ಮ ಪಕ್ಷವಿರುತ್ತದೆ. ಇವೆರಡರ ಮಧ್ಯೆ ಯುಎಂಎಲ್‌ನಂತಹ ಎಡಬಿಡಂಗಿ ಪಕ್ಷಗಳಿಗೆ ಇನ್ನು ಮುಂದೆ ನೇಪಾಳದಲ್ಲಿ ಅಸ್ತಿತ್ವವಿರುವುದಿಲ್ಲ. ಏಕೆಂದರೆ ಅದು ಶ್ರೀಮಂತರನ್ನೂ ಪ್ರತಿನಿಧಿಸುವುದಿಲ್ಲ ಜನತೆಯನ್ನೂ ಪ್ರತಿನಿಧಿಸುವುದಿಲ್ಲ, ಆ ಪಕ್ಷಕ್ಕೆ ತನ್ನದೇ ಆದ ರಾಜಕೀಯವೂ ಇಲ್ಲ, ಹೆಸರಿಗೆ ಅದು ಕಮ್ಯುನಿಸ್ಟ್ ಎಂದು ಚಲಾವಣೆಯಲ್ಲಿದ್ದರೂ ಈಗ ನಾವು ಕಮ್ಯುನಿಸ್ಟ್ ಎಂದು ಸ್ಪಷ್ಟವಾಗಿ ನೆಲೆ ನಿಂತಿರುವುದರಿಂದ ಆ ಪಕ್ಷದ ಕಾರ್ಯಕರ್ತರು ನಮ್ಮ ಪಕ್ಷವನ್ನು ಬಂದು ಸೇರಲು ಕರೆ ನೀಡುತ್ತೇವೆ."

-ಬಾಬೂರಾಮ್ ಭಟ್ಟರಾಯ್. ನೇಪಾಳದಲ್ಲಿ ಪ್ರಚಂಡ ವಿಜಯ ಸಾಧಿಸಿರುವ ನೇಪಾಳ ಮಾವೋವಾದಿ ಪಕ್ಷದ ನಾಯಕ

ಭಾರತಕ್ಕೆ ಪಾಕಿಸ್ತಾನದ ಲಾಲಿ!

"ಇನ್ನು ಮುಂದೆ ಸನ್ನಿ ದಿಯೋಲ್ ರೀತಿಯ ಪಾಕಿಸ್ತಾನಿ ವಿರೋಧಿ ಚಿತ್ರಗಳು ಬರುವುದಿಲ್ಲ. ಬದಲಿಗೆ ಲಾಲಿವುಡ್ (ಪಾಕಿಸ್ತಾನಿ ಚಿತ್ರೋದ್ಯಮಕ್ಕೆ ಮಾಧ್ಯಮವಿಟ್ಟಿರುವ ಹೆಸರು)ನಿಂದ ಬರುವ ಚಿತ್ರಗಳು ಆ ಸ್ಥಾನವನ್ನು ತುಂಬುತ್ತವೆ."

-ಜೋಗಿಂದರ್ ಮಹಾಜನ್. ಪಾಕಿಸ್ತಾನಿ ಚಿತ್ರಗಳ ಭಾರತೀಯ ವಿತರಕ

ಕ್ರಿಕೆಟ್ ಹಿಡುಕರು!

"ತುಂಡುಬಟ್ಟೆಯ ಡ್ಯಾನ್ಸಿಂಗ್ ಹುಡುಗಿಯರು ಮೈದಾನದ ಮಧ್ಯದಲ್ಲೇನೂ ಕುಣಿಯುವುದಿಲ್ಲವಲ್ಲ. ಹೀಗಾಗಿ ಆಟದ ಮೌಲ್ಯವನ್ನೇನೂ ನಾವು ಕಡೆಗಣಿಸುತ್ತಿಲ್ಲ."

-ಲಲಿತ್ ಮೋದಿ. ಐಪಿಎಲ್ ಮುಖ್ಯಸ್ಥ

ಪ್ರಜಾತಂತ್ರದ ಕಾಯಿಲೆಗೆ ಮಾವೋವಾದದ ಮದ್ದು!

"ನಾನೇನೂ ತಪ್ಪು ಮಾಡದಿದ್ದರೂ ನಿಮ್ಮ ಸರ್ಕಾರ ನ್ಯಾಯಕ್ಕಾಗಿ ಎತ್ತುತ್ತಿದ್ದ ನನ್ನ ದನಿಯನ್ನು ದಮನಿಸಿದೆ. ಈವರೆಗೆ ಕೇವಲ ಸೈದ್ಧಾಂತಿಕ ಹಿತೈಷಿಯಾಗಿದ್ದ ನನ್ನನ್ನು ಮಾವೋವಾದಿ ಪಕ್ಷದ ಕಾರ್ಯಕರ್ತಳನ್ನಾಗಿ ಮಾಡಿದ್ದು ನಿಮ್ಮ ಸರ್ಕಾರವೇ!"


-ಶೈನಾ. ಪೊಲೀಸರ ಕಿರುಕುಳದಿಂದ ಭೂಗತಳಾದ ಕೇರಳದ ವಕೀಲೆ, ಮುಖ್ಯಮಂತ್ರಿಗೆ ಬರೆದ ಬಹಿರಂಗ ಪತ್ರದಲ್ಲಿ.

ಫ್ಯಾಕ್ಟರಿಗಳು ಓಟು ಹಾಕುತ್ತವೆಯೇ ಖರ್ಗೆ ಸಾಹೇಬರೇ?

"ರಾಮನಗರ ಕ್ಷೇತ್ರದಲ್ಲಿ ಕೈಗಾರಿಕೆಗಳು ಹೆಚ್ಚಾಗಿವೆ. ಆದ್ದರಿಂದ ಅಲ್ಲಿ ಮಮತಾ ನಿಚ್ಚಾನಿಯವರನ್ನು ಕಣಕ್ಕೆ ಇಳಿಸಿದ್ದೇವೆ."

-ಮಲ್ಲಿಕಾರ್ಜುನ ಖರ್ಗೆ

ಜನರ ನೋವಿಗೆಂದೂ ಮಿಡಿಯದವರು ಈಗ..



"ಟಿಕೆಟ್ ಹಂಚಿಕೆಯಲ್ಲಿ ಆಗಿರುವ ತಾರತಮ್ಯವೇ ನಾನು ರಾಜೀನಾಮೆ ನೀಡಲು ಕಾರಣ."

-ಜಾಫರ್ ಷರೀಫ್

ತಲೆ ಕೆಟ್ಟ ಜನ ಬರುತ್ತಿದ್ದಾರೆ ಎಚ್ಚರಿಕೆ!



ಕಂಡಹಾಗೆ

■ ಗೌರಿ ಲಂಕೇಶ್

ಪ್ರಜಾಪ್ರಭುತ್ವದ ಮುಖ್ಯ ಅಂಗವಾಗಿರುವ ಚುನಾವಣಾ ಪ್ರಕ್ರಿಯೆಯಲ್ಲಿ ಅಪಾರ ನಂಬಿಕೆ ಇಟ್ಟಿರುವ ನನ್ನಂಥವರಿಗೆ ಇತ್ತೀಚೆಗೆ ಪಕ್ಷಗಳ ಟಿಕೆಟ್‌ಗಳಿಗಾಗಿ ನಡೆದ ಜಗಳಗಳನ್ನು ಕಂಡು ಜಿಗುಪ್ಸೆ ಮತ್ತು ಬೇಸರ ಆಗಿದೆ. ಮೊನ್ನೆ ಟಿವಿ ಆನ್ ಮಾಡಿದಾಗ ಅದ್ಯಾರೋ ಕಾಂಗ್ರೆಸ್ ಪಕ್ಷದ ಕಚೇರಿಯ ಬಾಗಿಲಿಗೆ ತನ್ನ ತಲೆಯನ್ನೇ ಜಜ್ಜುತ್ತಿದ್ದದು ಕಾಣಿಸಿತು. ಆತನಂತೆಯೇ ಇನ್ನೂ ಹಲವು ಜನರು ತಮ್ಮ ನಾಯಕನಿಗೆ ಟಿಕೆಟ್ ಕೊಡದಿದ್ದರೆ ತಾವು ನೇಣು ಹಾಕಿಕೊಳ್ಳುವುದಾಗಿ, ಇನ್ನೊಂದು ತಂಡ ಬ್ಲೇಡ್‌ನಿಂದ



ತಮ್ಮ ಕೈಗಳನ್ನು ಕತ್ತರಿಸಿಕೊಂಡು ರಕ್ತ ಹರಿಸುವುದಾಗಿ, ಹೀಗೆ ಎಂಥೆಂಥದ್ದೋ ಬೆದರಿಕೆಯ ತರ್ಕಗಳನ್ನು ಟಿವಿ ಕ್ಯಾಮೆರಾಗಳ ಮುಂದೆ ಪ್ರದರ್ಶಿಸುತ್ತಿದ್ದರು. ಅವರೆಲ್ಲರ ಆವೇಶಭರಿತ ಮುಖಗಳು, 'ಅನ್ಯಾಯ'ವನ್ನು ಸಹಿಸದ ಆಕ್ರೋಶ, ಇವನ್ನೆಲ್ಲ ಕಂಡು ನನ್ನೊಳಗೆ ಒಂದು ಪ್ರಶ್ನೆ ಮೂಡಿತು.

ಕೆಲ ವರ್ಷಗಳಿಂದ ಅನೇಕ ಸಮಸ್ಯೆಗಳು ನಮ್ಮ ರಾಜ್ಯವನ್ನು ಘಾಸಿಗೊಳಿಸಿವೆ. ಪ್ರವಾಹ ಬಂದಿದೆ, ಅನಾವೃಷ್ಟಿ ಸಂಭವಿಸಿದೆ, ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ತೆರಿಗೆಗಳು ಹೆಚ್ಚಾಗಿ ಬಡವರ ಮತ್ತು ಮಧ್ಯಮ ವರ್ಗದ ಜನರ ಬದುಕೇ ಕಷ್ಟಕರವಾಗಿದೆ, ಕಾವೇರಿ ನೀರಿನ ವಿವಾದ, ಇಂತಹ ಹಲವಾರು ಬಿಕ್ಕಟ್ಟುಗಳು ಕನ್ನಡಿಗರನ್ನು ಕಾಡಿವೆ. ಆಗೆಲ್ಲಾ ಇವರ್‍ಯಾರೂ ಬಂದು ಹೀಗೆ 'ಹೋರಾಟ' ಮಾಡಿದ್ದಾಗಲಿ, ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಸಿದ್ದಾಗಲಿ, 'ಅನ್ಯಾಯ' ಎಂದು ಪ್ರತಿಭಟಿಸಿದ್ದಾಗಲಿ ಕಂಡುಬರಲಿಲ್ಲ. ಇಂತಹ 'ನಾಯಕರು' ಮತ್ತು ಅವರ ಹಿಂಬಾಲಕರು ಚುನಾವಣೆಗಳು ಘೋಷಿಸಲ್ಪಟ್ಟೊಡನೆ ಉದ್ಭವಿಸಿ ತಮ್ಮ 'ಹಕ್ಕು'ಗಳಿಗಾಗಿ ಹೋರಾಡುವುದು ಒಂದು ಆರೋಗ್ಯಕರ ಪ್ರಜಾಪ್ರಭುತ್ವದ ಲಕ್ಷಣವಂತೂ ಅಲ್ಲವೇ ಅಲ್ಲ.

ಈ ಜಗಳಗಳಿಗೆ ಇನ್ನೊಂದು ವಿಚಿತ್ರ ಆಯಾಮವೂ ಇದೆ. ಅದೇನೆಂದರೆ ಪ್ರಜಾಪ್ರಭುತ್ವದಲ್ಲಿ ಜನರ ಬೆಂಬಲಕ್ಕಾಗಿ ಪರಸ್ಪರ ಜಿದ್ದಾಜಿದ್ದಿ ನಡೆಸಬೇಕಿದ್ದವರು ಅದನ್ನು ಬಿಟ್ಟು ಟಿಕೆಟ್‌ಗಾಗಿ ತಮ್ಮ ರಾಜಕೀಯ ವೈರಿಗಳೊಂದಿಗೆ ಬಡಿದಾಡುತ್ತಿರುವುದು. ಅದರರ್ಥ ಇಷ್ಟೇ: ಅವರೆಲ್ಲರಿಗೆ ಜನರ ಬೆಂಬಲಕ್ಕಿಂತ ಪಕ್ಷದ ಬೆಂಬಲ ಮುಖ್ಯ. ಅವರೆಲ್ಲಾ ಯಾಕೆ ಹಾಗೆ ಚಿಂತಿಸುತ್ತಿದ್ದಾರೆ ಎಂದು ಅರ್ಥ ಮಾಡಿಕೊಳ್ಳುವುದು ಕಷ್ಟವೇನಲ್ಲ. ಹೇಗಿದ್ದರೂ ಮತದಾರರಿಗೆ ಆಮಿಷಗಳನ್ನು ನೀಡಿ ಅವರ ಬೆಂಬಲವನ್ನು ಖರೀದಿಸಬಹುದು. ಅದು ಸುಲಭದ ಕೆಲಸ. ಅದಕ್ಕಿಂತಲೂ ಕಷ್ಟವಾಗಿರುವುದು ಪಕ್ಷದ ಟಿಕೆಟ್‌ಗಳನ್ನು ಪಡೆಯುವುದು. ಅದಕ್ಕೆ ಇವರೆಲ್ಲ ಅಷ್ಟೊಂದು ಗುದ್ದಾಡುತ್ತಿದ್ದಾರೆ.

ತಮಾಷೆಯ ಸಂಗತಿ ಯಾವುದೆಂದರೆ ಟಿಕೆಟ್ ಆಕಾಂಕ್ಷಿಗಳ ಈ ಬಡಿದಾಟವನ್ನು ಕಂಡು ಹಲವು ಪಕ್ಷಗಳ ಮುಖಂಡರಿಗೆ ಬೇಸರವಾಗಿದೆಯಂತೆ. ಅದಕ್ಕೆಂದೇ ಆಕಾಂಕ್ಷಿಗಳಿಗೆ ಸುಲಭವಾಗಲೆಂದು ಅವರೆಲ್ಲಾ ತಮ್ಮ ಪಕ್ಷಗಳ ಟಿಕೆಟ್‌ಗಳನ್ನು ಗುಪ್ತವಾಗಿ ಹರಾಜು ಮಾಡಿದ್ದಾರೆ. ಹಾಗೆ ಮಾಡುವ ಮೂಲಕ ತಮಗೂ ಲಾಭ, ಟಿಕೆಟ್ ಆಕಾಂಕ್ಷಿಗೂ ಲಾಭ ಎಂಬ ತರ್ಕ ಅವರದ್ದಾಗಿದೆ.

ಹೀಗೆ ಹಣ ಕೊಟ್ಟು ಟಿಕೆಟ್ ಖರೀದಿಸುವ, ಹಣ ಬಲದಿಂದಲೇ ಮತದಾರರ ಬೆಂಬಲ ಪಡೆಯುವ ಜನರ ಸಂಖ್ಯೆ ಈ ಬಾರಿ ಬಹಳಷ್ಟಾಗಿರುವುದು ಎಲ್ಲರ ಗಮನಕ್ಕೆ ಬಂದಿದೆ. ಆದರೂ ಇದನ್ನು ಚುನಾವಣೆ ಎಂದೂ, ಪ್ರಜಾಪ್ರಭುತ್ವ ಎಂದೂ ಎಲ್ಲರೂ ಕರೆಯುತ್ತಿರುವುದು ಒಂದು **black comedy** ತರಹವಿದೆ.

ಈ ಬಾರಿ ಇನ್ನೊಂದು ವಿಚಿತ್ರವನ್ನು ಗಮನಿಸಿದ್ದೇನೆ. ಅದು ಚುನಾವಣೆ ಎಂಬ ಅಮಲಿಗೆ ಬಹಳಷ್ಟು ಜನ ಬಲಿಯಾಗಿರುವುದು. ಇದು ಎಷ್ಟು ಅಪಾರವಾಗಿ ಹಬ್ಬಿದೆ ಎಂದರೆ ಕೆಲದಿನಗಳ ಹಿಂದಿನವರೆಗೂ ನಮ್ಮನಿಮ್ಮಂತೆ ತಮ್ಮತಮ್ಮ ವೃತ್ತಿ ಜವಾಬ್ದಾರಿ, ಇತ್ಯಾದಿಗಳೊಂದಿಗೆ ಬದುಕುತ್ತಿದ್ದ ಜನ ಇದ್ದಕ್ಕಿದ್ದಂತೆ ಅವುಗಳನ್ನೆಲ್ಲ ಬದಿಗೊತ್ತಿ ಚುನಾವಣಾ ರಂಗಕ್ಕೆ ಧುಮುಕಿರುವುದು.

ಉದಾಹರಣೆಗೆ ನನ್ನ ಪರಿಚಿತರೊಬ್ಬರ ಮಿತ್ರ ತನ್ನ ಸರ್ಕಾರಿ ಕೆಲಸಕ್ಕೆ ರಾಜೀನಾಮೆ ನೀಡಿ ಚುನಾವಣೆಯಲ್ಲಿ ಸ್ಪರ್ಧಿಸುವುದೆಂದು ನಿರ್ಧರಿಸಿದ. ಅದಕ್ಕೆಂದು ಪ್ರಮುಖ ರಾಜಕೀಯ ಪಕ್ಷದ ನಾಯಕರ, ಅವರ ಮಗ, ಅಳಿಯ ಇತ್ಯಾದಿಗಳ ಪಾದಗಳಿಗೆ ಸಾಷ್ಟಾಂಗ ನಮಸ್ಕಾರ ಹಾಕಿದ, ಪಕ್ಷದ ಟಿಕೆಟ್‌ಗಾಗಿ ಬೇಡಿದ. ಆದರೆ ಆತನಿಗೆ ಟಿಕೆಟ್ ಸಿಗಲಿಲ್ಲ. ಬೇರೆ ಪಕ್ಷದವರೂ ಆತನತ್ತ ಮೂಸಿ ನೋಡಲಿಲ್ಲ. ಈಗ ಆತನಿಗೆ ಅತ್ತ ಸರ್ಕಾರಿ ನೌಕರಿಯೂ ಇಲ್ಲ, ಇತ್ತ ರಾಜಕೀಯಕ್ಕೆ ಎಂಟ್ರಿಯೂ ಇಲ್ಲ ಎಂಬಂತಾಗಿದೆ. ಆತನಷ್ಟೇ ಅಲ್ಲ, ಅದೆಷ್ಟೋ ಜನ ಚುನಾವಣೆ ಎಂಬ ಅಮಲನ್ನು ಏರಿಸಿಕೊಂಡು ಹುಚ್ಚರಂತಾಗಿರುವುದನ್ನು ಈ ಬಾರಿ ಕಂಡಿದ್ದೇವೆ. ಅದು ಎಂತಹ ಹುಚ್ಚು ಎಂದರೆ ಅವರಲ್ಲಿ ಹಲವರು ತಮ್ಮ ಬಯೋಡೇಟಾಗಳನ್ನು ನಮ್ಮ ಕಚೇರಿಗೆ ತಂದು ನಾವು ಅವರ ಪರವಾಗಿ ಪಕ್ಷಗಳ ನಾಯಕರಿಗೆ ಶಿಫಾರಸ್ಸು ಮಾಡಬೇಕೆಂದು ಕೇಳಿಕೊಂಡಿದ್ದಾರೆ. ಅದೆಲ್ಲ ಸಾಧ್ಯವಿಲ್ಲ ಎಂದು ಹೇಳಿ ಅವರನ್ನೆಲ್ಲ ಹಿಂದಕ್ಕೆ ಕಳುಹಿಸಿದ್ದೇವೆ.

ಹೋಗಲಿ, ಈ ಟಿಕೆಟ್ ಆಕಾಂಕ್ಷಿಗಳಿಗೆ ತಾವು ಚುನಾವಣೆಯಲ್ಲಿ ಗೆಲ್ಲಬಹುದು ಎಂಬ ಭರವಸೆಯಾದರೂ ಯಾವ ಆಧಾರದ ಮೇಲೆ ಮೂಡುತ್ತದೆ ಎಂದು ನಾವು ವಿಚಾರಿಸಿದಾಗ ನಮಗೆ ಇನ್ನೊಂದು ಅಚ್ಚರಿ ಕಾದಿತ್ತು. ಯಾಕೆಂದರೆ ಪ್ರತಿಯೊಬ್ಬ ಆಕಾಂಕ್ಷಿಯೂ "ನನ್ನ ಜಾತಿಯ ಇಷ್ಟು ಸಾವಿರ ಮತದಾರರಿದ್ದಾರೆ, ಪಕ್ಷದ ಇಷ್ಟು ಸಾವಿರ ಬೆಂಬಲಿಗರಿದ್ದಾರೆ. ಇನ್ನುಳಿಕೆ ಅಷ್ಟು ಸಾವಿರ ಮತಗಳು ಬಂದರೆ ಸಾಕು, ನಾನು ಗೆಲ್ಲುತ್ತೇನೆ" ಎಂಬಂತಹ ಲೆಕ್ಕಾಚಾರಗಳನ್ನು ಮಂಡಿಸಿದ್ದಾರೆ. ಅವರ ಈ ತರ್ಕ ಹೇಗಿದೆ ಎಂದರೆ ಮಾರ್ಕೆಟ್ಟಿಗೆ ಹೋಗಿ ಇಪ್ಪತ್ತು ರೂಪಾಯಿಗೆ ತರಕಾರಿ, ಐದು ರೂಪಾಯಿಗೆ ಸೊಪ್ಪು, ಇನ್ನೆರಡು ರೂಪಾಯಿಗೆ ನಿಂಬೆಹಣ್ಣು ಕೊಂಡುಕೊಳ್ಳುವಂತಹ ಲೆಕ್ಕ! ಇಲ್ಲಿ ಜಾತಿಗಳಿಗೂ ಜನರಿಗೂ, ಮಾರ್ಕೆಟ್‌ಗೂ ಮಾರಾಟಕ್ಕಿರುವ ವಸ್ತುವಿಗೂ ವ್ಯತ್ಯಾಸವೇ ಇಲ್ಲ ಎಂಬ ತಿಳುವಳಿಕೆ. ಆದರೂ ಅವರು 'ಜನಪ್ರತಿನಿಧಿ'ಯಾಗಲು ಬಯಸುತ್ತಾರೆ.

ಇದೆಲ್ಲಾ ಹುಚ್ಚೋ, ಭ್ರಮೆಯೋ, ತಾತ್ಕಾಲಿಕ ಅಮಲೋ?

ಈ ಬಾರಿಯಂತೂ ಹಣಬಲವೇ ಪ್ರಮುಖ ಪಾತ್ರ ವಹಿಸಲಿದೆ ಎಂಬುದನ್ನು ಗಣಿ ಧಣಿಗಳ, ಭೂಗಳ್ಳರ ಇತ್ತೀಚಿನ ವರ್ತನೆ ಸಾಬೀತುಪಡಿಸಿದೆ. ಇಲ್ಲಿ ಬೆಂಗಳೂರಿನಲ್ಲಿ ಕುಪೇಂದ್ರ ರೆಡ್ಡಿ ಎಂಬ ಲ್ಯಾಂಡ್ ಮಾಫಿಯಾದ ವ್ಯಕ್ತಿ ತನ್ನ ನಾಮಪತ್ರ ಸಲ್ಲಿಸುವ ದಿನದಂದು ತನ್ನೊಂದಿಗೆ ಸಾವಿರಾರು ಜನರನ್ನು ಕರೆದುಕೊಂಡು ಹೋದ. ಈ ಕುಪೇಂದ್ರ ರೆಡ್ಡಿ ಇಲ್ಲಿಯವರೆಗೂ ಯಾವುದೇ ಜನಪರ ಹೋರಾಟದೊಂದಿಗಾಗಲಿ, ನೀತಿ ನಿಯಮಗಳ ಬಗೆಗಿನ ಚರ್ಚೆಯಲ್ಲಾಗಲಿ ಎಂದೂ ಕಾಣಿಸಿಕೊಂಡವನಲ್ಲ. ಹೋಗಲಿ, ವಸತಿ ಇಲ್ಲದ ಬಡವರಿಗೆಂದು, ಶೋಷಿತ ವರ್ಗಗಳಿಗೆಂದು ತನ್ನ ಕೋಟ್ಯಂತ ರೂಪಾಯಿಗಳ ಆಸ್ತಿಯ ಒಂದು ಸಣ್ಣ ಪಾಲನ್ನೂ ಖರ್ಚು ಮಾಡಿದ ಉದಾಹರಣೆ ಇಲ್ಲ. ಆದರೂ ಈತನೊಂದಿಗೆ ಸಾವಿರಾರು ಜನ ಬರುತ್ತಾರೆಂದರೆ ಅವರೆಲ್ಲಾ ಬಾಡಿಗೆ ಬೆಂಬಲಿಗರೆಂಬುದರಲ್ಲಿ ಅನುಮಾನವೇ ಇಲ್ಲ.

ಈತನಂತೆಯೇ ಹರಪನಹಳ್ಳಿ ಕ್ಷೇತ್ರಕ್ಕೆ ತನ್ನ ಬಾಡಿಗೆ ಬೆಂಬಲಿಗರೊಂದಿಗೆ ಕರುಣಾಕರ ಎಂಬ ಮತ್ತೋರ್ವ ರೆಡ್ಡಿ ಮುತ್ತಿಗೆ ಹಾಕಿದ್ದಾನೆ. ತನ್ನ ನಾಮಪತ್ರ ಸಲ್ಲಿಸುವುದಕ್ಕೆಂದು ತನ್ನೊಂದಿಗೆ ಅಪಾರ ಸಂಖ್ಯೆಯಲ್ಲಿ ಜನರನ್ನು ಬಾಡಿಗೆ ಮೇಲೆ ಕರೆದುಕೊಂಡು ಬಂದ ಕರುಣಾಕರ ರೆಡ್ಡಿ ಅದಕ್ಕೆಂದು ಹಣದ ಹೊಳೆಯನ್ನೇ ಹರಿಸಿದ್ದಾನೆ. ಇದೆಲ್ಲ ಸೂಚಿಸುವುದು ಯಾವುದನ್ನು ಗೊತ್ತಾ? ಇವತ್ತು ಬಾಡಿಗೆ ಬೆಂಬಲಿಗರು ಸಿಗುತ್ತಾರೆ, ನಾಳೆ ಬಾಡಿಗೆ ಮತದಾರರೂ ಸಿಗುತ್ತಾರೆ ಎಂಬ ಧೋರಣೆ.


ಇವರೆಲ್ಲಾ ಅಧಿಕಾರದ ಅಮಲೇರಿಸಿಕೊಂಡ ತಲೆಕೆಟ್ಟ ಜನ. ಇವರ ಬಗ್ಗೆ ಎಚ್ಚರದಿಂದಿರಿ.

ಇಂಥ ಸನ್ನಿವೇಶದಲ್ಲಿ ಇದನ್ನು ಪ್ರಜಾಪ್ರಭುತ್ವ ಎಂದಾಗಲಿ, ಜನರ ಅಭಿಮತವನ್ನು ಸೂಚಿಸುವ ಪ್ರಕ್ರಿಯೆ ಎಂದಾಗಲಿ ನಂಬುವುದೇ ಕಷ್ಟವಾಗುತ್ತಿದೆ. ಇದನ್ನೆಲ್ಲಾ ಕಂಡು ಎಷ್ಟು ಬೇಸರವಾಗಿದೆ ಎಂದರೆ ಈ ಬಾರಿ ನನ್ನ ಓಟು ಎಲ್ಲಿದೆ? ಅದಿನ್ನೂ ಕಳೆದ ಬಾರಿಯಂತೆ ಬನಶಂಕರಿಯಲ್ಲಿಯೇ ಇದೆಯೇ? ಅಥವಾ ಅಲ್ಲಿ ನನ್ನ ಹೆಸರನ್ನು ರದ್ದುಪಡಿಸಲಾಗಿದೆಯೇ ಎಂಬುದರ ಬಗ್ಗೆ ವಿಚಾರಿಸಲೂ ಹೋಗಿಲ್ಲ. ಪ್ರತಿಬಾರಿ ತಪ್ಪದೇ ನನ್ನ ಮತದಾನದ ಹಕ್ಕನ್ನು ಚಲಾಯಿಸುವ ನನಗೆ ಈ ಬಾರಿ ಆಸಕ್ತಿಯೇ ಇಲ್ಲದಂತಾಗಿದೆ.

ಇದೆಲ್ಲ ಸ್ವಲ್ಪ ಸಿನಿಕಲ್ ಅನಿಸುತ್ತಿದೆ. ಆದ್ದರಿಂದ ಒಂದು ತಮಾಷೆಯ ಸಂಗತಿ ಬಗ್ಗೆ ಹೇಳಿ ಮುಗಿಸುತ್ತೇನೆ. ಕಳೆದ ಬಾರಿ 2004 ರಲ್ಲಿ ಚುನಾವಣೆಗಳು ಘೋಷಣೆಯಾದಾಗ ಒಂದು ದಿನ ಎಂ.ಪಿ. ಪ್ರಕಾಶರು ಇದ್ದಕ್ಕಿದ್ದಂತೆ ಫೋನ್ ಮಾಡಿದರು. ಪರಸ್ಪರ ಕುಶಲೋಪರಿ ವಿಚಾರಿಸಿಕೊಂಡ ನಂತರ ಅವರು "ನಾನು ಶಿವಮೊಗ್ಗೆಯಲ್ಲಿದ್ದೇನೆ. ಇಲ್ಲಿ ಹಲವರು ಗೌರಿನ ಯಾಕೆ ಎಂ.ಪಿ. ಚುನಾವಣೆಗೆ ಜನತಾದಳದಿಂದ ನಿಲ್ಲಿಸಬಾರದು ಅಂತಿದ್ದಾರೆ. ಏನಂತೀಯಾ ಗೌರಿ?" ಎಂದು ಕೇಳಿದ್ದರು. ನಾನು ಜೋರಾಗಿ ನಕ್ಕು "ನನಗೆ ತಲೆ ಕೆಟ್ಟಿಲ್ಲ" ಎಂದಿದ್ದೆ.

ಕಳೆದ ತಿಂಗಳು ಅಂತಹದ್ದೇ ಒಂದು ಪ್ರಸಂಗ ನಡೆಯಿತು. ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಲು ನನಗೆ ಆಸಕ್ತಿ ಇದ್ದರೆ ಸೂಚಿಸಬೇಕೆಂದು ಒಬ್ಬರು ಹೇಳಿದರು. ಅವರು ನನ್ನನ್ನು ರೈಲು ಹತ್ತಿಸಲು ಹಾಗೆ ಹೇಳಿದರೋ, ಅಥವಾ ನಿಜವಾಗಲೂ ನನ್ನನ್ನು ವಿಚಾರಿಸಲು ಅವರಿಗೆ ಆದೇಶ ನೀಡಲಾಗಿತ್ತೋ ಗೊತ್ತಿಲ್ಲ. ಅದರ ಬಗ್ಗೆ ವಿಚಾರಿಸಲೂ ನಾನು ಹೋಗಲಿಲ್ಲ. ಬದಲಾಗಿ "ನನಗೆ ತಲೆ ಕೆಟ್ಟಿಲ್ಲ" ಎಂದು ಮತ್ತೆ ಮುಗುಳ್ನಗುತ್ತಲೇ ಹೇಳಿ ಅವರನ್ನು ಕಳುಹಿಸಿದೆ. ಆದರೆ ಇವತ್ತು ಅದೇ ಪ್ರಶ್ನೆಗೆ "ನಾನು ಮಮತಾ ನಿಚಾನಿಯೇ?" ಎಂದು ಉತ್ತರಿಸುತ್ತಿದ್ದನೋ ಏನೋ?! ■

ರಾಜಾಜಿನಗರದಲ್ಲಿ ಬಾಮಾ ಹರೀಶನ ಮಂಗಾಟ




ಐದು ಸಾವ್ರ ಕೊಟ್ರೆ ನಾಮಿನೇಷನ್ ವಾಪಸ್!

ಬಾಮಾ ಹರೀಶ್ ಎಂಬ ಕಮಂಗಿಯನ್ನು ಕರೆದು ರಾಜಾಜಿನಗರದ ಎಮ್ಮೆಲ್ಲೆಯಾಗು ಎಂದು ಸಮಾಜವಾದಿ ಪಾರ್ಟಿಯ ಟಿಕೆಟ್ ಕೊಟ್ಟ ತಪ್ಪಿಗೆ ನಾಯಕ ಬಂಗಾರಪ್ಪ ಹಣೆಹಣೆ ಚಚ್ಚಿಕೊಳ್ಳುತ್ತಿದ್ದಾರೆ!

ಈ ಹಿಂದೆ ಅದೇನೋ ಕಾವಲು ಸಮಿತಿಗೆ ಅಧ್ಯಕ್ಷನಾಗಿದ್ದ ಬಾಮಾ ಪುಡಿಗಾಸಿನ ಆಸೆಗೆ ಬಿದ್ದು ರಾತ್ರೋರಾತ್ರಿ ಪಾರ್ವತಮ್ಮನವರಿಗೆ ದೋಖಾ ಕೊಟ್ಟು ಗಂಗರಾಜು ಭಟ್ಟಂಗಿಯಾಗಿದ್ದ. ಆನಂತರ ಗಂಗರಾಜುವಿನಿಂದ ಏನೂ ಗಿಟ್ಟದೇ ಹೋದಾಗ ಕುಡಿದು ಚಿತ್ತಾಗಿ ಗಂಗರಾಜುವನ್ನು ಅಮ್ಮಾ ಅಕ್ಕಾ ಎಂದು ಬಯ್ದಾಡಿದ್ದ. ಆ ಕಾರಣಕ್ಕೇ ಗಂಗರಾಜು ರೌಡಿ ಗ್ಯಾಂಗಿನಿಂದ ಮುಖಾ ಮೂತಿ ಚಚ್ಚಿಸಿಕೊಂಡ. ತಾನೊಬ್ಬ ಫಿಲ್ಮ್ ಪ್ರೊಡ್ಯೂಸರ್ ಎಂದುಕೊಂಡೇ ಕಂಡಕಂಡವರನ್ನು ಮುಂಡಾಯಿಸಿದ. ಬಾಮಾ ಹರೀಶ್ ನಿನ್ನೆ ಮೊನ್ನೆಯ ತನಕ ದೇವೇಗೌಡರ ಭಜನೆ ಮಾಡಿಕೊಂಡಿದ್ದ.

ಇಂಥ ಕಮಂಗಿಗೆ ರಾಜಾಜಿನಗರದ ಜೆಡಿಎಸ್ ಟಿಕೆಟ್ ಕೊಡಲು ದೇವೇಗೌಡರಿಗೇನೂ ತಲೆ ಕೆಟ್ಟಿಲ್ಲವಲ್ಲ? ಆದರೆ ಬಂಗಾರಪ್ಪನವರಿಗೊಬ್ಬ ಅಭ್ಯರ್ಥಿ ಬೇಕಿತ್ತಲ್ಲ. ಬಾಮಾ ರೈಲು ಬಿಟ್ಟಿದ್ದನ್ನೇ ನಂಬಿ ರಾಜಾಜಿನಗರದ ಟಿಕೆಟ್ ಕೊಟ್ಟಿದ್ದೂ ಅಲ್ಲದೇ ನಿನ್ನ ತಮ್ಮ, ಚಿಕ್ಕಪ್ಪ, ದೊಡ್ಡಪ್ಪ, ಮಾವ ಯಾರ್‍ಯಾರಿದ್ದಾರೋ ಅವರೆಲ್ಲರನ್ನೂ ಕರೆಕೊಂಡು ಬಾ ಅವರೆಲ್ಲರಿಗೂ ಬೆಂಗಳೂರಿನ ಒಂದೊಂದು ಕ್ಷೇತ್ರದಿಂದ ಸಮಾಜವಾದಿ ಪಾರ್ಟಿ ಟಿಕೆಟ್ ಕೊಡ್ತೀನಿ ಅಂದರು. ಬಹುಶಃ 'ಬಂ' ಗ್ರಾಚಾರ ನೆಟ್ಟಗಿತ್ತೋ ಏನೋ, ಸದ್ಯ ಬಾಮಾ ಒಬ್ಬನೇ ಟಿಕೆಟ್ ಗಿಟ್ಟಿಸಿದ್ದ. ಯಾವತ್ತು ನಾಮಿನೇಷನ್ ಮುಗಿದು ಎಲ್ಲಾ ಪಾರ್ಟಿಗಳ ಅಭ್ಯರ್ಥಿಗಳೂ ಪ್ರಚಾರಕ್ಕೆ ನಿಂತರೋ ಬಾಮಾ ತನ್ನ ವರಸೆ ಶುರು ಹಚ್ಚಿಕೊಂಡ.



ಯಾರಾದ್ರೂ ಐದು ಸಾವಿರ ರೂಪಾಯಿ ಕೊಟ್ರೆ ಅವರ ಪರವಾಗಿ ಬಾಮಾ ನಾಮಿನೇಷನ್ ವಾಪಸ್ಸು ತಗೊಳ್ಳುತ್ತಾನಂತೆ! ಹಾಗಂತ ಬಹಿರಂಗವಾಗೇ ತನ್ನನ್ನು ಹರಾಜಿಗಿಟ್ಟ.

ಪ್ರಾರಂಭದಲ್ಲಿ ಕಾಂಗ್ರೆಸ್ಸಿನ ಪದ್ಮಾವತಿ, ಬಿಜೆಪಿಯ ಸುರೇಶ್ ಕುಮಾರ್ ಬಳಿ ಡೀಲು ಕುದುರಿಸಲು ನೋಡಿದ ಬಾಮಾನಿಗೆ ಎಂಥಾ ನಿರಾಶೆಯಾಯ್ತೆಂದರೆ 'ಅಲ್ಲಯ್ಯಾ ನಿನ್ನ ಮನೆಯವರೇ ನಿನಗೆ ಓಟು ಕೊಡಲ್ಲ, ಇನ್ನು ನಾವ್ಯಾಕೆ ದುಡ್ಡು ಕೊಡಬೇಕು?, ಎಂದು ಬಿಜೆಪಿ-ಕಾಂಗ್ರೆಸ್ಸಿಗರಿಬ್ಬರೂ ಉಗಿದಟ್ಟಿದ್ದಾರೆ.

ಇಷ್ಟಾದ ಮೇಲೆ ಒಂದಷ್ಟಾದರೂ ಬರಲಿ ಎಂಬುದು ಬಾಮಾನ ಲೆಕ್ಕಾಚಾರ. "ನಾಮಿನೇಷನ್ನಿಗೆ ಖರ್ಚಾಗಿರೋದೇ ಐದು ಸಾವ್ರ. ಯಾರು ಐದು ಸಾವ್ರ ಕೊಡ್ತಾರೋ ನಾನು ಅವರನ್ನ ಬೆಂಬಲಿಸಿ ರಿಟೈರಾಗ್ತೀನಿ" ಅಂತ ಟಾಂಟಾಂ ಮಾಡುತ್ತಿದ್ದಾನೆ.


ಯಾರ ದುರದೃಷ್ಟವೋ ಗೊತ್ತಿಲ್ಲ; ಕಮಂಗಿ ಬಾಮಾನನ್ನು ಐದು ಸಾವಿರಕ್ಕೂ ಖರೀದಿ ಮಾಡುವವರೇ ರಾಜಾಜಿನಗರದಲ್ಲಿ ಗತಿಯಿಲ್ಲ! ■

ರಾಮದಾಸ್ ಹತ್ರ ದುಡ್ಡಿಲ್ಲ!

ಮೈಸೂರಿನ ಕೃಷ್ಣರಾಜ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುತ್ತಿರುವ ಬಿಜೆಪಿಯ ಎಸ್.ಎ. ರಾಮದಾಸ್ ಹತ್ತಿರ ಚುನಾವಣೆಗೆ ಖರ್ಚು ಮಾಡುವುದಕ್ಕೆ ಸಾಕಷ್ಟು ದುಡ್ಡಿಲ್ಲವಂತೆ. ಅವರ ಹತ್ತಿರ ಸ್ವಂತ ಕಾರಾಗಲೀ, ಮನೆಯಾಗಲೀ ಇಲ್ಲವಂತೆ. ಮೂವತ್ತು ಸಾವಿರ ಬೆಲೆ ಬಾಳುವ 1992ರ ಮಾಡೆಲ್ಲಿನ ಒಂದು ಹೀರೋ ಹೊಂಡ ಮೋಟರ್ ಸೈಕಲ್, ಇಪ್ಪತ್ತೈದು ಸಾವಿರ ದುಡ್ಡು ಬ್ಯಾಂಕಿನಲ್ಲಿ 2.8 ಲಕ್ಷ ರೂಪಾಯಿ ಠೇವಣಿ, 200 ಗ್ರಾಮ್ ಬಂಗಾರ, 49,000 ರೂ. ಬೆಲೆಬಾಳುವ 3.39 ಎಕರೆ ಭೂಮಿ ಮಾತ್ರ ಇದೆಯಂತೆ. ಹಾಗಂತ ಅವರು ನಾಮಪತ್ರದ ಜೊತೆ ಸಲ್ಲಿಸಿರುವ ಅಫಿಡವಿಟ್ಟನಲ್ಲಿ ಘೋಷಿಸಿಕೊಂಡಿದ್ದಾರೆ. ಅದರ ಪ್ರಕಾರ ಅವರ ಒಟ್ಟು ಆಸ್ತಿ 7.33 ಲಕ್ಷ ರೂಪಾಯಿ ಮಾತ್ರ. ಚುನಾವಣಾ ಆಯೋಗ ಎಲೆಕ್ಷನ್‌ನಲ್ಲಿ ಖರ್ಚು ಮಾಡುವುದಕ್ಕೆ 10 ಲಕ್ಷ ರೂಗಳ ಮಿತಿಯನ್ನು ವಿಧಿಸಿದೆ. ಅದಕ್ಕಿಂತ ಹೆಚ್ಚು ಖರ್ಚು ಮಾಡಕೂಡದು. ಆದರೆ, ಪಾಪ ರಾಮದಾಸ್ ಹತ್ತಿರ ಅಷ್ಟೂ ದುಡ್ಡಿಲ್ಲವಲ್ಲವಲ್ಲ? ಇದು ಒಂದು ಸ್ಟೋರಿ.

ಈಗ ಇನ್ನೊಂದು ಸ್ಟೋರಿ ಕೇಳಿ...

ಏಪ್ರಿಲ್ 19 ಬೆಳಗಿನ ಜಾವ 1.15ರ ಸುಮಾರಿಗೆ ಮೈಸೂರಿನ ಅಶೋಕಪುರಂ



ಹತ್ತಿರ ಪೊಲೀಸರು ಒಂದು ವ್ಯಾನನ್ನು ಸೀಜ್ ಮಾಡಿದ್ದಾರೆ. ಅದರಲ್ಲಿ ಐದು ಲಕ್ಷ ರೂ.ಗಳ ನಗದು ದೊರೆತಿದೆ. ಜೊತೆಗೆ ರಾಮದಾಸ್ ಅವರಿಗೆ ಮತ ಹಾಕಬೇಕೆಂದು ಯಾಚಿಸುವ ಕರಪತ್ರಗಳ ಬಂಡಲ್ ಮತ್ತು ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿ, ಅವರ ಫೋನ್ ನಂಬರ್‌ಗಳು, ವಿಳಾಸಗಳು ಎಲ್ಲ ದೊರೆತಿದೆ. ಜೊತೆಗೆ ದೊರೆತಿರುವ ಡಿಜಿಟಲ್ ಕ್ಯಾಮರಾದಲ್ಲಿ ರಾಮದಾಸ್ ಅವರ ಮೂರು ಭಾವಚಿತ್ರಗಳಿವೆ. ಇದಲ್ಲದೆ, ವ್ಯಾನಿನ ಡ್ರೈವರ್ ಜೇಬಿನಲ್ಲಿ 44,800 ರೂಪಾಯಿ ಕೂಡ ದೊರೆತಿದೆ.

ಇನ್ನೊಂದು ವಿಚಾರ. ವ್ಯಾನಿನಲ್ಲಿ ಇನ್ಶೂರೆನ್ಸ್ ಬಾಂಡುಗಳು ಮತ್ತು ಮುಖ್ಯವಾಗಿ ರಾಮದಾಸ್ ಕ್ಷೇತ್ರದ ಜನರಿಗೆ ರಾಮಾಯಣ ಮತ್ತು ಯುಗಾದಿ ಹಬ್ಬದ ಶುಭಾಶಯಗಳನ್ನು ಕೋರಿರುವ ಗ್ರೀಟಿಂಗ್ ಕಾರ್ಡುಗಳು ದೊರೆತಿವೆ.

ರಾಮದಾಸ್ ಹತ್ತಿರ ದುಡ್ಡಿಲ್ಲ ಅಂತ ಅವರು ಸಲ್ಲಿಸಿರುವ ಅಫಿಡವಿಟ್ಟು ಹೇಳುತ್ತದೆ. ಹಾಗಾದರೆ, ವ್ಯಾನಿನಲ್ಲಿ ಸೀಜ್ ಆದ ದುಡ್ಡು ಯಾರದ್ದು?

ನೆನಪಿರಲಿ...,


- 1999-2000ದಲ್ಲಿ ಒಂದು ನಿರ್ದಿಷ್ಟ ಅವಧಿಯಲ್ಲಿ ತಮ್ಮ ಆಸ್ತಿಪಾಸ್ತಿಗಳ ವಿವರವನ್ನು ಘೋಷಿಸಬೇಕೆಂದು ಲೋಕಾಯುಕ್ತರು ಎಲ್ಲ ಶಾಸಕರಿಗೆ ಆದೇಶ ಹೊರಡಿಸಿದ್ದರು. ಆ ಸಮಯದಲ್ಲಿ ಆಸ್ತಿ ವಿವರಗಳನ್ನು ಸಲ್ಲಿಸದಿರುವ 33 ಶಾಸಕರಲ್ಲಿ ರಾಮದಾಸ್ ಅವರೂ ಒಬ್ಬರಾಗಿದ್ದರು.
- ಚುನಾವಣಾ ನೀತಿಸಂಹಿತೆ ಜಾರಿಗೆ ಬಂದ ಮೇಲೆ ಸೀರೆ, ಪಂಚೆ, ದುಡ್ಡು ಹಂಚಿ ಮತದಾರರಿಗೆ ಆಮಿಷ ತೋರಿಸುವುದು ಅಪರಾಧವಾಗುತ್ತದೆಯಲ್ಲವೆ? ಆದಕ್ಕೆಂದೆ, ಶ್ರೀಮಾನ್ ರಾಮದಾಸ್ ಅವರು ಈ ಚುನಾವಣೆಯಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಗೆ ಬರುವ ಮೊದಲೇ ಸಾವಿರಾರು ಸೀರೆಗಳನ್ನು ಹಂಚಿ ಹೊಸ ತಂತ್ರವೊಂದರ ಪರಂಪರೆಗೆ ನಾಂದಿ ಹಾಡಿದ್ದಾರೆ. ■

ಕುಮಾರಸ್ವಾಮಿಯ ಕುಟುಂಬದ ಆಸ್ತಿ: 49.72 ಕೋಟಿ!

ಸಾಲ: 26.05 ಕೋಟಿ!!

ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ರಾಮನಗರ ಕ್ಷೇತ್ರಕ್ಕೆ ನಾಮಪತ್ರ ಸಲ್ಲಿಸಿದ್ದಾರೆ. ಜೊತೆಗೆ ಸಲ್ಲಿಸಿರುವ ಅಫಿಡವಿಟ್ಟನಲ್ಲಿ ತಮ್ಮ ಆಸ್ತಿಯ ವಿವರಗಳನ್ನು ಘೋಷಿಸಿಕೊಂಡಿದ್ದಾರೆ. ಆದರ ಪ್ರಕಾರ:

- ಕುಮಾರಸ್ವಾಮಿಯವರು ಪತ್ನಿ ಅನಿತಾ ಕುಮಾರಸ್ವಾಮಿಗೆ 1.33 ಕೋಟಿ, ತನ್ನ ಅತ್ತಿಗೆ ಭವಾನಿಗೆ 3.26 ಲಕ್ಷ, ತನ್ನ ಸಹೋದರ ಎಚ್.ಡಿ. ರಮೇಶ್‌ಗೆ 1 ಕೋಟಿ, ಬ್ಯಾಂಕೊಂದಕ್ಕೆ 10 ಲಕ್ಷ, ತನ್ನ ಹೆಂಡತಿಯ ಒಡೆತನದಲ್ಲಿರುವ ಕಸ್ತೂರಿ ಮೀಡಿಯ ಕಂಪೆನಿಗೆ 2.59 ಲಕ್ಷ ಸಾಲ ಹಿಂದಿರುಗಿಸಬೇಕಂತೆ.
- ಅವರ ಹೆಂಡತಿ ಅನಿತಾ ಕುಮಾರಸ್ವಾಮಿಯವರು ವಿವಿಧ ಕಾರ್ಪೋರೇಟ್ ಸಂಸ್ಥೆಗಳಿಂದ 14.13 ಕೋಟಿ ರೂಪಾಯಿಗಳ ಸಾಲ ಹಾಗೂ 6.53 ಕೋಟಿ ವೈಯಕ್ತಿಕ ಸಾಲವನ್ನು ಪಡೆದುಕೊಂಡಿದ್ದಾರಂತೆ.
- ಮಗ ನಿಖಿಲ್ ಗೌಡ ತನ್ನ ತಾಯಿ ಅನಿತಾಗೆ ಒಂದು ಕೋಟಿ ಸಾಲ ಕೊಡಬೇಕಂತೆ. ಅಲ್ಲದೇ ಈತನಿಗೆ ಯತೀಶ್ ಎಂಬುವವರಲ್ಲಿ 65 ಲಕ್ಷಗಳ ಸಾಲವೂ ಇದೆಯಂತೆ.
- ಕುಮಾರಸ್ವಾಮಿಯವರ ಆಸ್ತಿ 15.36 ಕೋಟಿ, ಅನಿತಾ ಕುಮಾರಸ್ವಾಮಿಯವರ ಆಸ್ತಿ 31.86 ಕೋಟಿ, ನಿಖಿಲ್ ಗೌಡ ಅವರ ಆಸ್ತಿ 2.67 ಕೋಟಿಯಂತೆ. ಕುಮಾರಸ್ವಾಮಿಗೆ ಕೆತಗನಹಳ್ಳಿಯಲ್ಲಿ 50 ಎಕರೆ ಜಮೀನು, ಬೆಂಗಳೂರಿನ ಜೆ.ಪಿ. ನಗರದಲ್ಲಿ 10,000 ಚದರ ಅಡಿಗಳಷ್ಟು ದೊಡ್ಡದಾದ ಮನೆ ಹಾಗೂ ಒಂದು ಕೈಗಾರಿಕಾ ನಿವೇಶನ ಮಾತ್ರ ಇದೆಯಂತೆ. ಅವರು 750 ಗ್ರಾಮ್ ಚಿನ್ನ ಮತ್ತು 12.5 ಕೆ.ಜಿ ಬೆಳ್ಳಿ ಹೊಂದಿದ್ದರೆ ಮಗ ನಿಖಿಲ್ ಗೌಡ 850 ಗ್ರಾಮ್ ಚಿನ್ನ ಮತ್ತು 16 ಕೆ.ಜಿ ಬೆಳ್ಳಿ ಹೊಂದಿದ್ದಾರೆ. ಇನ್ನು ಅವರ ಪತ್ನಿ ಅನಿತಾ ಕುಮಾರಸ್ವಾಮಿ 1.3 ಕೆ.ಜಿ ಬಂಗಾರ ಹೊಂದಿದ್ದಾರಂತೆ.
- ಕುಮಾರಸ್ವಾಮಿಗೆ 13.77 ಕೋಟಿ, ಹೆಂಡತಿ ಅನಿತ ಕುಮಾರಸ್ವಾಮಿಗೆ 3.18 ಕೋಟಿ ಹಾಗೂ ಮಗ ನಿಖಿಲ್‌ಗೆ 1.53 ಲಕ್ಷ ಬ್ಯಾಂಕ್ ಠೇವಣಿ ಇದೆಯಂತೆ.




ಇದಿಷ್ಟು ಅವರು ಘೋಷಿಸಿಕೊಂಡಿದ್ದು. ಉಳಿದಂತೆ ಘೋಷಿಸಿಕೊಳ್ಳದಿದ್ದುದೆಷ್ಟು ಎಂಬುದು ನಿಮ್ಮ ನಿಮ್ಮ ವಿವೇಚನೆಗೆ ಬಿಟ್ಟದ್ದು.

ಹಾಸನ: ರೇವಣ್ಣನಿಗೆ ಚಳಿ ಜ್ವರ ಶುರು!

ದೇವೇಗೌಡರ ಪುತ್ರ ರತ್ನ ಎಚ್.ಡಿ. ರೇವಣ್ಣನಿಗೆ ರಾತ್ರೋರಾತ್ರಿ ಚಳಿ ಜ್ವರ ಶುರುವಾಗಿಬಿಟ್ಟದೆ. ಇದಕ್ಕೆ ಕಾರಣ ಈ ಚುನಾವಣೆಯಲ್ಲಿ ಆತನ ವಿರುದ್ಧ ಕಾಂಗ್ರೆಸ್ ಪಕ್ಷವು ಅನುಪಮ ಎಂಬ ಬಾಣವನ್ನು ಬಿಟ್ಟಿರುವುದು.

ಹಾಸನ ಜಿಲ್ಲೆಯ ಹಿಟ್ಲರ್ ಎಂದೇ ಪ್ರಸಿದ್ಧವಾಗಿರುವ ರೇವಣ್ಣ ಕ್ಷೇತ್ರ ಪುನರ್ವಿಂಗಡನೆಯ ಮೂಲಕ ತನ್ನ ಹೊಳೆನರಸೀಪುರ ಕ್ಷೇತ್ರವನ್ನು ಭದ್ರ ಮಾಡಿಕೊಂಡಿದ್ದ. ಸಿದ್ದರಾಮಯ್ಯ ಜೆಡಿಎಸ್ ತೊರೆದ ಮೇಲೆ ಇಡೀ ಕುರುಬ ಜನಾಂಗವನ್ನು ಹಿಂದೆಂದಿಗಿಂತಲೂ ಕಠೋರವಾಗಿ ದ್ವೇಷಿಸತೊಡಗಿದ. ನೇಮಕಾತಿಗಳಲ್ಲಿ, ಅವಕಾಶಗಳಲ್ಲಿ, ಕಂಟ್ರಾಕ್ಟು ನೀಡುವಲ್ಲಿ – ಹೀಗೆ ಪ್ರತೀ ವಲಯದಲ್ಲೂ ಕುರುಬ ಜನಾಂಗವನ್ನು ವ್ಯವಸ್ಥಿತವಾಗಿ ವಂಚಿಸತೊಡಗಿದ. ಬರುವ ಚುನಾವಣೆಯಲ್ಲಿ ಕುರುಬರು ತನ್ನ ವಿರುದ್ಧ ಓಟು ಹಾಕುವುದು ಗ್ಯಾರಂಟಿ ಎಂದುಕೊಂಡು ಹೊಳೆನರಸೀಪುರ ಕ್ಷೇತ್ರದಲ್ಲಿ ಕುರುಬರೇ ಪ್ರಧಾನವಾಗಿದ್ದ ಹಳ್ಳಿ ಮೈಸೂರು ಹೋಬಳಿಯನ್ನು ಪಕ್ಕದ ಅರಕಲಗೂಡು ಕ್ಷೇತ್ರಕ್ಕೆ ವರ್ಗಾಯಿಸುವ ಮೂಲಕ ಆ ಅಡೆತಡೆಯನ್ನೂ ನಿವಾರಿಸಿಕೊಂಡಿದ್ದ. ಜೊತೆಗೆ ಗೌಡ ಸಮುದಾಯ ಜಾಸ್ತಿ ಇರುವ ಹಾಸನ ತಾಲ್ಲೂಕಿನ ದುದ್ದ ಮತ್ತು ಶಾಂತಿ ಗ್ರಾಮಗಳನ್ನು ತನ್ನ ಹೊಳೆನರಸೀಪುರ ಕ್ಷೇತ್ರಕ್ಕೆ ಸೇರಿಸಿಕೊಂಡು ತನ್ನ ಓಟ್ ಬ್ಯಾಂಕ್‌ನ್ನು ಭದ್ರ ಮಾಡಿಕೊಂಡಿದ್ದ.




ಅನುಪಮಾ

ಅಷ್ಟೇ ಏಕೆ, ತಾನು ಅಧಿಕಾರದಲ್ಲಿದ್ದಾಗ ಕೋಟಿ ಕೋಟಿ ಹಣವನ್ನು ಮಂಜೂರು ಮಾಡಿಸಿಕೊಂಡು ಅಭಿವೃದ್ಧಿಯ ನಾಟಕವಾಡಿ ಜನಮನ ಗೆಲ್ಲಲು ಹಗಲಿರುಳೂ ಪ್ರಯತ್ನಿಸಿದ್ದ. ಆದರೆ, ದುರಂತ ಎಂದರೆ ಹೀಗೆ ಹರಿದು ಬಂದ ಹಣ ಕ್ಷೇತ್ರದ ಅಭಿವೃದ್ಧಿಗೆ ಸಮರ್ಪಕವಾಗಿ ವಿನಿಯೋಗವಾಗದೇ ರೇವಣ್ಣ ಮತ್ತವನ ಹಿಂಬಾಲಕ ಕಾಂಟ್ರಾಕ್ಟರ್‌ಗಳ ಜೇಬು ತುಂಬುವಲ್ಲಿಯೇ ಬಳಕೆಯಾಗಿಹೋಯಿತು. ಅಧಿಕಾರ ಇರಲಿ, ಇಲ್ಲದಿರಲಿ ಆತ ಕ್ಷೇತ್ರದಲ್ಲಿ ಪವರ್‌ಫುಲ್ ಆಗಿಯೇ ಇದ್ದ.

ಕ್ಷೇತ್ರಪುನರ್ವಿಂಗಡನೆ, ಅಭಿವೃದ್ಧಿಕಾರ್ಯ, ದರ್ಪ ದೌರ್ಜನ್ಯ– ಇವುಗಳನ್ನೇ ಬಂಡವಾಳ ಮಾಡಿಕೊಂಡಿರುವ ರೇವಣ್ಣ ತನ್ನ ವಿರುದ್ಧ ಯಾರೇ ಸ್ಪರ್ಧಿಸಿದರೂ ಭಾರಿ ಅಂತರದಲ್ಲಿ ಸೋಲಿಸಿ ಗೆಲುವಿನ ಕುದುರೆ ಏರುತ್ತೇನೆಂಬ ಹುಂಬು ವಿಶ್ವಾಸದಿಂದ ಬೀಗುತ್ತಿದ್ದ. ಆದರೆ, ಇಂಥ ರೇವಣ್ಣನಿಗೆ ಅನುಪಮ ಎಂಬ ಹೆಂಗಳೆ ಮುಂದೊಂದು ದಿನ ತನ್ನ ಪ್ರಯತ್ನಗಳೆಲ್ಲವನ್ನು ಗಾಳಿಗೆ ತೂರಿ ಬೆವರಿಳಿಸುತ್ತಾಳೆ ಎಂದು ಆತ ಎಂದೆಂದೂ ಅಂದುಕೊಂಡಿರಲಿಲ್ಲ ಅಂತ ಕಾಣುತ್ತೆ. ಆದರೆ, ಅದೇ ವಾಸ್ತವವಾಗುತ್ತಿರುವ ಎಲ್ಲ ಲಕ್ಷಣಗಳೂ ಕಾಣುತ್ತಿವೆ.

ರೇವಣ್ಣನ ರೌಡಿಸಂ, ದರ್ಪದೌರ್ಜನ್ಯ, ದುಡ್ಡು ಮತ್ತು ವರ್ಚಸ್ಸುಗಳಿಗೆ ಸಿಂಪಥಿಯ ಬಾಣವನ್ನು ಬಿಡಲು ಕಾಂಗ್ರೆಸ್ ನಿರ್ಧರಿಸಿದೆ. ಅದಕ್ಕೆಂದೇ ಮಾಜಿ ಸಂಸದ ಹಿರಿಯ ರಾಜಕಾರಣಿ ದಿವಂಗತ ಪುಟ್ಟಸ್ವಾಮಿಗೌಡರ ಸೊಸೆ ಹಾಗೂ ದಿವಂಗತ ಮಹೇಶ್ ಅವರ ಪತ್ನಿಯಾದ ಅನುಪಮ ಆವರನ್ನು ರೇವಣ್ಣನ ವಿರುದ್ಧ ಕಣಕ್ಕಿಳಿಸಿದೆ. ಮಾವ ಮತ್ತು ಗಂಡ ಇಬ್ಬರೂ ಮರಣ ಹೊಂದಿರುವುದರಿಂದ ಅನುಪಮಗೆ ಇಡೀ ಕ್ಷೇತ್ರದಾದ್ಯಂತ ಸಿಂಪಥಿ ಅಲೆ ಉದ್ಭವವಾಗಿದೆ. ರೇವಣ್ಣನ ದರ್ಬಾರಿಗಿಂತ ಈ ಹೆಂಗಳೆಯೇ ಎಷ್ಟೋ ವಾಸಿ ಎಂದು ಜನ ಅನುಪಮ ಕಡೆಗೆ ವಾಲಿರುವುದನ್ನು ಕಂಡು ರೇವಣ್ಣ ಬೆಚ್ಚಿಬಿದ್ದಿದ್ದಾನೆ.

ಯಾವಾಗ ಕಾಂಗ್ರೆಸ್ ಅನುಪಮ ಹೊಳೆನರಸೀಪುರದ ಅಭ್ಯರ್ಥಿ ಎಂದು ಘೋಷಿಸಿತೋ ಆಗಲೇ ರೇವಣ್ಣನಿಗೆ ಅರ್ಧದಷ್ಟು ಆತಂಕ ಶುರುವಾಗಿತ್ತು. ಯಾವಾಗ ಅನುಪಮ ಹಳ್ಳಿ ಹಳ್ಳಿ ತಿರುಗಿ ಮತದಾರರ ಮನ ಗೆಲ್ಲಲು ಶುರು ಮಾಡಿದಳೋ ಈತ ನಿಜಕ್ಕೂ ಕುಸಿದು ಹೋದ. ಇನ್ನು ತಾನು ಗೆಲ್ಲಬೇಕೆಂದರೆ ಭಗವಂತನ ಕರುಣೆಯಿಂದ ಮಾತ್ರ ಸಾಧ್ಯ ಎಂದುಕೊಂಡು ಹೋಮ ಹವನಗಳನ್ನು ಶುರುಮಾಡಿಕೊಂಡ. ಅಷ್ಟು ಸಾಲದೆಂಬಂತೆ ಸೀದಾ ಶೃಂಗೇರಿಗೆ ಹೋಗಿ ಪೂಜೆ ಮಾಡಿಸಿ ಶಾರದಾಂಬೆಯನ್ನೂ ಒಲಿಸಿಕೊಳ್ಳುವ ಪ್ರಯತ್ನ ಮಾಡಿದ್ದಾನೆ. ಅಧಿಕಾರವಿದ್ದಷ್ಟೂ ದಿನ ಲೂಟಿ, ಕೊಳ್ಳೆ, ದೌರ್ಜನ್ಯ ನಡೆಸಿದ ಇಂತಹ ಹಿಟ್ಲರ್‌ನನ್ನು ಈ ದೇವತೆಗಳು ಅದ್ಹೇಗೆ ಕ್ಷಮಿಸುತ್ತಾರೆ ಹೇಳಿ?



ಹೊಳೆನರಸೀಪುರ ಕ್ಷೇತ್ರದಲ್ಲಿ 181377 ಮತದಾರರಿದ್ದಾರೆ. ಇದರಲ್ಲಿ ಹಳ್ಳಿಕೋಟೆ ಹೋಬಳಿಯನ್ನು ಬಿಟ್ಟರೆ ರೇವಣ್ಣನಿಗೆ ಉಳಿದ ಪ್ರದೇಶದಲ್ಲಿ ಹೇಳಿಕೊಳ್ಳುವಂತಹ ಜನ ಬೆಂಬಲವೇನೂ ಇಲ್ಲ. ಇಲ್ಲಿನ ಓಟುಗಳು ಜೆಡಿಎಸ್‌ಗಿಂತ ಕಾಂಗ್ರೆಸ್ಸಿನ ಪಾಲಾಗುವ ಸಂಭವವೇ ಜಾಸ್ತಿ.

ರೇವಣ್ಣ ಮಂತ್ರಿಯಾದ ಮೇಲೆ ಹಳ್ಳಿಗಳನ್ನೇ ಮರೆತು ಕುಳಿತಿದ್ದ. ತಾನೇ ಹಾಸನದ ಅನಭಿಷಕ್ತ ದೊರೆ ಎಂದು ಹಳ್ಳಿಗಳಿಗೆ ಹೋಗಿ ಮತ ಯಾಚಿಸದಿದ್ದರೂ ಗೆಲ್ಲುತ್ತೇನೆಂಬ ಹುಂಬು ವಿಶ್ವಾಸದಲ್ಲಿದ್ದ. ಆದರೆ, ಅನುಪಮಳ ಅನುಕಂಪದಲೆಯಿಂದ ಬೆಚ್ಚಿಬಿದ್ದಿರುವ ಈತ ಈಗ ರಾತ್ರಿ ಹಗಲೆನ್ನದೇ ಹಳ್ಳಿ ಹಳ್ಳಿ ತಿರುಗಿ ಜನಮನ ಗೆಲ್ಲಲು ಶತಗತಾಯ ಪ್ರಯತ್ನ ನಡೆಸಿದ್ದಾನೆ.

ಜನರ ಮುಂದೆ ಈಗ ಎರಡು ಆಯ್ಕೆಗಳಿವೆ. ಒಂದು, ಹೊಳೆನರಸೀಪುರವನ್ನು ಕೊಳ್ಳೆಹೊಡೆದ, ರೌಡಿಸಂ ಮತ್ತು ದೌರ್ಜನ್ಯಗಳನ್ನೇ ಮೈಗೂಡಿಸಿಕೊಂಡಿರುವ ಮಾಜಿ ಸಚಿವ ರೇವಣ್ಣ, ಇನ್ನೊಂದು, ಮಾವ ಮತ್ತು ಗಂಡನನ್ನು ಕಳೆದುಕೊಂಡಿರುವ ಅನುಪಮ ಎಂಬ ಹೆಂಗಳೆ. ರೇವಣ್ಣನ ಕ್ರೂರ ಮುಖ ಗೆಲ್ಲುತ್ತೋ ಅಥವಾ ಅನುಪಮಳ ಮಂದಹಾಸ ಗೆಲ್ಲುತ್ತೋ ಕಾದು ನೋಡಬೇಕಷ್ಟೆ!

■ ಡಿ.ಜಿ.ಗೌಡ

ಆಲೂರು-ಸಕಲೇಶಪುರ ಅರಳಲಿದೆಯೇ ಕಮಲ?

ಮೀಸಲು ಕ್ಷೇತ್ರವಾಗಿರುವ ಆಲೂರು-ಸಕಲೇಶಪುರದಲ್ಲಿ ಜಾತಿಯ ಭೂತ ಮೆರೆದಾಡುತ್ತಿದೆ. 167316 ಮತದಾರರನ್ನು ಹೊಂದಿರುವ ಈ ಕ್ಷೇತ್ರದಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್‌ಗಳ ನಡುವ ತ್ರಿಕೋನ ಸ್ಪರ್ಧೆ ಏರ್ಪಡಲಿದೆ.

ಇತ್ತೀಚೆಗೆ ಎಂ.ಪಿ.ಪ್ರಕಾಶ್ ಜೊತೆಗೆ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿದ್ದ ಕ್ಷೇತ್ರದ ಲಿಂಗಾಯತ ಮುಖಂಡ ವಿಧಾನ ಪರಿಷತ್ ಸದಸ್ಯ ಬಿ.ಆರ್.ಗುರುದೇವ್ ತಮ್ಮ ಬೆಂಬಲಿತ ಅಭ್ಯರ್ಥಿಗೆ ಟಿಕೆಟ್ ನೀಡಲಿಲ್ಲ ಎಂಬ ಕಾರಣವೊಡ್ಡಿ ಬಿಜೆಪಿಗೆ ಹಾರಿದ್ದಾರೆ. ಇದರಿಂದ ಮಾಜಿ ಶಾಸಕ ಬಿಜೆಪಿ ಮುಖಂಡ ಬಿ.ಬಿ.ಶಿವಪ್ಪ ಹಾಗೂ ಗುರುದೇವ್ ಅವರ ನಾಯಕತ್ವದಲ್ಲಿ ಲಿಂಗಾಯತ ಮತಗಳು ಒಂದಾಗಿ ಬಿಜೆಪಿಯ ಪಾಲಾಗಲಿವೆ. ಇಲ್ಲಿ ಬಿಜೆಪಿಯಿಂದ ಸ್ಪರ್ಧಿಸುತ್ತಿರುವ ರಿಟೈರ್ಡ್ ತಹಶೀಲ್ದಾರ್ ನಿರ್ವಾಣಯ್ಯಗೆ ಇದರಿಂದ ಜೀವ ಬಂದಂತಾಗಿದೆ.

ಇನ್ನು ಕಾಂಗ್ರೆಸ್ ಅಭ್ಯರ್ಥಿ ಡಿ.ಸಿ. ಸಣ್ಣಸ್ವಾಮಿಗೆ ಕಾಂಗ್ರೆಸ್‌ನಲ್ಲಿ ಬಂಡಾಯದ ಭೀತಿ ಕಾಡಲಾರಂಭಿಸಿದೆ. ಸ್ಥಳೀಯ ಒಕ್ಕಲಿಗ ಮತ್ತು ಲಿಂಗಾಯತ ಮುಖಂಡರುಗಳು ಸಣ್ಣಸ್ವಾಮಿಗೆ ತೀವ್ರ ವಿರೋಧ ವ್ಯಕ್ತಪಡಿಸುತ್ತಿದ್ದಾರಾದರೂ ದಲಿತ ಮತಗಳು, ಅಲ್ಪಸಂಖ್ಯಾತ ಮತಗಳು ಅವರಿಗೆ ಜೀವ ತುಂಬಲಿವೆ. ದೇವೇಗೌಡರ ಕುಟುಂಬದಿಂದ ಸದಾ ದೌರ್ಜನ್ಯ ಅನ್ಯಾಯಗಳಿಗೆ ಒಳಗಾಗುತ್ತಿರುವ 21 ಸಾವಿರ ದಾಸ ಒಕ್ಕಲಿಗ ಮತಗಳು ಸಣ್ಣಸ್ವಾಮಿಗೆ ಒಲಿಯಲಿವೆ.


ಉಳಿದಂತೆ ಜೆಡಿಎಸ್ ಅಭ್ಯರ್ಥಿಯಾಗಿ ಮಾಜಿ ಸಚಿವ ಎಚ್.ಕೆ ಕುಮಾರಸ್ವಾಮಿ ಕಣದಲ್ಲಿದ್ದಾರೆ. ಹಾಗೆ ನೋಡಿದರೆ, ವೈಯಕ್ತಿಕವಾಗಿ ಅವರೊಬ್ಬ ಉತ್ತಮ ಆಡಳಿತಗಾರ, ಜನರ ಸಮಸ್ಯೆಗಳಿಗೆ ಸ್ಪಂದಿಸಬಲ್ಲ ವ್ಯಕ್ತಿ ಎಂಬ ಭಾವನೆ ಜನರಲ್ಲಿದೆ. ಈ ಭಾವನೆಗಳೇನಾದರೂ ಮತಗಳಾಗಿ ಪರಿವರ್ತಿತಗೊಂಡರೆ ಕ್ಷೇತ್ರದಲ್ಲಿ ತ್ರಿಕೋನ ಸ್ಪರ್ಧೆ ಏರ್ಪಡುವುದು ಖಚಿತ. ■


ಧನಾಧನ್ ಮಂಡ್ಯ!


ಚುನಾವಣಾ ಸಮೀಕ್ಷೆ


ಮಂಡ್ಯ ಜಿಲ್ಲೆಯಲ್ಲಿ ಚುನಾವಣಾ ಕಾವು ಧಗ್ಗೆಂದು ಪಸರಿಸಿ ಬುರುಬುರು ಬೆಂಕಿಯ ಕೆನ್ನಾಲಿಗೆ ಚಾಚಿ ಕುಂತಿದೆ. ಹಣದ ಹೊಳೆಯನ್ನು ಕಾವೇರಿ ನದಿಯ ಮರಿಮಗಳಂತೆ ಹರಿಸಿಯಾದರೂ ಸರಿಯೇ ಗದ್ದೇ ತೀರುತ್ತೇವೆಯೆಂದು ತೊಡೆತಟ್ಟಿ ಅಟ್ಟಹಾಸ ತೋರಿಸಲು ಎಲ್ಲಾ ಹುರಿಯಾಳುಗಳು ಹರಕೆ ಹೊತ್ತಂತಿದೆ. ಅಮಲಿನ ರಾಶಿಯ ಜೊತೆಗೆ, ರಕ್ತವನ್ನೂ, ಚೆಲ್ಲಲು ಹಪಾ ಹಪಿಸುತ್ತಿರುವ ಬೆನ್ನಲ್ಲೇ ಮಾರಿಬಲಿ ನಡೆದುಹೋಗಿದೆ. ಇನ್ನೆಷ್ಟು ಘೋರ ಕದನಗಳಿಗೆ ಇದು ನಾಂದಿ ಹಾಡಲಿದೆಯೋ?

ಮಂಡ್ಯ ಜಿಲ್ಲೆಯಲ್ಲಿ ಚುನಾವಣಾ ಕಾವು ಧಗ್ಗೆಂದು ಪಸರಿಸಿ ಬುರುಬುರು ಬೆಂಕಿಯ ಕೆನ್ನಾಲಿಗೆ ಚಾಚಿ ಕುಂತಿದೆ. ನಾಗಮಂಗಲ, ಮದ್ದೂರು, ಶ್ರೀರಂಗಪಟ್ಟಣ, ಮೇಲುಕೋಟೆ ಕ್ಷೇತ್ರಗಳಲ್ಲಿ ಆ ಉರಿ ವ್ಯಾಪಿಸಿ ಮಹಾಮಾರಿಯಾಗಲಿದೆ. ಹಣದ ಹೊಳೆಯನ್ನು ಕಾವೇರಿ ನದಿಯ ಮರಿಮಗಳಂತೆ ಹರಿಸಿಯಾದರೂ ಸರಿಯೇ ಗೆದ್ದೇ ತೀರುತ್ತೇವೆಯೆಂದು ತೊಡೆತಟ್ಟಿ ಅಟ್ಟಹಾಸ ತೋರಿಸಲು ಎಲ್ಲಾ ಹುರಿಯಾಳುಗಳು ಹರಕೆ ಹೊತ್ತಂತಿದೆ. ಅದೆಷ್ಟೋ ಅಮಲಿನ ರಾಶಿಯ ಜೊತೆಗೆ, ರಕ್ತವನ್ನೂ, ಚೆಲ್ಲಲು ಹಪಾ ಹಪಿಸುತ್ತಿರುವ ಬೆನ್ನಲ್ಲೇ ಮಾರಿಬಲಿ ನಡೆದುಹೋಗಿದೆ. ಇನ್ನೆಷ್ಟು ಘೋರ ಕದನಗಳಿಗೆ ಇದು ನಾಂದಿ ಹಾಡಲಿದೆಯೋ? ಒಟ್ಟಾರೆ ರಾಜಕೀಯದೊಂದಿಗೆ ಮಿಳಿತಗೊಂಡು ಮಂಡ್ಯದ ಮಣ್ಣನ್ನು ಮಲಿನ ಮಾಡಿಟ್ಟಿರುವ ಪಾತಕಿಗಳ ಲೋಕವನ್ನು ಮೊದಲಿಂದಲೂ ಗೊಬ್ಬರ ಹಾಕಿ ಪೋಷಿಸಿಕೊಂಡು ಬಂದು ಹೆಮ್ಮರವಾಗಿಸಿದವರು ಇದೇ


ಶ್ರೀಕಂಠೇಗೌಡ


ಸಿದ್ಧರಾಜು


ಆತ್ಮಾನಂದ


ಮಾದೇಗೌಡ


ರವಿ

ರಾಜಕಾರಣಿಗಳು! ಅಂತಹ ಲಜ್ಜೆಗೆಟ್ಟವರ ಹಣಾಹಣಿಗೆ ವೇದಿಕೆ ಸಿದ್ಧಗೊಂಡಿದೆ.

ಮಂಡ್ಯ ಮಾರಿ ಕದನ!

ಚುನಾವಣೆಗೆ ಮುನ್ನವೇ ರಕ್ತ ಕಂಡಿರುವ ಮಂಡ್ಯ ವಿಧಾನಸಭಾ ಕ್ಷೇತ್ರದಲ್ಲಿ ಹುರಿಯಾಳುಗಳ ಮಾರಿಕದನ ನಡೆಯಲಿದೆ. ಜೆಡಿಎಸ್‌ನಿಂದ ಎರಡನೇ ಬಾರಿಗೆ ಕಾದಾಟಕ್ಕಿಳಿದಿರುವಾತ ಎಂ. ಶ್ರೀನಿವಾಸ್. ಅಸಲಿಗೆ ಇಂವ ತೀರಾ ದುಷ್ಟ ಕಡುಭ್ರಷ್ಟನಲ್ಲದಿದ್ದರೂ, ಆಡಳಿತ ನಿಭಾಯಿಸಬಲ್ಲ ಚಾಕಚಕ್ಯತೆಯಾಗಲಿ-ತಾಖತ್ತಾಗಲೀ ಇಲ್ಲದವ. ಮಂಡ್ಯದಲ್ಲಿ ಇಷ್ಟೆಲ್ಲಾ ಪಾತಕಗಳಾಗುತ್ತಿದ್ದರೂ ತನಗೇನೂ ತಿಳಿದೇ ಇಲ್ಲವೇನೋ ಎಂಬಂತೆ ವರ್ತಿಸುವ ಮಖೇಡಿಗೆ ಎದುರಾಗಿ ತೊಡೆ ತಟ್ಟಿ ನಿಂತಿರುವಾತ ಕಾಂಗ್ರೆಸ್‌ನ ಎಚ್.ಬಿ. ರಾಮು. ತನ್ನ ಸ್ವಕ್ಷೇತ್ರ ಕೆರಗೋಡು ಹರಿದು ಚಿಂದಿಯಾಗಿ ಅಲೆಮಾರಿಯಾಗಿದ್ದವನಿಗೆ ಅಂಬರೀಷ್ ಕೃಪೆಯಿಂದೇನೋ ಟಿಕೆಟ್ ದಕ್ಕಿದೆ. ಆದರೆ ಗೆಲ್ಲಲು ಹರಸಾಹಸ ಮಾಡಬೇಕಿದೆ. ಟಿಕೆಟ್ ಆಕಾಂಕ್ಷಿಗಳಾಗಿದ್ದ ಮಾಜಿ ಸಚಿವ ಆತ್ಮಾನಂದ, ರಮೇಶ್ ರಾಜು, ಶ್ರೀಕಾಂತ್, ರವಿಶಂಕರೇಗೌಡ ಮುನಿದು ಗುಂಪುಗಳಾಗಿರುವಾಗ ರಾಮು ಗೆಲುವಿನ ಪ್ರಹಸನ ಕಷ್ಟ. ಜೊತೆಗೆ ಆತ್ಮಾನಂದನ ಬತ್ತಳಿಕೆಯಲ್ಲಿದ್ದ ಕಾಯಂ ಮತಗಳು ರಾಮು ಕಡೆ ತಿರುಗೋದು ತೀರಾ ಕಷ್ಟ. ಅಲ್ಲದೇ ಮಂಗಳ-ತಗ್ಗಹಳ್ಳಿ ಹೋಬಳಿಗಳು ಸಿಡಿದು ಶ್ರೀರಂಗಪಟ್ಟಣ ಸೇರಿಕೊಂಡಿರುವುದರಿಂದ ಆ ಭಾಗದಲ್ಲಿದ್ದ ಸಾಂಪ್ರದಾಯಿಕ ಮತಗಳ ಸಹಕಾರವಿಲ್ಲ, ಹಾಗಾಗಿ ಗೆಲುವಿನ ಅಭಿಯಾನ ಏರಲು ಸಾಕಷ್ಟು ಏಗಬೇಕಾಗಿರುವ ರಾಮು ಈಗಾಗಲೇ ತನ್ನ ತಿಜೋರಿಯಿಂದ ಸಾಕಷ್ಟು ಹಣ ಸುರಿಯಲು ಸಜ್ಜಾಗಿ ನಿಂತಾಗಿದೆಯಾದರೂ ಅವರ ಗೆಲುವಿಗೆ ತೊಡಕಾಗುವುದು ಬಿಜೆಪಿಯ ವಿದ್ಯಾ ನಾಗೇಂದ್ರ ಈಕೆ ಅಬಕಾರಿ ನಾಗಣ್ಣನ ಹೆಂಡತಿ.

ತನ್ನ ಗಂಡನ ಕೊಲೆಯ ಸಿಂಪಥಿಯ ಜೊತೆಗೆ ರೊಕ್ಕದ ಥೈಲಿಯಿಡಿದು ಅಖಾಡಕ್ಕಿಳಿದಿರುವ ವಿದ್ಯಾ ನಾಗೇಂದ್ರರ ಬಿಜೆಪಿಯ ಆಯ್ಕೆ ಅಚ್ಚರಿ ಹುಟ್ಟಿಸಿದೆ. ಮೊದಲಿಂದಲೂ ಈ ಭಾಗದಲ್ಲಿ ಕಮಲದ ಅರಳಿಸುವಿಕೆಯ ಕಾಯಕವನ್ನು ಮಾಡಿದ್ದು ಅಬ್ಬಾಸ್ ಅಲಿ ಬೋಹ್ರಾ. ಹಾಗಾಗಿ ಯಾರೋ ಕಟ್ಟಿದ ಗೂಡಿಗೆ ಅಚಾನಕ್ಕಾಗಿ ಕಾಲಿಟ್ಟಿರುವ ವಿದ್ಯಾ ನಾಗೇಂದ್ರ ಮುಸ್ಲಿಮರ ಬಂಡಾಯ ಎದುರಿಸಬೇಕಿದೆ. ಅಲ್ಲದೇ ಬೋಹ್ರಾನ ಕೈಲಿದ್ದ ಓಟುಬ್ಯಾಂಕ್ ವಿದ್ಯಾ ಕಡೆಗೆ ಹರಿಯುತ್ತಾ ಎಂಬುದನ್ನು ಕಾದುನೋಡಬೇಕಿದೆ. ಟಿಕೆಟ್ ಸಿಗದೇ ಬಂಡಾಯವಾಗಿ ಫೀಲ್ಡಿಗಿಳಿದಿದ್ದ ಬೋಹ್ರಾನನ್ನು ಹೇಗೋ ಅಖಾಡದಿಂದ ಹೊರತರಲಾಗಿದೆಯಾದರೂ ಬಿಜೆಪಿ ಹಾಗೂ ಕಾಂಗ್ರೆಸ್‌ನ ಒಳಜಗಳ ಜೆಡಿಎಸ್‌ಗೆ ವರದಾನವಾದರೂ ಆಗಬಹುದು ಹನಕೆರೆ ಸುತ್ತಮುತ್ತಲಿನ ಹಳ್ಳಿಗಳ ಮೇಲೆ ಮೊದಲಿಂದಲೂ ಪ್ರಾಬಲ್ಯ ವಿದ್ದದ್ದು ಅಬಕಾರಿ ನಾಗಣ್ಣನ ಕುಟುಂಬದವರಿಗೆ. ಹೀಗಾಗಿ ಅದೇ ಭಾಗದವರಾದ ಶ್ರೀನಿವಾಸ್‌ಗೆ ಈ ಬಾರಿ ಹಿಂದಿನಂತೆ ಓಟು ದಕ್ಕುವುದು ಕಷ್ಟ.

ಒಟ್ಟಾರೆ ಮಂಡ್ಯದಲ್ಲಿ ಕಾಂಗ್ರೆಸ್, ಜೆಡಿಎಸ್ ಹಾಗೂ ಬಿಜೆಪಿ ಕಾದಾಡಲಿವೆ. ಮೇಲ್ನೋಟಕ್ಕೆ ಎಂ. ಶ್ರೀನಿವಾಸ್‌ರೇ ಗೆಲ್ಲುವ ಹಾಗಿದೆಯಾದರೂ ವಿದ್ಯಾ ನಾಗೇಂದ್ರರ ಗೆಲುವನ್ನು ತಳ್ಳಿ ಹಾಕುವಂತಿಲ್ಲ. ಸದ್ಯಕ್ಕೆ ಮಂಡ್ಯದಲ್ಲಿ ಮಾರಿ ಕದನ ಗ್ಯಾರಂಟಿಯಾಗಿದೆ.

ಮದ್ದೂರಿನಲ್ಲಿ ಜೆಡಿಎಸ್-ಕಾಂಗ್ರೆಸ್ ದಮನಕ-ದರನಕವೇ ಹೆಚ್ಚಾಗಿದೆ. ಬಿಜೆಪಿ ಇಲ್ಲಿ ಆಟಕ್ಕುಂಟು ಲೆಕ್ಕಕ್ಕಿಲ್ಲದಂತಿದ್ದರೂ ಮಧು ಮಾದೇಗೌಡರ ಎಂಟ್ರಿಯಿಂದಾಗಿ ಸ್ವಲ್ಪವೇಸ್ವಲ್ಪ ಲಕಲಕಿಸುತ್ತಿದೆ. ಕೊನೆ ಗಳಿಗೆಯವರೆಗೂ ಕಾಂಗ್ರೆಸ್ ಟಿಕೆಟ್ ನಂದೇ ಅಂತ ಭಾಜ-ಭಜಂತ್ರಿ ಬಾರಿಸುತ್ತಿದ್ದ ಮಧುಗೆ ಯಾವಾಗ ಟಾಂಗು ಕೊಡಲಾಯಿತೋ ಮುನಿದ ಮಾಜಿ ಸಂಸದ ಜಿ. ಮಾದೇಗೌಡ ಮಗನನ್ನು ಎಳೆದೊಯ್ದು ಚೆಡ್ಡಿ ತೊಡಿಸಿ ಕಮಲದ ನೆರಳಲ್ಲಿ ನಿಲ್ಲಿಸಿದ್ದಾರೆ. ಅವರ ಪ್ರಭಾವವಿರುವ ಭಾರತಿನಗರದ ಸುತ್ತಮುತ್ತಲಿನ ಒಂದಷ್ಟು ಹಳ್ಳಿಗಳು ಮದ್ದೂರಿಗೆ ಸೇರುತ್ತವೆಯಾದರೂ ಬಿಜೆಪಿಗೆ ಮತಗಳು ಸಲ್ಲುವುದು ಸ್ವಲ್ಪ ಕಷ್ಟ.

ಇನ್ನು ಜೆಡಿಎಸ್‌ನಿಂದ ಹಣಾಹಣಿಗೆ ಇಳಿದಿರುವ ಎಂ.ಎಸ್. ಸಿದ್ಧರಾಜು ಪರ ಸಿಂಪಥಿಯ ಅಲೆಯಿದೆ. ಕಳೆದ ಸಲ ದೇವೇಗೌಡ ಮಾಡಿದ ಪಂಚರಂಗಿ ಆಟದಿಂದಾಗಿ ಎರಡೆರಡು ಬಿ ಫಾರಂಗಳನ್ನಿಡಿದು ರಣಾಂಗಣಕ್ಕೆ ಇಳಿದ ಇಬ್ಬರು ಅಭ್ಯರ್ಥಿಗಳಿಂದಾಗಿ ಕಕ್ಕಾಬಿಕ್ಕಿಯಾಗಿದ್ದ ಮತದಾರರು ಯಾರಿಗೆ ಒತ್ತಬೇಕೋ ಎಂಬ ಗೊಂದಲದಿಂದಾಗಿ ಸಿದ್ಧರಾಜು ಸೋತು ಸುಣ್ಣವಾಗಿದ್ದರು. ಅಲ್ಲದೇ ದುಸ್ಥಿತಿಯಲ್ಲಿದ್ದ ಈತನ ಮೇಲೆ ಜನತೆಗೆ ಸಿಂಪಥಿಯಿದೆ. ಹಾಗಾಗಿ ಈ ಬಾರಿ ಮದ್ದೂರಲ್ಲಿ ಜೆಡಿಎಸ್ ಪತಾಕೆ ಹಾರಿಸಿದರೆ ಅಚ್ಚರಿಯೇನಲ್ಲ. ಕಾಂಗ್ರೆಸ್‌ನಿಂದ ಎರಡನೇ ಬಾರಿಗೆ ಕಣಕ್ಕಿಳಿದಿರುವ ಡಿ.ಸಿ. ತಮ್ಮಣ್ಣನ ವಿರುದ್ಧ ಪಕ್ಷದಲ್ಲೇ ಆಂತರಿಕ ಸಮಸ್ಯೆಗಳಿವೆ. ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಫೀಲ್ಡಿಗಿಳಿದಿದ್ದರೆ ಕಾಂಗ್ರೆಸ್ ಗೆಲುವು ಸಾಧಿಸುತ್ತಿತ್ತು, ಒಳಜಗಳಗಳು ಶಮನವಾಗುತ್ತಿದ್ದವು. ಆದರೆ ತಮ್ಮಣ್ಣನಿಗೆ ಬಿ ಫಾರಂ ಕೊಟ್ಟಿದ್ದರಿಂದ ಗುಂಪುಗಾರಿಕೆ ದಮನವಾಗಿಲ್ಲ. ಅಲ್ಲದೇ ಪಕ್ಷದ ಪಾರಂಪರಿಕ ಓಟುಗಳಿದ್ದ ಕೊಪ್ಪ ಹೋಬಳಿ ಹರಿದು ಹಂಚಿ ನಾಗಮಂಗಲಕ್ಕೆ ಸೇರಿವೆ. ಹಾಗಾಗಿ ಕಾಂಗ್ರೆಸ್‌ನ ತಮ್ಮಣ್ಣ ಸ್ವಲ್ಪ ಹರಸಾಹಸ ಮಾಡಬೇಕಿದೆ. ಅದೇನೇ ಇರಲಿ ಜೆಡಿಎಸ್-ಕಾಂಗ್ರೆಸ್ ನೇರ ಹಣಾಹಣಿಯಿರುವ ಮದ್ದೂರಲ್ಲಿ ಕೊನೆಗೆ ಸಿದ್ದರಾಜು ಗೆಲ್ಲುವ ಸೂಚನೆಯೇ ಹೆಚ್ಚಿದೆ. ಬಿಜೆಪಿಯ ಮಧು ಮಾದೇಗೌಡನ ಕಾದಾಟದಿಂದಾಗಿ ಜೆಡಿಎಸ್‌ಗೆ ವರದಾನವಾಗಲಿದೆ.



ಮೇಲುಕೋಟೆ ನಾಮ ಯಾರಿಗೆ?

ಈಗಾಗಲೇ ಗೆದ್ದೇಬಿಟ್ಟೆವೆಂದು ಜೋಶ್‌ನಲ್ಲಿರುವ ಬಿಜೆಪಿಯ ಕೆಂಪೇಗೌಡ ಬಡಬಡಾಯಿಸುತ್ತಿದ್ದರೆ, ಜೆಡಿಎಸ್‌ನ ಪುಟ್ಟರಾಜು ಗೆಲ್ಲೋದು ನಾನೇ ಎಂಬ ಹುಮ್ಮಸ್ಸಿನಲ್ಲಿದ್ದಾರೆ. ಹಾಗಾಗಿ ಮೇಲುಕೋಟೆ ಕ್ಷೇತ್ರದಲ್ಲಿ ನಾಮ ಯಾರಿಗೆಂದು ಕುತೂಹಲವಿದ್ದೇ ಇದೆ. ಕಾಂಗ್ರೆಸ್‌ನಲ್ಲಿದ್ದು ಮೂರು ಬಾರಿ ಶಾಸಕರಾಗಿದ್ದ ಕೆಂಪೇಗೌಡರಿಗೆ ಎದುರಾಳಿಯಾಗಿ ಸಿ. ಅಣ್ಣೇಗೌಡ ಕಾಂಗ್ರೆಸ್ ಕಟ್ಟಾಳುವಾಗಿ ಗದೆ ಹಿಡಿದು ನಿಂತಿದ್ದರೂ, ರೈತ ಸಂಘದಿಂದ ಕಣಕ್ಕಿಳಿದಿರುವ ಪುಟ್ಟಣ್ಣಯ್ಯ ಪ್ರಬಲ ಪೈಪೋಟಿ ನೀಡಲಿದ್ದಾರೆ. ಇಷ್ಟಾದರೂ ಸಾಕಷ್ಟು ದುಡ್ಡು ಸುರಿದು ಅಖಾಡಕ್ಕಿಳಿದಿರುವ ಪುಟ್ಟರಾಜು ಎಲ್ಲಾ ಹೋಬಳಿಗಳ ಮುಖಂಡರನ್ನು ಬುಟ್ಟಿಗಾಕಿಕೊಂಡಾಗಿದೆ.

ಇನ್ನು ಬಿಎಸ್‌ಪಿಯಿಂದ ಸ್ಪರ್ಧೆಗಿಳಿದಿರುವ ಲಿಕ್ಕರ್ ರಂಗಸ್ವಾಮಿಗೆ ಒಂದೆಡೆ ಮಗ ಕೊಲೆಯಾದ ಚಿಂತೆ, ಇನ್ನೊಂದೆಡೆ ಚುನಾವಣೆಯಲ್ಲಿ ಸೋಲುವ ದುಗುಡ. ಅದೇನೆ ಇರಲಿ, ಸಾಕಷ್ಟು ಅಮಲಿನ ತೈಲ ಹಾಗೂ ರೊಕ್ಕ ಹರಿಯಲಿರುವ ಮೇಲುಕೋಟೆಯಲ್ಲಿ ಕೊನೆಗೆ ಜೆಡಿಎಸ್‌ನ ಪುಟ್ಟರಾಜು ಗೆಲ್ಲುವ ಛಾನ್ಸೇ ಹೆಚ್ಚು.

ಉಳಿದೆಲ್ಲಕ್ಕಿಂತ ಕಡುಬೇಸಿಗೆಯ ಹವಾ ಎಬ್ಬಿಸಿರುವ ನಾಗಮಂಗಲ ರಕ್ತಸಿಕ್ತ ರಾಜಕಾರಣಕ್ಕೆ ಹೇಳಿ ಮಾಡಿಸಿದಂತಹ ಕ್ಷೇತ್ರ. ಇಲ್ಲಿ ಮತ್ತೆ ಗೆಲ್ಲುವ ಹಪಾಹಪಿ ಚೆಲುವರಾಯಸ್ವಾಮಿಯದು. ಅಧಿಕಾರಾವಧಿಯಲ್ಲಿ ಗೆಬರಿಕೊಂಡ ಹಡಬೆ ದುಡ್ಡಿನ ನೆರಳಲ್ಲಿ ಕಾದಾಟಕ್ಕಿಳಿದಿರುವ ಚೆಲುವರಾಯಿಗೆ ಕಾಂಗ್ರೆಸ್‌ನಿಂದ ಎದಿರೇಟು ಕೊಡಲು ಸುರೇಶ್‌ಗೌಡ ಕಣದಲ್ಲಿದ್ದಾರೆ. ಟಿಕೆಟ್ ಸಿಗದೇ ಬಂಡಾಯವೆದ್ದಿದ್ದ ಮಾಜಿ ಶಾಸಕ ಶಿವರಾಮೇಗೌಡ ಇಂಡಿಪೆಂಡೆಂಟಾಗಿ ಕಣಕ್ಕೇನೊ ಇಳಿದಿದ್ದರು. ಆದರೆ ಕೊನೆಗೆ ಅವರು ನಾಮಪತ್ರ ವಾಪಸ್ಸು ಪಡೆದಿರುವುದರಿಂದ ಜೆಡಿಎಸ್ ಹಾಗೂ ಕಾಂಗ್ರೆಸ್ ನಡುವೆ ಕದನ ನಡೆದು ಸುರೇಶ್ ಗೌಡರಿಗೆ ಅನುಕೂಲವಾಗುವ ಸಾಧ್ಯತೆಯೇ ಹೆಚ್ಚಿದೆ. ಶಿವರಾಮೇಗೌಡರ ಅಸಮಾಧಾನದ ಬೇಗುದಿಯಿಂದ ಅವರ ಹಿಂಡಾಳುಗಳು ಕೈಕೊಟ್ಟರೆ, ಚೆಲುವರಾಯಿಗೆ ವರದಾನವಾಗಬಲ್ಲುದಾದರೂ ಕ್ಷೇತ್ರದಲ್ಲಿ ಹೆಚ್ಚಾಗಿರುವ ಕುರುಬರು ಸಿದ್ಧರಾಮಯ್ಯನವರಿಂದಾಗಿ ಕಾಂಗ್ರೆಸ್ ಪಡಸಾಲೆಗೆ ಬಂದು ಬೀಳುವುದಂತೂ ಖಾತ್ರಿ.

ಅಂಬಿ ಗಾರುಡಿ ನಡೆದೀತಾ?




ಸಂಸದನಾಗಿ ಸತತ ಗೆಲುವಿನ ಅಭಿಯಾನ ಮುಂದುವರಿಸಿಕೊಂಡೇ ಬಂದ ನಟ ಅಂಬರೀಷ್ ಕೊನೆಗೂ ಶ್ರೀರಂಗಪಟ್ಟಣದಿಂದ ಅಖಾಡಕ್ಕೆ ಧುಮುಕಿದ್ದಾರೆ. ಮಂಡ್ಯ ಮದ್ದೂರು ಅಂತೆಲ್ಲಾ ಎಮ್ಮೆಲ್ಲೆಗಿರಿ ಕನಸನ್ನು ಹೊತ್ತು ಅಲೆದಾಡಿದ ಅಂಬಿಗೆ ಮೊದಲ ಪ್ರಯತ್ನ ಟಾಂಗು ಕೊಡಲಿದೆಯಾ ಎಂಬ ಅನುಮಾನದ ಮುಳ್ಳುಗಳೆದ್ದಿದೆಯಾದರೂ ಆತನ ಬಣ್ಣದ ಖದರ್ ಹವಾ ಜಿಲ್ಲೆಯ ತುಂಬಾ ಇದ್ದೇ ಇದೆ. ಆದರೂ ಕಾಂಗ್ರೆಸ್ ತನ್ನ ಪಟ್ಟಿಯಲ್ಲಿ ಮಾಜಿ ಶಾಸಕಿ ಪಾರ್ವತಮ್ಮ ಶ್ರೀಕಂಠಯ್ಯನ ಮಗ ರವೀಂದ್ರನಿಗೆ ಕೊಟ್ಟಿದ್ದ ಟಿಕೆಟ್ ಕಿತ್ತು ಅಂಬಿ ಕೈಗೆ ಮಡಗಿರುವುದರಿಂದ ಪಕ್ಷದಲ್ಲಿ ಆಂತರಿಕ ಅಸಮಾಧಾನದ ಹೊಗೆ ಎದ್ದಿದೆ. ಇದಲ್ಲದೇ ಎಸ್.ಎಲ್. ಲಿಂಗರಾಜು, ಪುಟ್ಟೇಗೌಡ, ಭಾಸ್ಕರ, ಪಾಲಹಳ್ಳಿ ಚಂದ್ರಶೇಖರ್‌ರಂತಹ ಮುಖಂಡರು ಅಂಬಿ ಕೊಟ್ಟ ಕಾಸನ್ನು ಜೇಬಲ್ಲಿಟ್ಟುಕೊಂಡರೇ ಹೊರತು ಪ್ರಚಾರಕ್ಕಿಳಿದಿಲ್ಲ. ಆದರೂ ಅಂಬಿಗೆ ಪಕ್ಷಾತೀತವಾಗಿ ಶ್ರೀರಂಗಪಟ್ಟಣದಲ್ಲಿ ಅಭಿಮಾನಿಗಳ ದಂಡಿದೆ. ಹಾಗಾಗಿ ಅಂಬರೀಷ್ ಗೆಲುವು ಶತಸಿದ್ಧ ಎಂಬಂತಾಗಿದೆ.

ಹಾಗಂತ ಜೆಡಿಎಸ್ ಕ್ಯಾಂಡಿಡೇಟು ರಮೇಶ್‌ಬಾಬು ಸುಮ್ಮನೆ ಕುಂತಿಲ್ಲ, ಈಗಾಗಲೇ ಹೆಣ್ಣುಮಕ್ಕಳ ಮತಗಳನ್ನು ಕಸಿಯಲಿಕ್ಕೆಂದು ಸೀರೆ ಕುಪ್ಪಸಗಳನ್ನು ಹಂಚಿ, 1 ಲಕ್ಷ ಚಿನ್ನದ ಉಂಗುರಗಳನ್ನೂ ಸಹ ಹಂಚುತ್ತಿದ್ದಾನೆ. ಎಷ್ಟೇ ಖರ್ಚಾದರೂ ಸರಿ ಅಂಬಿ ಸೋಲಲೇಬೇಕೆಂದು ಫರ್ಮಾನು ಹೊರಡಿಸಿದ್ದಾರೆ ಕುಮಾರಣ್ಣ. ಆದರೆ ದಳದಲ್ಲಿನ ಅತೃಪ್ತ ಆತ್ಮಗಳಾದ ನಂದಕುಮಾರ್, ಎ.ಟಿ. ನಾರಾಯಣಗೌಡ, ತಿಲಕ್, ಕೊತ್ತತ್ತಿ ತಮ್ಮಣ್ಣ ಹಾಗೂ ಚಿಕ್ಕ ರಾಮಾಂಜಿಗೌಡರಂಥವರು ಅಂಬರೀಷ್‌ಗೆ ಒಳಗೊಳಗೆ ಬೆಂಬಲಕ್ಕಿಳಿದಿರುವುದರಿಂದ ಜೆಡಿಎಸ್ ಗೆಲುವು ಕಗ್ಗಂಟಾಗಿದೆ. ಇನ್ನು ಆರ್ಥಿಕವಾಗಿ ಅಷ್ಟೇನೂ ಬಲಾಢ್ಯರಲ್ಲದಿದ್ದರೂ ರೈತ ಸಂಘದ ನಂಜುಂಡೇಗೌಡ ಅಖಾಡಕ್ಕಿಳಿದಿರುವುದರಿಂದ ತ್ರಿಕೋನ ಸ್ಪರ್ಧೆಯಂತೂ ಖಚಿತ. ಆದರೆ ಬಿಜೆಪಿಯ ಪೂಜಾ ಸಂತೋಷ್‌ಗೆ ತನ್ನ ಪಕ್ಷದವರೇ ಆದ ಬಲರಾಮ್ ಹಾಗೂ ಹೊನ್ನಪ್ಪ ಸಹಕರಿಸುತ್ತಿಲ್ಲ. ಹಾಗಾಗಿ ಅಂಬಿ ಗಾರುಡಿ ಶತಾಯಗತಾಯ ಗ್ಯಾರಂಟಿಯಾಗಿದೆ. ಒಟ್ಟಾರೆ ಎರಡು ದಶಕಗಳಿಂದ ಆರೆಕೆರೆ ಮೂಲದ ಪಾರ್ವತಮ್ಮ ಹಾಗೂ ವಿಜಯ ಲಕ್ಷ್ಮೀ ಬಂಡಿಸಿದ್ದೇಗೌಡ ಕುಟುಂಬದ ಹಿಡಿತ ಕಳಚಲಿದೆಯಾ ಎಂಬುದು ಸದ್ಯದ ಕುತೂಹಲ.

ಉಳಿದ ಕೆ.ಆರ್. ಪೇಟೆ ಹಾಗೂ ಮಳವಳ್ಳಿ ಕ್ಷೇತ್ರಗಳಲ್ಲಿ ಜೆಡಿಎಸ್ ಅಭ್ಯರ್ಥಿಗಳಿಗೆ ಮುಳುಗು ನೀರು ಖಚಿತ. ಶಾಸಕನಾಗಿ ಎಲ್ಲಾ ಅಧಿಕಾರಿಗಳಲ್ಲದೇ, ಮರಳಿನವರಿಂದಲೂ ಸಾಕಷ್ಟು ಗೆಬರಿಕೊಂಡು ದುಂಡಗಾದ ಮಳವಳ್ಳಿಯ ಅನ್ನದಾನಿ ವಿರುದ್ಧ ಮತದಾರರು ಬಂಡೆದ್ದಿದ್ದಾರೆ. ಅಡಾಲೆದ್ದು ಹಳ್ಳ ಹಿಡಿದಿರುವ ರಸ್ತೆಗಳು, ಕೊಳೆತು ನಾರುತ್ತಿರುವ ಟೌನ್ ವ್ಯಾಪ್ತಿ, ಅಭಿವೃದ್ಧಿಯನ್ನೇ ಕಾಣದ ಕ್ಷೇತ್ರ, ಹಾಗಾಗಿ ಇದೆಲ್ಲದರ ವಿರೋಧಿ ಅಲೆ ಕಾಂಗ್ರೆಸ್‌ನ ಸಿದ್ಧರಾಜುಗೆ ವರದಾನವಾಗಲಿದೆ. ಟಿಕೆಟ್ ಸಿಗದೆ ಬಂಡಾಯವೆದ್ದಿದ್ದ ನರೇಂದ್ರ ಸ್ವಾಮಿಯಿಂದಾಗಿ ಒಂದಷ್ಟು ಮತಗಳು ಆಚೆಈಚೆ ಹೋದರೂ, ಈ ಸಲ ಕಾಂಗ್ರೆಸ್ ಗೆಲ್ಲುವುದು ಗ್ಯಾರಂಟಿ. ಬಿಜೆಪಿಗಿಲ್ಲಿ ನೆಲೆಯೂ ಇಲ್ಲ, ಅಲೆ ಮೊದಲೇ ಇಲ್ಲ.


ಸುರೇಶ್ ಗೌಡ


ಹೊನ್ನಪ್ಪ


ತಮ್ಮಣ್ಣ


ಚೆಲುವರಾಯಸ್ವಾಮಿ

ಇದೇ ಥರಾ ಕೆ.ಆರ್. ಪೇಟೆಯಲ್ಲಿ ಸ್ಪೀಕರ್ ಕೃಷ್ಣರ ಸ್ಥಿತಿಯೂ ಅತಂತ್ರವಾಗಿದೆ. ಉನ್ನತ ಸ್ಥಾನದಲ್ಲಿದ್ದರೂ ಕ್ಷೇತ್ರವನ್ನು ಅಭಿವೃದ್ಧಿಪಡಿಸದ ಕೃಷ್ಣರ ಮಖೇಡಿತನಕ್ಕೆ ಈ ಸಲ ತಕ್ಕ ಶಾಸ್ತಿಯಾಗಲಿದೆ. ಹಾಗಾಗಿ ಕಾಂಗ್ರೆಸ್‌ನ ಕೆ.ಬಿ. ಚಂದ್ರಶೇಖರ್ ಗೆಲ್ಲುವುದರಲ್ಲಿ ಅಚ್ಚರಿಯೇನಿಲ್ಲ.


ಒಟ್ಟಾರೆ ಮಂಡ್ಯ ಜಿಲ್ಲೆಯಲ್ಲಿ ಹೊತ್ತಿಕೊಂಡಿರುವ ಎಲೆಕ್ಷನ್ ಬೇಗುದಿಯ ಬೆಂಕಿಯಲ್ಲಿ ಯಾರು ಯಾರು ಸುಟ್ಟು ಕರಕಲಾಗುವರೋ ಕಾದು ನೋಡಬೇಕಿದೆ. ಸಾಕಷ್ಟು ಜಿದ್ದಾಜಿದ್ದಿಯ ಜೊತೆಗೆ ದಿವಿನಾದ ರೊಕ್ಕ ಹರಿದಾಡುವ ಬೆನ್ನಲ್ಲೇ ಅನೇಕ ಕಾದಾಟ ಗುದ್ದಾಟಗಳಾಗುವುದಂತೂ ಮಂಡ್ಯದ ಮಣ್ಣಿನ ಸಾಮಾನ್ಯ ಗುಣ. ಹಾಗಾಗಿ ಮುಂದಿದೆ ಮಾರಿಹಬ್ಬ.

■ ವರದಿಗಾರ

ಹಾವೇರಿ: ಉದಾಸಿ ಸಾರಥ್ಯದಲ್ಲಿ ಬಿಜೆಪಿ ಗೋತ!

ಅಧಿಕಾರದಲ್ಲಿದ್ದಾಗ ಇಡೀ ಜಿಲ್ಲೆಯನ್ನು ಹರಿದು ಮುಕ್ಕಿದ ಮಾಜಿ ಮಂತ್ರಿ ಮುದಿ ರಾಜಕಾರಣಿ ಸಿ.ಎಂ. ಉದಾಸಿಯ ಬಾಲಂಗೋಚಿ ಶಾಸಕರು ದೋಚಿದ ದುಡ್ಡು ಚೆಲ್ಲಿ ಮತ್ತೆ ಅಧಿಕಾರಕ್ಕೆ ಬರುವ ತರಾತುರಿಯಲ್ಲಿದ್ದಾರೆ. ಇವರ ಎಂಜಲ ರಾಜಕಾರಣಕ್ಕೆ ರೋಸಿ ಹೋಗಿರುವ ಮತದಾರರು 'ಓಟು ಕೇಳಾಕ ಬಲ್ಲಿ, ಕಾಲಾಗಿನವು ಕೈಗೆ ಬರ್ತಾವ' ಎನ್ನುತ್ತಿದ್ದಾರೆ. ಮೊದಲೇ ಸೋಲಿನ ಭೀತಿಯಿಂದ ಅರ್ಧ ಕುಸಿದಿರುವ ಉದಾಸಿ ಹಿರೇಕೇರೂರ, ಶಿಗ್ಗಾಂವಿ ಕ್ಷೇತ್ರಗಳಲ್ಲಿ ಕಟ್ಟಾ ಚೆಡ್ಡಿಗಳಿಗೆ ಟಿಕೆಟ್ ತಪ್ಪಿಸಿದ್ದರಿಂದ ಕಾರ್ಯಕರ್ತರೇ ಅವನ ತಿಕದ ಮೇಲೆ ಒದೆಯಲು ಸಜ್ಜಾಗಿದ್ದಾರೆ. ಉದಾಸಿ ಹಾನಗಲ್ ಜನರಿಗೂ ಬೇಡವಾಗಿದ್ದು ಉದಾಸಿಯ ತಳ ಅಲುಗಾಡುತ್ತಿದೆ.

ಸಾಯುವುದರೊಳಗೆ ಮಠಕ್ಕೆ ಮರಿಸ್ವಾಮಿ ಬಿಟ್ಟು ಹೋಗ್ತಾರಲ್ಲ, ಹಾಗೆ, ಹುಬ್ಬಳ್ಳಿಯಲ್ಲಿ ಸತ್ತುಹೋದ ಬಿಜೆಪಿಗೆ ಬಸವರಾಜ ಬೊಮ್ಮಾಯಿ ಎಂಬ ಸಾದರ ಉತ್ತರಾಧಿಕಾರಿಯನ್ನು ತಂದು ಕೂರಿಸಿ ಪಂಚಮಸಾಲಿಗಳಿಂದ ನಿತ್ಯ ಉಗಿಸಿಕೊಳ್ಳುತ್ತಿದ್ದಾನೆ ಉದಾಸಿ. ಈತನ ಹಿಂದೆಯೇ 'ಅಣ್ಣಾವ್ರೆ... ಅಣ್ಣಾವ್ರೆ...' ಎಂದು ಹಲ್ಲು ಕಿರಿಯುತ್ತಾ ಓಡಾಡಿಕೊಂಡಿದ್ದ ಸಕ್ಕರೆ ಕಳ್ಳ ಹಾವೇರಿಯ ಶಿವರಾಜ್ ಸಜ್ಜನ ಹಾಗೂ ಹಿಂದುಳಿದ ಪುರೋಹಿತಶಾಹಿ ಎಂಬ ನಾಮಾಂಕಿತ ನೆಹರೂ ಓಲೇಕಾರ ಇಬ್ಬರೂ ಕ್ಷೇತ್ರ ಕಳೆದುಕೊಂಡು ಪರದೇಶಿಗಳಾಗಿದ್ದಾರೆ. ಜಿಲ್ಲೆಯ ಏಕೈಕ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ದಿವಾಳಿಗೆ ಹಚ್ಚಿ ನೂರಾರು ಬಡ ಕುಟುಂಬಗಳನ್ನು ಬೀದಿಗೆ ತಂದಿದ್ದಲ್ಲದೇ ದುರ್ಗಪ್ಪ ಎಂಬ ಕಾರ್ಮಿಕನ ಆತ್ಮಹತ್ಯೆಗೂ ಕಾರಣರಾದ ಜಿಲ್ಲೆಯ ಚೆಡ್ಡಿಗಳಿಗೆ ಆ ಬಡ ಕಾರ್ಮಿಕರ ಕಣ್ಣೀರಿನ ಶಾಪ ತಟ್ಟಲಾರಂಭಿಸಿದೆ. ಇದೇ ಉದಾಸಿಯ ರಾಜಕೀಯ ಅವನತಿಗೂ ದಾರಿ ಮಾಡಿಕೊಟ್ಟಿದೆ.



ಬೊಮ್ಮಾಯಿಗೆ ಪಂಚಮಸಾಲಿಗಳ ಬಾಂಬ್




ದಿವಂಗತ ಎಸ್.ಆರ್.ಬೊಮ್ಮಾಯಿ ಎಂದರೆ ಉತ್ತರ ಕರ್ನಾಟಕದ ಸಮಾಜವಾದಿ ಹಿನ್ನೆಲೆಯುಳ್ಳ ಮುಖಂಡ ಎಂದು ಹೆಮ್ಮೆಯಿಂದ ಹೇಳಬಹುದಾದ ಒಂದು ಕಾಲವಿತ್ತು, ಆದರೆ ಅವರ ಖಾಸಾ ಮಗ ಬಸವರಾಜ್ ಬೊಮ್ಮಾಯಿ ಅಧಿಕಾರದ ಆಸೆಗೆ ಬಿಜೆಪಿಯಂತಹ ಕೋಮುವಾದಿ ರಕ್ತಪಿಪಾಸು ಪಕ್ಷಕ್ಕೆ ಸೇರಿಕೊಂಡಿದ್ದಾನೆ. ಎಂಥ ತಂದೆಗೆ ಎಂಥ ಮಗ ನೋಡಿ!

ಬಸವರಾಜ್ ಬೊಮ್ಮಾಯಿಯ ಅಜ್ಜ ಶಿಗ್ಗಾಂವಿ ಕ್ಷೇತ್ರಕ್ಕೆ ಒಂದು ಅವಧಿಗೆ ಶಾಸಕನಾಗಿ ಕ್ಷೇತ್ರದ ತುಂಬೆಲ್ಲಾ ಸಾದರ ದರ್ಬಾರು ನಡೆಸಿ ಪಂಚಮಸಾಲಿಗಳನ್ನು ಕೀಳಾಗಿ ಕಂಡಿದ್ದ. ಈಗ ಅದೇ ಕ್ಷೇತ್ರಕ್ಕೆ ಅವನ ಮೊಮ್ಮಗ ಬಸವರಾಜ ಬೊಮ್ಮಾಯಿ ಬಿಜೆಪಿಯಿಂದ ಕಣಕ್ಕಿಳಿದಿದ್ದಾನೆ. ಪಂಚಮಸಾಲಿಗಳೀಗ ಅಜ್ಜನ ವಿರುದ್ಧದ ಸೇಡನ್ನು ಮೊಮ್ಮಗನ ಮೇಲೆ ತೀರಿಸಿಕೊಳ್ಳಲು ಸಜ್ಜಾಗಿದ್ದಾರೆ. ಬಸವರಾಜ್ ಬೊಮ್ಮಾಯಿಯ ಪಾಲಿಗೆ ಇನ್ನೂ ಒಂದು ನೆಗೆಟಿವ್ ಪಾಯಿಂಟ್ ಇದೆ. ಶಿಗ್ಗಾಂವ್‌ನಲ್ಲಿ ಕಳೆದ ಹತ್ತಾರು ವರ್ಷಗಳಿಂದ ಬಿಜೆಪಿಯನ್ನು ಕಟ್ಟಿ ಬೆಳೆಸಿದ್ದ ಪಂಚಮಸಾಲಿ ನಾಯಕ ಭಜರಂಗಿ ಸೋಮಣ್ಣ ಬೇವಿನಮರದ್‌ಗೆ ಟಿಕೆಟ್ ನಿರಾಕರಿಸಿ ಹೊರಗಿನಿಂದ ಆಮದಾದ ಬಸವರಾಜ್ ಬೊಮ್ಮಾಯಿಗೆ ಟಿಕೆಟ್ ಕೊಟ್ಟಿದ್ದರಿಂದಲೂ ನಿಷ್ಠಾವಂತ ಕಾರ್ಯಕರ್ತರು, ಪಂಚಮಸಾಲಿಗಳು ಕೊತಕೊತ ಕುದಿಯುತ್ತಿದ್ದಾರೆ. ಈ ಬಾರಿ ಪಂಚಮಸಾಲಿಗಳೆಲ್ಲಾ ಒಗ್ಗಟ್ಟಾಗಿ ಬಸವರಾಜ್ ಬೊಮ್ಮಾಯಿ ವಿರುದ್ಧ ಮತಚಲಾಯಿಸಲು ಪಂಚಮಸಾಲಿ ಕುಲಗುರು ಕೂಡ ಪರ್ಮಿಶನ್ ಕೊಟ್ಟಿದ್ದಾರೆ. ಇದು ತಿಳಿದಿದ್ದೇ ಬೊಮ್ಮಾಯಿ ಬೆವರತೊಡಗಿದ್ದಾನೆ.

ಚುನಾವಣಾ ಸಮೀಕ್ಷೆ

ಕೋಳಿವಾಡ್‌ಗೆ ರಾಮಲಿಂಗಣ್ಣನ ಗುದ್ದು!

ಹಿಂದಿನ ಕೃಷ್ಣ ಸರ್ಕಾರದಲ್ಲಿ ಸಣ್ಣದೊಂದು ಖಾತೆಗೆ ಮಂತ್ರಿಯಾಗಿದ್ದ ಕೆ.ಬಿ.ಕೋಳಿವಾಡ ರಾಜ್ಯ ರಾಜಕಾರಣದಲ್ಲಿ ಎಚ್.ಕೆ. ಪಾಟೀಲರ ವಿರೋಧಿ, ಸ್ವಜಾತಿ ಲೀಡರ್ ಎಂದು ಬಿಂಬಿತವಾಗಿದ್ದರೂ ತನ್ನ ಸ್ವಕ್ಷೇತ್ರ ರಾಣೇಬೆನ್ನೂರಿನಲ್ಲಿ ಹೇಳಹೆಸರಿಲ್ಲದಂತಾಗಿ ಹೋಗಿದ್ದಾನೆ. ಇವರ ಶಿಷ್ಯ ಎಂದೇ ಗುರುತಿಸಿಕೊಂಡಿದ್ದ ರಾಮಲಿಂಗಣ್ಣನವರ್ ಜೆಡಿಎಸ್ ಸೇರಿ ಅಸೆಂಬ್ಲಿಗೂ ನಿಲ್ಲುವ ತಯಾರಿ ನಡೆಸಿರುವುದು ಕೋಳಿವಾಡ್‌ಗೆ ನುಂಗಲಾರದ ತುತ್ತಾಗಿದೆ. ಒಂದು ದೊಡ್ಡ ಗುಂಪಿನ ಮಧ್ಯೆಯೂ ರಾಜಕೀಯ ಮಾಡುವಂಥ ಅನಿವಾರ್ಯತೆ ಕೋಳಿವಾಡ್‌ಗೆ ಬಂದಿದೆ.



ಸ್ಥಳೀಯ ಸಂಸ್ಥೆ ಪ್ರತಿನಿಧಿಗಳಿಂದ ನಡೆಯುವ ಎಮ್ಮೆಲ್ಸಿ ಚುನಾವಣೆಯಲ್ಲಿ ಕಾಂಗ್ರೆಸ್‌ನ ರಾಜ್ಯ ನಾಯಕರಿಗೆ ತಪ್ಪು ಮಾಹಿತಿ ನೀಡಿ ಟಿಕೆಟ್ ತಪ್ಪಿಸಿದ ಎನ್ನುವ ಕಾರಣಕ್ಕೆ ಕೋಳಿವಾಡನ ವಿರೋಧ ಕಟ್ಟಿಕೊಂಡಿರುವ ರಾಮಲಿಂಗಣ್ಣನವರ್ ಕಾಂಗ್ರೆಸ್‌ನಿಂದ ಟಿಕೆಟ್ ಪಡೆಯುವ ಪ್ರಯತ್ನ ಕೊನೆಗೂ ವಿಫಲವಾಗಿದ್ದರಿಂದ ಜೆಡಿಎಸ್ ಕದ ತಟ್ಟಿ ಟಿಕೆಟ್ ಪಡೆದು ಸ್ಪರ್ಧಿಸುವ ತಯಾರಿ ನಡೆಸಿದ್ದಾರೆ.

ರಾಮಲಿಂಗಣ್ಣನವರ್ ರಾಣೇಬೆನ್ನೂರಿನಲ್ಲಿ ನಿರ್ಣಾಯಕವಾಗಿರುವ ಪಂಚಮಸಾಲಿ ಸಮುದಾಯಕ್ಕೆ ಸೇರಿದವರಾಗಿದ್ದು ಆ ಸಮುದಾಯದ ಸಂಘಟನೆಯಲ್ಲಿ ಮುಂಚೂಣಿಯಲ್ಲಿರುವ ವ್ಯಕ್ತಿ. ಇಡೀ ಸಮುದಾಯ ನಿಂಗಣ್ಣನವರನ್ನು ಬೆಂಬಲಿಸಿದರೆ ಕೋಳಿವಾಡನಿಗೆ ಹೊಡೆತ ಬೀಳುವುದರಲ್ಲಿ ಎರಡು ಮಾತಿಲ್ಲ.

ಇನ್ನು ಬಿಜೆಪಿಯ ಶಿವಣ್ಣ ತಿಳವಳ್ಳಿ ಹಿಂದಿನ ಅವಧಿಯಲ್ಲಿ ಶಾಸಕನಾಗಿ ಮೆತ್ತಗೆ ಇಡೀ ತಾಲ್ಲೂಕನ್ನು ಕೊಳ್ಳೆ ಹೊಡೆದಾತ. ಬಿಜೆಪಿಯ ಜಿಲ್ಲಾಧ್ಯಕ್ಷ ಕೆ.ಶಿವಲಿಂಗಪ್ಪ ಶಿವಣ್ಣನನ್ನು ಹೇಗಾದರೂ ಮಾಡಿ ಸೋಲಿಸಿಯೇ ತೀರುತ್ತೇನೆಂದು ಪಣ ತೊಟ್ಟಿದ್ದಾನೆ. ಶಿವಲಿಂಗಪ್ಪ ಕಳೆದ ಬಾರಿ ತನಗೆ ಸಿಕ್ಕಿದ್ದ ಬಿ ಫಾರ್ಮ್ ಅನ್ನು ಕಡೆ ಗಳಿಗೆಯಲ್ಲಿ ಶಿವಣ್ಣನಿಗೆ ಬಿಟ್ಟು ಕೊಟ್ಟಿದ್ದ. ಆದರೆ, ಶಿವಣ್ಣ ಶಾಸಕನಾದ ಮೇಲೆ ತನ್ನ ಗುಳ್ಳೆ ನರಿ ಬುದ್ಧಿ ಪ್ರದರ್ಶಿಸಿದ್ದರಿಂದ ಈತ ಈಗ ಸೆಟಗೊಂಡಿದ್ದಾನೆ. ಈ ಒಳಜಗಳವೇ ಬಿಜೆಪಿಯನ್ನು ರಾಣೇಬೆನ್ನೂರಿನಲ್ಲಿ ಈ ಬಾರಿ ಹಣ್ಣು ಮಾಡಲಿದೆ. ಅಲ್ಲದೇ, ಬಿಜೆಪಿಯ ಪರವಾಗಿ ಭಜರಂಗಿಗಳ್ಯಾರೂ ದುಡಿಯಲು ತಯಾರಿಲ್ಲ. ಕೇಸರಿ ತೊಟ್ಟವರೆಲ್ಲ ಪಂಚಮಸಾಲಿಗಳಾಗಿದ್ದು ಅವರೆಲ್ಲ ರಾಮಲಿಂಗಣ್ಣನವರ ಹಿಂದಿದ್ದಾರೆ.

ಅಲ್ಲದೇ ತಿಳವಳ್ಳಿ ಶಿವಣ್ಣ ಶಾಸಕನಾಗಿದ್ದಾಗ ಅವನ ಹಿಂದಿದ್ದ ಕೆಲ ಪುಢಾರಿ ಲೀಡರುಗಳು ನಡೆಸಿದ ಸುಲಿಗೆ ಹಾಗೂ ತೋರಿದ ದರ್ಪವನ್ನೆಲ್ಲಾ ಈಗ ಶಿವಣ್ಣನ ತಲೆಗೆ ಕಟ್ಟುತ್ತಿರುವುದರಿಂದ ಈತ ತಲೆದಂಡ ತೆರಬೇಕಾಗಿದೆ. ಈ ಒಳಜಗಳ ಮತ್ತು ಬಂಡಾಯಗಳೇ ಈ ಬಾರಿ ಬಿಜೆಪಿಯನ್ನು ಸೋಲಿಸುವುದಂತೂ ಗ್ಯಾರಂಟಿ.


ಹಾವೇರಿ-ಬ್ಯಾಡಗಿ: ವಲಸಿಗರು ಮತ್ತು ಕ್ರಿಮಿನಲ್ಲುಗಳ ದರ್ಬಾರ್



ಜಿಲ್ಲೆಯಲ್ಲಿ ಪ್ರಬಲ ಎದುರಾಳಿಗಳು ಎನ್ನಿಸಿಕೊಂಡಿರುವ ಬಿಜೆಪಿ - ಕಾಂಗ್ರೆಸ್‌ನಲ್ಲಿ ವಲಸಿಗ ನಾಯಕರೇ ಹೆಚ್ಚಾಗಿದ್ದಾರೆ. ಹಾವೇರಿ ಮೀಸಲು ಕ್ಷೇತ್ರವಾಗಿದ್ದರಿಂದ ಮಾಜಿ ಸಚಿವ ಬಸವರಾಜ್ ಶಿವಣ್ಣನವರ್ ಪಕ್ಕದ ಬ್ಯಾಡಗಿ ಕ್ಷೇತ್ರದಿಂದ ಟಿಕೆಟ್‌ಗಾಗಿ ಸ್ಟಂಟ್ ನಡೆಸಿದ್ದಾರೆ. ಮೀಸಲು ಕ್ಷೇತ್ರದಿಂದ ಮುಕ್ತಿ ಪಡೆದಿರುವ ಬ್ಯಾಡಗಿ ಜನರು ಇನ್ನು ವಲಸಿಗರಿಗೆ ಮಣೆ ಹಾಕುವುದು ಬೇಡ, ಸ್ಥಳೀಯ ಲೀಡರುಗಳಿಗೆ ಆದ್ಯತೆ ನೀಡಿ ಎಂದು ದುಂಬಾಲು ಬಿದ್ದಿದ್ದಾರೆ. ಹಾವೇರಿಯ ವರದಾ ಷುಗರ್ಸ್‌ನ್ನು ನುಂಗಿ ಹಾಕಿದ ಸಕ್ಕರೆ ಕಳ್ಳ ಶಿವರಾಜ್ ಸಜ್ಜನ ಬಿಜೆಪಿಯಿಂದ ಬಿ ಫಾರ್ಮ್ ಪಡೆದು ಕ್ಯಾಂಡಿಡೇಟ್ ಆಗುವ ತಯಾರಿಯಲ್ಲಿದ್ದಾನೆ. ಮಾಜಿ ಮಂತ್ರಿ ಉದಾಸಿಯ ಹಿಂದೆ ತಿರುಗಾಡಿ ಕಾಸು ಪೀಕಿಕೊಂಡಿದ್ದ ಸಜ್ಜನ ಎಲ್ಲೇ ನಿಂತರೂ ಸೋಲುವುದು ಗ್ಯಾರಂಟಿ. ಇನ್ನು ಹಾವೇರಿ ಪ.ಜಾ. ಮೀಸಲು ಕ್ಷೇತ್ರವಾಗಿದ್ದು ಇಲ್ಲಿ ಕ್ರಿಮಿನಲ್ ಸರ್ಟಿಫಿಕೇಟ್ ಪಡೆದುಕೊಂಡಿರುವವರ ಹಿಂಡೇ ಚುನಾವಣೆಗಿಳಿಯುತ್ತಿದೆ. ಶಿವಣ್ಣನವರ ಗರಡಿಯಲ್ಲಿ ಪಳಗಿರುವ ಈರಪ್ಪ ಲಮಾಣಿ ಎಂಬ ಕ್ರಿಮಿನಲ್ ಗಿರಾಕಿಗೆ ಟಿಕೆಟ್ ಕೊಡಿಸುತ್ತಿದ್ದಾನೆ. ಹಾವೇರಿ ಹತ್ತಿರದ ಗುತ್ತಲ ತಾಂಡಾದಲ್ಲಿ ಕೆಲವು ಹಿರಿ ಮರಿ ಪುಢಾರಿ ಹುಡುಗರನ್ನಿಟ್ಟುಕೊಂಡು ಕಳ್ಳತನದ ದಂಧೆಗಿಳಿದಿರುವ ಲಮಾಣಿ ಗುತ್ತಲದ ಸೆಂಟ್ರಲ್ ಬ್ಯಾಂಕಿನಿಂದ ದಲಿತರ ಹೆಸರಿನಲ್ಲಿ ಸಾಲ ಎತ್ತಿ ಬ್ಯಾಂಕಿಗೆ ಪಂಗನಾಮ ಹಾಕಿದ ಘಟಿಂಗ.


ಇನ್ನು ಬಿಎಸ್‌ಪಿಯಿಂದ ಕ್ಯಾಂಡಿಡೇಟ್ ಆಗಲಿರುವ ಮಾಜಿ ಎಸ್‌ಸಿ/ಎಸ್‌ಟಿ ಬೋರ್ಡ್ ಅಧ್ಯಕ್ಷ ಬ್ಯಾಡಗಿಯ ಮಾಜಿ ಶಾಸಕ ನೆಹರೂ ಓಲೇಕಾರನ ಮೇಲೆ ಸಾಕಷ್ಟು ಕ್ರಿಮಿನಲ್ ಕೇಸುಗಳಿವೆ. ಹಿಂದೊಮ್ಮೆ ಡಿ ಸಿ ಆಮ್ಲನ್ ಬಿಸ್ವಾಸ್‌ಗೆ ಹೊಡೆದು ನಾಲ್ಕು ಕಾಲಂ ಪ್ರಚಾರ ಗಿಟ್ಟಿಸಿಕೊಂಡು ಕಾಲರ್ ಹಾರಿಸಿದ್ದ ಓಲೇಕಾರ ಈವತ್ತಿನವರೆಗೂ ಒಬ್ಬ ದಲಿತನಿಗೆ ಅನುಕೂಲ ಮಾಡಿಕೊಟ್ಟ ಉದಾಹರಣೆಗಳಿಲ್ಲ. ಬಿಜೆಪಿಯ ಕಥೆಯೂ ಇದಕ್ಕಿಂತ ಬೇರೆಯೇನಿಲ್ಲ, ಶ್ರೀಪಾದ ಬೆಟಗೇರಿ ಎಂಬ ಅಟ್ರಾಸಿಟಿ ಗಿರಾಕಿ ಬಿಜೆಪಿಯಿಂದ ಕಣಕ್ಕಿಳಿಯುತ್ತಿದ್ದಾನೆ.

ಬಿ.ಸಿ. ಗೆಲುವಿಗೆ ಹಾದಿ ಸುಗಮ



ಹಿರೇಕೇರೂರಿನಲ್ಲಿ ಕಾಂಗ್ರೆಸ್ ಕಟ್ಟಿ ಬೆಳೆಸಿದ್ದು ಬಿ.ಎಚ್.ಬನ್ನಿಕೋಡ. ಬಿಜೆಪಿಯನ್ನು ಜಿಲ್ಲೆಯಲ್ಲಿ ನೆಲೆಯೂರುವಂತೆ ಮಾಡಿದ್ದು ಬಿ.ಜಿ. ಬಣಕಾರನ ಪುತ್ರ ಉಜನೇಶ್ ಬಣಕಾರ. ಆಶ್ಚರ್ಯ ಎಂದರೆ, ಇವರಿಬ್ಬರೂ ಈಗ ಟಿಕೆಟ್ ವಂಚಿತರು. ಇತ್ತೀಚೆಗಷ್ಟೇ ಕಾಂಗ್ರೆಸ್ ಸೇರಿದ ನಟಭಯಂಕರ ಬಿ.ಸಿ. ಪಾಟೀಲ್ ಟಿಕೆಟ್ ಪಡೆದರೆ ಬಿಜೆಪಿಯಿಂದ ಎ.ಕೆ. ಪಾಟೀಲ್ ಎಂಬ ಡಮ್ಮಿ ಕ್ಯಾಂಡಿಡೇಟನ್ನು ಕಣಕ್ಕಿಳಿಸುವ ಮೂಲಕ ಬಿ.ಸಿ. ಪಾಟೀಲ್ ಗೆಲುವಿಗೆ ಬಿಜೆಪಿಯೇ ವೇದಿಕೆ ಸಜ್ಜು ಮಾಡಿದೆ. ಎ.ಕೆ. ಪಾಟೀಲ್ ಎಂಥ ಡಮ್ಮಿ ಕ್ಯಾಂಡಿಡೇಟ್ ಎಂದರೆ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲೂ ಆತ ಠೇವಣಿ ಕಳೆದುಕೊಂಡಿದ್ದ.

ಇದಕ್ಕೆ ಕಾರಣ ಇಲ್ಲದಿಲ್ಲ, ಜಿಲ್ಲೆಯಲ್ಲೇ ಪ್ರಥಮ ಬಿಜೆಪಿ ಶಾಸಕ ಎಂದು ಕಾಲರ್ ಹಾರಿಸುತ್ತಿದ್ದ ಹಿರೇಕೆರೂರಿನ ಯು.ಬಿ.ಬಣಕಾರ್‌ಗೆ ಟಿಕೆಟ್ ತಪ್ಪುವಂತೆ ಮಾಡಿದ್ದು ಬೇರೆ ಯಾರೂ ಅಲ್ಲ, ಖುದ್ದು ಉದಾಸಿಯೇ. ಒಂದು ಬಣಕಾರನಿಗೆ ಟಿಕೆಟ್ ಕೊಟ್ಟರೆ ಆತ ಗೆಲ್ಲುತ್ತಾನೆ, ಅಂತೆಯೇ ಬಿಜೆಪಿ ಅಧಿಕಾರಕ್ಕೆ ಬಂದರೆ ತನ್ನ ಪವರ್ ಬಳಸಿಕೊಂಡು ಈತ ಮಂತ್ರಿಯೂ ಆಗುತ್ತಾನೆ, ಆಗ ತನ್ನ ಆಟವೇನೂ ನಡೆಯದು ಎಂಬ ದೂ(ದು)ರಾಲೋಚನೆಯಿಂದ ಬಣಕಾರ್‌ಗೆ ಟಿಕೆಟ್ ತಪ್ಪಿಸುವಲ್ಲಿ ಉದಾಸಿ ಯಶಸ್ವಿಯಾಗಿದ್ದಾನೆ. ಇದನ್ನು ಚೆನ್ನಾಗಿ ಬಲ್ಲ ಸಾದರು ಈಗ ಉದಾಸಿ ವಿರುದ್ಧ ತಿರುಗಿಬಿದ್ದಿದ್ದಾರೆ. ಬಸವರಾಜ್ ಬೊಮ್ಮಾಯಿಗೆ ಶಿಗ್ಗಾಂವಿಯ ಟಿಕೆಟ್ ಕೊಡುವ ಮೂಲಕ ಸಾದರ ಸಿಂಪಥಿಯನ್ನು ಗಳಿಸುವ ಉದಾಸಿಯ ತಂತ್ರಕ್ಕೀಗ ಹೊಡೆತ ಬಿದ್ದಂತಾಗಿದೆ.




ಇನ್ನೊಂದೆಡೆ, ಜೆಡಿಎಸ್‌ನ ಕುಮಾರ ಸ್ವಾಮಿ ಗ್ಯಾಂಗ್ ಕೂಡ ಈಗ ಬಿ.ಸಿ.ಪಾಟೀಲ್ ವಿರುದ್ಧ ಬಿಜೆಪಿ ಟಿಕೆಟ್ ವಂಚಿತ ಉಜನೇಶ್ ಬಣಕಾರನನ್ನು ಎತ್ತಿ ಕಟ್ಟಿ ಕೋಟಿ ಕೋಟಿ ಸುರಿದಾದರೂ ಸರಿ ಬಿ.ಸಿ. ಪಾಟೀಲನನ್ನು ಸೋಲಿಸ ಬೇಕು ಎಂದು ಪಣ ತೊಟ್ಟಿದೆ. ಅದಕ್ಕಾಗಿ ಈಗಾಗಲೇ ಹೊರಟ್ಟಿ ಸಾಹೇಬ್ರು ಬಣಕಾರನನ್ನು ಹಲವು ಬಾರಿ ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ. ರಾಜಕೀಯ ನಿವೃತ್ತಿ ಹೊಂದಿದ ಮಾಜಿ ಸ್ಪೀಕರ್ ಬಿ.ಜಿ.ಬಣಕಾರ್ ತಮ್ಮ ಮಗನಿಗೆ ಬಿಜೆಪಿ ಮಾಡಿದ ರಾಜಕೀಯ ದ್ರೋಹಕ್ಕೆ ಪ್ರತೀಕಾರವಾಗಿ ಮತ್ತೆ ಸಕ್ರಿಯ ರಾಜಕಾರಣಕ್ಕೆ ಮರಳಿದ್ದಾರೆ. ಇದ್ಯಾವುದಕ್ಕೂ ಜಗ್ಗದ ನಟಭಯಂಕರ ಬಿ.ಸಿ.ಪಾಟೀಲ್ ಕಾಂಗ್ರೆಸ್ಸಿನ ಹಳೆಯ ಮನುಷ್ಯ ಬಿ.ಎಚ್.ಬನ್ನಿಕೋಡ್‌ನನ್ನು ರಾಜಕೀಯವಾಗಿ ಮುಗಿಸಲು ಬೀದಿ ಕಾಳಗಕ್ಕೆ ಬಿದ್ದಿದ್ದಾರೆ. ಬನ್ನಿಕೋಡರು ರೈತರ ಪರವಾಗಿ ಬಸವೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ ಕಟ್ಟಲು ರೈತರಿಂದ ಶೇರು ಸಂಗ್ರಹಿಸಿದ್ದರು. ಆದರೆ, ಅದನ್ನು ಹೇಗಾದರೂ ಮಾಡಿ ನೆಲಕಚ್ಚುವಂತೆ ಮಾಡುವುದಕ್ಕಾಗಿ ಬಿ.ಸಿ.ಪಾಟೀಲರು ಸಂಚು ರೂಪಿಸಿ ರೈತರ ಕೆಂಗಣ್ಣಿಗೂ ಗುರಿಯಾಗಿದ್ದಾರೆ. ಏನೇ ಆದರೂ ಬಿಜೆಪಿಯು ಡಮ್ಮಿ ಕ್ಯಾಂಡಿಡೇಟ್ ಹಾಕುವ ಮೂಲಕ ಬಿ.ಸಿ.ಪಾಟೀಲರ ಗೆಲುವನ್ನು ಸುಲಭ ಮಾಡಿದ್ದಂತೂ ಸತ್ಯ.

ಒಟ್ಟಾರೆಯಾಗಿ ಹೇಳುವುದಾದರೆ, ಜಿಲ್ಲೆಯಲ್ಲಿ ಬಿಜೆಪಿ ವಾಷ್ ಔಟ್ ಆಗುವುದಂತೂ ಸತ್ಯ. ಬಿಜೆಪಿಯಲ್ಲಿ ಈಗಾಗಲೇ ನಾಲ್ಕೈದು ಗುಂಪುಗಳಾಗಿದ್ದು ಅಲ್ಲಿ ನಡೆಯುತ್ತಿರುವ ಪರಸ್ಪರ ಕಚ್ಚಾಟವೇ ಬಿಜೆಪಿಯನ್ನು ಹೈರಾಣು ಮಾಡಲಿದೆ.

ಹೊತ್ತುಕೊಂಡವರಿಗೆ ಬಕೆಟ್ ಇಟ್ಟುಕೊಂಡವರಿಗೆ ಟಿಕೆಟ್

"ಯಡ್ಡಿ ಹೊತ್ತುಕೊಂಡು ತಿರುಗಾಡಿದ ನಾಯಕರಿಗೆ ಬಕೆಟ್ ಕೊಟ್ಟ, ಇಟ್ಟುಕೊಂಡ ಶೋಭಾ ಕರಂದ್ಲಾಜೆಗ ಟಿಕೆಟ್ ಕೊಟ್ಟ" ಅಂತ ಹಿರೇಕೇರೂರಿನ ಬಿಜೆಪಿ ಕಾರ್ಯಕರ್ತರ ಜೊತೆ ಸೇರಿ ಉಜನೇಶ್ ಬಣಕಾರ್ ಹಾಡುತ್ತಾ ಗೋಗರೆಯುತ್ತಿದ್ದಾನೆ.



ಹಿಂದೊಮ್ಮೆ ಬಿಜೆಪಿಯಿಂದ ಎಮ್ಮೆಲ್ಲೆ ಆಗಿ, ಮತ್ತೊಮ್ಮೆ ಸೋತು ಸುಣ್ಣವಾಗಿ, ನಂತರ ಬಂಗಾರಪ್ಪನ ಸೈಕಲ್ ಹತ್ತಿ, ಅದೂ ಪಂಚರ್ ಆದ ಮೇಲೆ ಮತ್ತೆ ಚೆಡ್ಡಿ ತೊಟ್ಕೊಂಡು ಬಿಜೆಪಿ ಹತ್ರ ಬಂದಿದ್ದ ಉಜನೇಶ್ ಬಣಕಾರ್‌ಗೆ ಈ ಬಾರಿ ಬಿಜೆಪಿಯ ಟಿಕೆಟ್ ಕೈತಪ್ಪಿ ಹೋಗಿದೆ. ಅದ್ದರಿಂದಲೇ ಆತ ಯಡ್ಡಿ ವಿರುದ್ಧ ಗೋಗರೆ ಯುತ್ತಿದ್ದಾನೆ.

ಅದೂ ಹೇಗೆ ಗೊತ್ತೆ? ಯಡ್ಡಿಯ ಪ್ರತಿಕೃತಿಗೆ ಚಪ್ಪಲಿ ಹಾರ ಹಾಕಿ, ಎಲೆ ಅಡಿಕೆ ಹಾಕಿಕೊಂಡು ಕ್ಯಾಕರಿಸಿ ಉಗಿದು ಆತನ ಪ್ರತಿಕೃತಿ ಶವವನ್ನು ಮೆರವಣಿಗೆ ಮಾಡಿ ತಮ್ಮ ಸೇಡನ್ನು ತೀರಿಸಿಕೊಂಡಿದ್ದಾರೆ. ಇದೇ ಯಡ್ಡಿ ಕೆಲ ದಿನಗಳ ಹಿಂದೆ ಹಿರೇಕೇರೂರಿಗೆ ಬಂದಾಗ ಇದೇ ಬಣಕಾರ ಮತ್ತವನ ಸಂಗಡಿಗರು ಅವನನ್ನು ಅಕ್ಷರಶಃ ಹೊತ್ತು ಕೊಂಡು ತಿರುಗಾಡಿದ್ದರು. ಆದರೆ, ಯಾವಾಗ ಯಡ್ಡಿ ಕೈ ಕೊಟ್ಟನೋ ಇವರು 'ಹೊತ್ತುಕೊಂಡವರನ್ನು ಬಿಟ್ಟ, ಇಟ್ಟುಕೊಂಡವರಿಗೆ ಕೊಟ್ಟ' ಅಂತ ಹಾಡು ಹೇಳಲಾರಂಭಿಸಿದರು.


■ ಹುರುಳಿಕುಪ್ಪಿ ವಿನಯ್


ಹರಪನಹಳ್ಳಿ: ಸೀದಾ ಸಾದಾ ಪ್ರಕಾಶ್ V/s ಹಣ ಮದದ ರೆಡ್ಡಿ!

ಹರಪನಹಳ್ಳಿಯ ಮತದಾರರಿಗೀಗ ಅಗ್ನಿ ಪರೀಕ್ಷೆಯ ಕಾಲ. ಒಂದೆಡೆ ಸಾರ್ವಜನಿಕ ಸಂಪತ್ತಾದ ಗಣಿಯನ್ನು ಲೂಟಿ ಹೊಡೆದು ಕೊಬ್ಬಿರುವ ಬಿಜೆಪಿಯ ಕರುಣಾಕರ ರೆಡ್ಡಿ ಎಂಬ ದಾಂಧಿಗ ಹಾಗೂ ಇನ್ನೊಂದೆಡೆ ಸಭ್ಯ ರಾಜಕಾರಣಿ ಎಂದೇ ಕರೆಯಲ್ಪಡುವ ಎಂ.ಪಿ. ಪ್ರಕಾಶ – ಇವರಿಬ್ಬರೂ ಈಗ ಅವರ ಮುಂದಿರುವ ಆಯ್ಕೆಗಳು.

'ಎಂ.ಪಿ.ಪ್ರಕಾಶ್ ಠೇವಣಿ ಕೂಡ ಉಳಿಸಿಕೊಳ್ಳದಂಥ ಸ್ಥಿತಿ ತರುತ್ತೇನೆ' ಎಂದು ಈಗಾಗಲೇ ಕರುಣಾಕರ ರೆಡ್ಡಿ ಕೊಬ್ಬಿನಿಂದ ಹೂಂಕರಿಸಿದ್ದಾನೆ. ಇದರರ್ಥವನ್ನು ವಿಸ್ತರಿಸಿ ಹೇಳುವ ಅವಶ್ಯಕತೆಯಿಲ್ಲ. ಖನಿಜಗಳಿಂದ ಸಂಪದ್ಭರಿತವಾದ ಈ ನಾಡಿನ ಭೂಗರ್ಭವನ್ನು ಬಗೆದು ಕೊಬ್ಬಿರುವ ಕರುಣಾಕರ ರೆಡ್ಡಿ ನೇರವಾಗಿ ಈಗ ಮತದಾರರ ಖರೀದಿಗೆ ಇಳಿದಿದ್ದಾನೆ. ಈತನನ್ನೇನಾದರೂ ಹರಪನಹಳ್ಳಿಯ ಜನತೆ ಗೆಲ್ಲಿಸಿ ಕಳಿಸುವ ತಪ್ಪನ್ನು ಮಾಡಿದರೆ ಅದು ಕೇವಲ ಹರಪನಹಳ್ಳಿಗೆ ಮಾತ್ರವಲ್ಲ; ಇಡೀ ಕರ್ನಾಟಕಕ್ಕೆ ಮಾಡುವ ದ್ರೋಹವಾಗುತ್ತದೆ. ಏಕೆಂದರೆ, ಇಂತಹ ಗಣಿಕುಳ ಗೆದ್ದು ಬಂದರೆ ರಾಜ್ಯದಲ್ಲಿ ಅಳಿದುಳಿದಿರುವ ಖನಿಜಗಳನ್ನೂ ಬಗೆದು ಕನ್ನಡದ ಭೂಮಿಯನ್ನೀತ ಬರಡು ಮಾಡಿಹಾಕುತ್ತಾನಷ್ಟೆ.

ಇಡೀ ರಾಜಕಾರಣವೇ ಕೊಳೆತು ನಾರುತ್ತಿರುವ ಕೊಚ್ಚೆಗುಂಡಿಯಂತಾಗಿರುವ ಈ ಹೊತ್ತಿನಲ್ಲಿ ಎಂ.ಪಿ.ಪ್ರಕಾಶರಂಥ ಕೆಲವೇ ಬೆರಳೆಣಿಕೆಯಷ್ಟು ಜನ ರಾಜಕಾರಣದ ಬಗ್ಗೆ, ಪ್ರಜಾಪ್ರಭುತ್ವದ ಬಗ್ಗೆ ಒಂದಿಷ್ಟು ಆಶಾಭಾವನೆಯನ್ನು ಮೂಡಿಸುತ್ತಾರೆ. ಈತನಕ ಅವರು ಪ್ರತಿನಿಧಿಸಿದ ಹೂವಿನಹಡಗಲಿ ಕ್ಷೇತ್ರವನ್ನು ನೋಡಿದರೇನೇ ಇದು ಅರ್ಥವಾಗುತ್ತದೆ. ಸರ್ಕಾರದಿಂದ ಮಂಜೂರಾಗುವ ಎಲ್ಲ ಯೋಜನೆಗಳನ್ನು ಸಮರ್ಪಕವಾಗಿ ಜಾರಿಗೆ ತರುವುದರ ಮೂಲಕ ಕ್ಷೇತ್ರವನ್ನು ಒಂದಿಷ್ಟಾದರೂ ಅಭಿವೃದ್ಧಿ ಮಾಡಿದ್ದರು. ಅಲ್ಲಿಯೇ ಅವರು ಚುನಾವಣೆ ಎದುರಿಸಿದ್ದರೆ ಕರುಣಾಕರ ರೆಡ್ಡಿ ಅಲ್ಲ, ಅವರಪ್ಪ ಬಂದರೂ ಅವರನ್ನು ಸೋಲಿಸಲಾಗುತ್ತಿರಲಿಲ್ಲ. ಆದರೆ, ಅವರ ದುರಾದೃಷ್ಟಕ್ಕೆ ಕ್ಷೇತ್ರ ಪುನರ್ವಿಂಗಡಣೆಯಲ್ಲಿ ಹೂವಿನಹಡಗಲಿ ಮೀಸಲು ಕ್ಷೇತ್ರವಾಗಿ ಹೋಗಿದ್ದರಿಂದ ಪ್ರಕಾಶ್ ಅವರು ಅನಿವಾರ್ಯವಾಗಿ ಹರಪನಹಳ್ಳಿಯಲ್ಲಿ ಸ್ಪರ್ಧಿಸುವ ಒತ್ತಡಕ್ಕೀಡಾಗಿದ್ದಾರೆ.





ಪ್ರಕಾಶ್ ಎಂಥ ಸೌಮ್ಯ ಸ್ವಭಾವದ ವ್ಯಕ್ತಿ ಎಂಬುದಕ್ಕೆ ಅವರು ಈತನಕ ಜೆಡಿಎಸ್‌ನಲ್ಲಿ ದೇವೇಗೌಡರ ದೌರ್ಜನ್ಯವನ್ನು ಮೌನದಿಂದ ಸಹಿಸಿಕೊಂಡಿದ್ದನ್ನು ನೋಡಿದರೇನೇ ಅರ್ಥವಾಗುತ್ತದೆ. ಎಚ್.ಡಿ.ಕುಮಾರಸ್ವಾಮಿಯ ಒಟ್ಟು ವಯಸ್ಸೇ ಎಂ.ಪಿ.ಪ್ರಕಾಶರ ರಾಜಕೀಯ ಜೀವನಕ್ಕಿಂತ ಕಡಿಮೆಯಿದ್ದರೂ ಅವರ ಕೆಳಗೆ ಮಂತ್ರಿಯಾಗಿ ಕೆಲಸ ಮಾಡುವಂತಹ ಪರಿಸ್ಥಿತಿಯನ್ನು ದೇವೇಗೌಡ ತಂದಿಟ್ಟಿದ್ದಾಗಲೂ ಸಹಿಸಿಕೊಂಡಿದ್ದರು. ದೇವೇಗೌಡರ ಕುಟುಂಬದ ದೌರ್ಜನ್ಯ ಎಲ್ಲೆ ಮೀರಿದಾಗ ಅನಿವಾರ್ಯವಾಗಿ ಪಕ್ಷ ತೊರೆದು 'ನಾನೆಂದೂ ರಾಜಕೀಯ ಮಾಡುವುದಿಲ್ಲ' ಎಂದು ಘೋಷಣೆ ಕೂಡ ಮಾಡಿದ್ದರು. ಕೊನೆಗೆ ಜೆಡಿಎಸ್ ಅನ್ನು ತೊರೆದರು. ಆದರೆ, ಬಿಜೆಪಿಯಲ್ಲಿ ಅವರಿಗೆ ಸಾಕಷ್ಟು ಅವಕಾಶಗಳು ಸಿಗುತ್ತಿದ್ದವಾದರೂ ಅಂತಹ ಕೋಮುವಾದಿ ಫ್ಯಾಸಿಸ್ಟ್ ಪಕ್ಷವನ್ನು ಅವರು ಸೇರಲಿಲ್ಲ. ಇದ್ದುದರಲ್ಲಿಯೇ ಒಂದಿಷ್ಟು ಜಾತ್ಯತೀತವಾಗಿರುವ ಕಾಂಗ್ರೆಸ್‌ನ್ನು ಆಯ್ಕೆ ಮಾಡಿಕೊಂಡರು.

ರಾಜಕೀಯ ಜೀವನದಲ್ಲಿ ಅವರದ್ದೂ ಅನೇಕ ತಪ್ಪುಗಳಿರಬಹುದು. ಆದರೂ ಅವರೊಬ್ಬ ಸಮಾಜವಾದಿ ಹಿನ್ನೆಲೆಯಿಂದ ಬಂದಿರುವ ವ್ಯಕ್ತಿ. ತನ್ನನ್ನು ಗೆಲ್ಲಿಸಿದ ಮತದಾರರಿಗೆ ದ್ರೋಹ ಬಗೆಯುವ ಕಟುಕರಲ್ಲ. ಹರಪನಹಳ್ಳಿಯ ಜನತೆಯೇನಾದರೂ ಅವರನ್ನು ಗೆಲ್ಲಿಸಿದರೆ ಹೂವಿನಹಡಗಲಿಯಲ್ಲಿ ಮಾಡಿದಂತೆಯೇ ಹರಪನಹಳ್ಳಿಯಲ್ಲೂ ಅಭಿವೃದ್ಧಿ ಕಾರ್ಯಗಳನ್ನು ಮಾಡಿಯೇ ಮಾಡುತ್ತಾರೆ ಎಂಬ ಗ್ಯಾರಂಟಿಯನ್ನಂತೂ ಕೊಡಬಹುದು.

ಈಗ ಪ್ರಕಾಶ್‌ರವರ ಮುಂದಿರುವ ಸವಾಲೆಂದರೆ ದಿನಕ್ಕೆ ಐದಾರು ಕೋಟಿ ಆದಾಯವಿರುವ ಕರುಣಾಕರ ರೆಡ್ಡಿಯಂತಹ ಹಣದ ಥೈಲಿಯನ್ನು ಎದುರಿಸಬೇಕಿರುವುದು. ಸದ್ಯದ ರಾಜಕಾರಣದ ವಿಪರ್ಯಾಸವೆಂದರೆ ಪ್ರಕಾಶ್ ತರಹದವರು ಕರುಣಾಕರ ರೆಡ್ಡಿಯಂತಹವರಿಗೆ ಉತ್ತರ ಕೊಡಬೇಕಿರುವುದು. ಹಾಗೆ ನೋಡಿದರೆ ಇದು ಈ ರಾಜ್ಯವೇ ಎದುರಿಸುತ್ತಿರುವ ಸಮಸ್ಯೆ. ಆದರೆ, ಹರಪನಹಳ್ಳಿಯ ಜನ ಪ್ರಕಾಶ್‌ಗೆ ಹೆಗಲು ಕೊಟ್ಟರೆ ಉತ್ತರ ಕೊಡುವುದೇನೂ ಕಷ್ಟದ ಮಾತಲ್ಲ.

ಪಕ್ಕದ ಹೂವಿನ ಹಡಗಲಿಯಲ್ಲಿ ಪ್ರಕಾಶ್ ಮಾಡಿಸಿರುವ ಕೆಲಸಗಳನ್ನು ನೋಡಿ ಅಂತಹ ಕ್ರಿಯಾಶೀಲ ವ್ಯಕ್ತಿ ನಮಗೆ ಸಿಗುತ್ತಿದ್ದಾನಲ್ಲ ಎಂದು ಪ್ರಕಾಶ್ ಪರ ಅಪಾರ ಸಂಖ್ಯೆಯಲ್ಲಿ ಹರಪನಹಳ್ಳಿಯ ಜನ ನಿಂತಿರುವುದಂತೂ ಸತ್ಯ. ಅವರು ಗೆದ್ದರೆ ಹರಪನಹಳ್ಳಿಯಲ್ಲೂ ಕೆಲಸಗಳಾಗುತ್ತವೆ; ಅವರೊಬ್ಬ ಸುಸಂಸ್ಕೃತ ವ್ಯಕ್ತಿ, ಹೇಳುವುದನ್ನು ಕೇಳಿಸಿಕೊಳ್ಳುತ್ತಾರೆ; ನಮ್ಮ ದೂರುಗಳನ್ನು ಆಲಿಸುತ್ತಾರೆ; ಮಂತ್ರಿಯಾದರೂ ಅಷ್ಟೆ, ಇಲ್ಲದಿದ್ದರೂ ಅಷ್ಟೇ, ಅವರ ವ್ಯಕ್ತಿತ್ವದಲ್ಲಿ ಯಾವ ಬದಲಾವಣೆಗಳೂ ಆಗುವುದಿಲ್ಲ ಎಂದು ಜನ ಪ್ರಕಾಶ್‌ರೊಂದಿಗೆ ನಿಂತಿರುವುದು ಸಂತಸದ ವಿಷಯ.

ಕರುಣಾಕರ ರೆಡ್ಡಿ ನಾಡನ್ನು ಕೊಳ್ಳೆ ಹೊಡೆದು ಬಂದ ಹಣದಿಂದ ಹರಪನಹಳ್ಳಿಯ ಮತದಾರರನ್ನು ಖರೀದಿಸುವ ಮಟ್ಟಕ್ಕೆ ಬಂದಿದ್ದಾನೆ. ಹಣವೊಂದಿದ್ದರೆ ಏನನ್ನಾದರೂ ಖರೀದಿಸಬಹುದು ಎಂಬ ಕೊಬ್ಬು ಇರುವವನು ಆಡುವ ಆಟವಿದು. ಹಣದಿಂದ ಮತದಾರರನ್ನು ಖರೀದಿಸಲು ಬರುತ್ತಾನೆಂದರೆ ಅದು ಮತದಾರರಿಗೆ ಮಾಡುವ ಅಪಮಾನ ಕೂಡ. ಆದರೆ, ಮತದಾರರು ತಮ್ಮನ್ನು ತಾವು ಬಿಡ್ಡಿಯ ಹಣಕ್ಕೆ ಮಾರಿಕೊಳ್ಳದೇ ಸ್ವಾಭಿಮಾನದಿಂದ ಪ್ರಕಾಶ್ ಪರ ನಿಂತರೆ ರೆಡ್ಡಿಯ ಕೊಬ್ಬೂ ಇಳಿಯುತ್ತದೆ. ಅಂತಹ ಸ್ವಾಭಿಮಾನಿ ಕೆಲಸವನ್ನು ಹರಪನಹಳ್ಳಿಯ ಜನ ಮಾಡಲಿ. ■

ಶಿಕಾರಿಪುರಕ್ಕೆ ಹಾವು ಬಂದಂಗಾಯ್ತಲ್ರೀ!

"ಇದ್ದಕ್ಕಿದ್ದಂತೆ ಎಡೂರಪ್ಪನ ಮುಖ ಕಳೆಗುಂದಿ ಎಷ್ಟೇ ನಗಿಸಿದರೂ ಬಲವಂತದ ನಗೆ ಹೊರಡಿಸುತ್ತಿದ್ದಾರಂತಲ್ಲಾ, ತಮ್ಮ ಜಮದಗ್ನಿಯಂತಹ ಧೀಮಂತ ನಾಯಕನ ಮುಖ ಹೀಗೆ ಕಳೆಗುಂದುವುದಕ್ಕೆ ಕಾರಣವೇನೆಂದು ಯಡ್ಡಿ ಹಿಂಭಾಗದ ಚೆಡ್ಡಿಗಳು ಕೇಳಲಾಗಿ "ಏನಿಲ್ಲ, ಇಂತಹ ಸಮಯದಲ್ಲಿ ನನ್ನ ಧರ್ಮಪತ್ನಿ ಮೈತ್ರಾದೇವಿಯಿದ್ದರೆ ಎಷ್ಟು ಚೆನ್ನಾಗಿತ್ತು, ನಾಮಪತ್ರವನ್ನು ಸಲ್ಲಿಸಲು ಆಕೆಯನ್ನು ಕರೆದುಕೊಂಡು ಹೋಗಬಹುದಿತ್ತು" ಎಂದು ಆಕಾಶ ನೋಡಿದರಂತಲ್ಲಾ, ಇಂತಹ ಸುಳ್ಳನ್ನು ಸತ್ಯವೆಂದು ನಟಿಸುವ ಚೆಡ್ಡಿಗಳು "ನಿಜ ಸಾರ್. ಸಪತ್ನಿ ಸಮೇತರಾಗಿ ಇಂತಹ ಶುಭಕಾರ್ಯ ಕೈಗೊಳ್ಳುವುದು ಶೋಭಾಯಮಯ. ನೀವೀ ಸಂಗತಿಯನ್ನು ಮೊದಲೇ ಹೇಳಿದ್ದರೆ ನಾವು ತಥಾಕಥಿಥ ಬೇರೆ ಅರೇಂಜ್ ಮಾಡುತ್ತಿದ್ದೆವು. ನಮಗೂ ಹೊಳೆಯಲಿಲ್ಲ, ನಮ್ಮ ಐತಿಹಾಸಿಕ ಪುರಾಣಗಳಲ್ಲಿ ಗಂಡ ಯುದ್ಧ ಭೂಮಿಗೆ ಹೊರಡುವಾಗ ಹೆಂಡತಿಯಾದವಳು ಆರತಿ ಎತ್ತಿ ಬೆಳಗುವುದು ವಾಡಿಕೆ. ಅಂತಹ ವಿಚಾರ ತಮ್ಮ ತಲೆ ಕೊರೆಯುತ್ತಿದ್ದರೆ, ಬೆಂಗಳೂರಿಗೆ ಹೋಗಿ ಬೆಳಗಿಸಿಕೊಂಡು, ಬಂದುಬಿಡಿ" ಎಂದರಂತಲ್ಲಾ, ಥೂತ್ತೇರಿ!

* * * *

ಈ ಮಾತಿನಿಂದ ಯಡಿಯೂರಪ್ಪನ ಮುಖ ರಾಘವೇಂದ್ರಸ್ವಾಮಿ ಮುಖದಂತೆ ಅರಳಿ ಮತ್ತೆ ಮಂಕಾಯಿತಂತಲ್ಲಾ, ಕಂಗಾಲಾದ ಚೆಡ್ಡಿಗಳು "ಬಿಜೆಪಿ ಪಾರ್ಟಿಯ ಯಾರಿಂದಲಾದರು ಅವಮಾನ ಬಿರುನುಡಿ ಅಥವಾ ತಮ್ಮ ಗೆಲುವಿನ ಬಗ್ಗೆ ಅನುಮಾನಗಳಿವೆಯಾ ಸಾರ್?" ಎಂದು ಮತ್ತೆ ಕೆದಕಿದವಂತಲ್ಲಾ.

ಥೂತ್ತೇರಿ

ಯಾಹೂ

ಕೂಡಲೇ ವ್ಯಗ್ರಗೊಂಡ ಎಡೂರಪ್ಪ "ಸೂರ್ಯ ಚಂದ್ರ ಎಷ್ಟು ನಿಜನೊ ನನ್ನ ಗೆಲುವು ಅಷ್ಟೇ ನಿಜ ಕಂಡ್ರಿ" ಎಂದು ಕೆಂಗಣ್ಣು ಬಿಟ್ಟರಂತಲ್ಲಾ, ಈ ಅಸಂಬದ್ಧ ಹೋಲಿಕೆಯಿಂದ ಕಂಗಾಲಾದ ಚೆಡ್ಡಿಗಳು, "ಮತ್ತೆ ನಿಮ್ಮ ದುಗುಡಕ್ಕೆ ಕಾರಣವೇನೆಂದು ಹೇಳಿ ಸಾರ್?" ಎನ್ನಲಾಗಿ, "ಈ ಬಂಗಾರಪ್ಪನಿಗೆ ಇನ್ನಾವ ಕ್ಷೇತ್ರನೂ ಇರಲಿಲ್ಲವೇನ್ರಿ? ಇಲ್ಲಿಗೇ ಬರಬೇಕೆ ನಮ್ಮ ಪ್ರಾಣ ಹಿಂಡಕ್ಕೆ? ಆತ ಶಿಕಾರಿಪುರಕ್ಕೆ ಬಂದಾಗಿನಿಂದ ಮನೆಗೆ ಹಾವು ಬಂದು ಸೇರಿಕಂಡಂತಾಗಿದೆಯಲ್ರೀ. ನಾನೇಗ್ರಿ ನಗಾಡೋದು? ಬೇರೆ ಕ್ಷೇತ್ರಗಳಿಗೆ ಹೋಗಿ ಹೇಗೆ ಕ್ಯಾನ್‌ವಾಸ್ ಮಾಡಲಿ?" ಎಂದರಂತಲ್ಲಾ, ಥೂತ್ತೇರಿ!

* * * *

ಯಡ್ಡಿಯ ಈ ಸಂಕಟ ತಿಳಿದ ಈಶ್ವರಪ್ಪ ಒಳಗೊಳಗೇ ನಗುತ್ತ, ಹೊಸ ಪೋಜಿನ ಫೋಟೋ ತೆಗೆದು ಪತ್ರಿಕೆಗಳಿಗೆ ಬಿಡುಗಡೆ ಮಾಡಿ "ನಿಮ್ಮ ಸೇವೆಗೆ ನಾನು ಸದಾ ಸಿದ್ಧ" ಎಂದು ಸಂದೇಶವನ್ನು ಕಳಿಸಿದರಂತಲ್ಲಾ, ಈಶ್ವರಪ್ಪನ ಖುಷಿಗೆ ಕಾರಣ ಕೇಳಲಾಗಿ "ಈ ಹಾಳು ಬಂಗಾರಿ ಶಿವಮೊಗ್ಗದಲ್ಲಿ ನಿಂತಿದ್ದರೆ ನನ್ನ ಕತೆ ಮುಗಿದೇ ಹೋಗುತ್ತಿತ್ತು, ಸದ್ಯ ಆ ಶನೇಶ್ವರ ನನ್ನ ಕಡೆ ದೃಷ್ಟಿ ಹರಿಸದೆ ಶಿಕಾರಿಪುರದ ಕಡೆ ಹರಿಸಲಾಗಿ ನಾನು ಬಚಾವಾದೆ" ಎಂದು ಹೊಸ ಹುರುಪಿನಿಂದ ಶೃಂಗಾರಗೊಂಡ ರಾಮಚಂದ್ರಪುರ ಮಠದ ಎತ್ತಿನಂತೆ ಮತ ಕೇಳಲು ಹೊರಟರಂತಲ್ಲಾ, ಇತ್ತ ಈಶ್ವರಪ್ಪನ ಖುಷಿ ಕೇಳಿ ಸಿಟ್ಟಾದ ಯಡ್ಡಿ "ಹೇಗಾದರೂ ಮಾಡಿ ಶರಣ ಸಮೂಹ ಈಶ್ವರಪ್ಪಗೆ ಕೈಕೊಡುವಂತೆ ಮಾಡಬೇಕಲ್ಲಾ" ಎಂದು ಚಿಂತಿಸುತ್ತಿರುವಾಗಲೇ ಶರಣರು ಒಪ್ಪುವಂತಹ ಅಭ್ಯರ್ಥಿಗಳೇ ಈಶ್ವರನೆದುರು ಇಲ್ಲವಂತಲ್ಲಾ, ಥೂತ್ತೇರಿ!

* * * *

ಟಿಕೆಟ್ ಆಕಾಂಕ್ಷಿಗಳು, ಬಂಡಾಯದವರು, ಪಕ್ಷಾಂತರಿಗಳು ಹೀಗೆ ಕರ್ನಾಟಕ ಹಿಂದೆಂದೂ ಕಂಡರಿಯದ ಕ್ಷೋಭೆಯಿಂದ ನರಳುತ್ತಿರಬೇಕಾದರೆ, ಇದರ ಬಿಸಿ ತಟ್ಟಿರುವ ಜೆಡಿಎಸ್ ಅಧ್ಯಕ್ಷ ಮಿರಾಜುದ್ದೀನ್ ಪಟೇಲರನ್ನು ಮಾತನಾಡಿಸಬೇಕೆನಿಸಿತಲ್ಲಾ, ಆ ಕೂಡಲೇ ಫೋನ್ ಮಾಡಲಾಗಿ ಮಿರಾಜುದ್ದೀನ್ ಸಿಕ್ಕೇಬಿಟ್ಟರು.

ರಿಂಗ್ ಟೋನ್: ಇಸ್‌ಬರೀ ದುನಿಯಮೆ ಕೋಯೀ ಹಮಾರಾನಹುವಾ

ಇಸ್‌ಬರೀ ದುನಿಯಮೇ.....

"ಹಲೋ, ಯಾರ್ರು?"

"ನಾನು ಸಾರ್ ಯಾಹು."

"ನಾನು ಶಾರ್ ಯಾಹು ಅಂದ್ರೆ? ನಿಮ್ದು ಮುಖ ಕಾಣ್ತ ಇದೆ ನನ್ಗೆ! ಸರಿಯಾಗಿ ಹೇಳ್ರಿ ಯಾರು ನೀವ್ರು?"

"ಹಿಂದೆ ಒಮ್ಮೆ ಭೇಟಿಯಾಗಿದ್ದಲ್ಲ ಸಾರ್?"

"ನಮ್ಗೆ ದಿವ್ಸ ಸಾವ್ರರಾರು ಜನ ಬರ್ತ್ತರೆ, ಹೋಗ್ತರೆ, ಭೇಟಿ ಆಗ್ತರೆ. ಅವ್ರುದ್ದು ಯೆಲ್ಲಾ ಗ್ಯಾಪಕ ಇರ್ತದ? ನಿಮ್ದು ಯಾವ್ರುರು? ಯಾವ್ದು ಕ್ಷೇತ್ರ? ಯೆಲ್ಲಾ ಏಳ್ಬೇಕು. ಮೊಬೈಲ್ದು ಫೋನಿದೆ ಅಂದುಬಿಟ್ಟು ಶಾರ್ ನಾನು ಅಂದ್ರೆ ತಿಳಿಯಾಕಿಲ್ಲ ಮಾಲೂಮ್? ಟೀಕ್‌ಸೆ ಭಾತ್‌ಕರೊ ಬಯ್ಯಾ."

"ನಾನು ಪತ್ರಕರ್ತ ಯಾಹೂ ಸಾರ್."

"ಪತ್ರಕತ್ತಾ ಯಲ್ಲ ಹೋಗಿ ನಮ್ದು ನಾಯಕರು ಕುಮಾರ್‌ಸ್ವಾಮಿಗೆ ಭೇಟಿ ಮಾಡಿ, ಹೆಲ್ಪು ತಗೋಳಿ. ನಮ್ದು ತಾವ ಏನು ಇಲ್ಲ."

"ನಮಗ್ಯಾವ ಹೆಲ್ಪು ಬೇಡ. ನಿಮ್ಮನ್ನ ಮನೆಲೆ ಕೂಡಾಕಿ ಬೀಗ ಹಾಕಿದ್ರಲ್ಲಾ? ಯಾಕೆ ಸಾರ್?"

"ನಮ್ದು ಪಾರ್ಟಿ ಜನ ನಂದು ಮನೆಲಿ ಹಾಕಿ ಬೀಗ ಹಾಕಿದ್ರು. ಬೇರೆ ಯಾರ್ದು ಮನೆಲಿ ಹಾಕಿಲ್ಲ, ಕಾಂಗ್ರೆಸ್‌ದು ಮನೆಲಿ ಹಾಕಿದ್ರಾ? ಇಲ್ಲ ಬಿಜೆಪಿದು ಮನೆ ಒಳಗಡೆ ಹಾಕಿದ್ರಾ ಇಲ್ಲ, ಇದು ನಂದು ಮನೆ, ನಂದು ಪಾರ್ಟಿ ಜನ ನಂದು ಬೀಗ, ನಿಮ್ಗೆ ಏನಾಯ್ತು?"

"ಕಾರಣ ಕೇಳಿದೆ ಅಷ್ಟೆ ಸಾರ್."

"ಕಾರಣ ಕ್ಲಿಯರ್‌ರಾಗಿದೆ. ಯಾವ್ದು ಮನ್ಸಂಗೆ ಟಿಕೆಟ್ ಸಿಕ್ಕಿಲ್ಲ ಅದು ಬಂದು ಗಲಾಟಿ ಮಾಡಿದೆ. ಅದು ತಪ್ಪು. ನಾನು ಪಾರ್ಟಿ ಪರಸಿಡೆಂಟ್ ಇದೆ, ಸರಿ. ಅದ್ರೆ ಟಿಕೆಟ್ ಕೊಡದು ನಮ್ಮ ಕೈಲಿ ಎಲ್ಲಿದೆ? ನಮ್ದು ಮಾಜಿ ಪರ್‌ದಾನಿಗಳು ಕೊಡ್ತರೆ. ಅಲ್ಲಿ ಕೊಡ್ತರೆ, ಈಸ್ಕಂಡಿ ಹೋಗ್‌ಬೇಕು. ಇಲ್ಲ ಊರಿಗೆ ಹೋಗ್‌ಬೇಕು. ಅದು ಮಾಡದೆ ನಂದು ಮನೆ ಬಾಗಲಿಗೆ ಬಂದು ನಮಾಜ್‌ಮಾಡಿದ್ರೆ ಏನ್ ಪರ್‌ಯೋಜ್ನ?"


"ಅವ್ರುಕೆ ದೇವೇಗೌಡ್ರು ಅಥವಾ ಕುಮಾರಸ್ವಾಮಿ ಮನೆ ಹತ್ರ ಹೋಗಕ್ಕೆ ಧೈರ್ಯ ಇಲ್ಲ ಸಾರ್. ಗುಲಾಮಿ ಸಂತತಿಯವ್ರು. ಅದ್ಕೆ ನಿಮ್ಮ ಮನೆ ಹತ್ರ ಬಂದು ಗಲಾಟೆ ಮಾಡಿವೆ."


"ನೀವು ಹೇಳೋದು ಸರಿ. ಅದ್ರೆ ಗುಲಾಮಿಗಳು ಹೇಳದು ಬೇಡಿ. ಯಾಕಪ್ಪ ಅಂದ್ರೆ, ಅದು ಏನಾಗ್ತದೆ ಅಂದ್ರೆ, ಒಂದು ಹೋಗಿ ಇನ್ನೊಂದು ಆಗ್ತದೆ."

"ಟಿಕೆಟ್ ಕೊಡೊ ಶಕ್ತಿ ಪಾರ್ಟಿ ಅಧ್ಯಕ್ಷನಿಗೆ ಇಲ್ಲ ಅಂದ್ರೆ, ಗುಲಾಮಿ ಸಂತತಿನೆ?"

"ನಾನು ಅಲ್ಲಾಗೆ ಗುಲಾಮ ಆಗ್ತಿನಿ. ಮನ್ಸುನಿಗೆ ಆಗಲ್ಲ. ಫೋನ್ ರಖೊ."

"ಥೂತ್ತೇರಿ!!! ■





ನೆಲವಂಚಕ ಜೈ ಶಂಕರ್‌ನ ಜಾ|ತ|ಕ

ಯಾವ ಆದರ್ಶ ಡೆವಲಪರ್ಸ್ ಕಂಪೆನಿ ತನಗೆ ಮೂರು ಕೋಟಿ ರೂಪಾಯಿಗಳ ಸಾಲಕೊಟ್ಟಿದೆಯೆಂದು ಕರಂದ್ಲಾಜೆ ಲೆಕ್ಕ ಕೊಡುತ್ತಾರೋ; ಅದನ್ನು ಕೊಟ್ಟವನ ಹಿನ್ನೆಲೆಯೇ ಅನೇಕ ಗುಮಾನಿಗಳನ್ನು ಹುಟ್ಟಿಹಾಕುತ್ತದೆ.

ಮೂಲತಃ ಸಿವಿಲ್ ಇಂಜಿನಿಯರ್ ಆಗಿದ್ದ ಎಂ. ಜೈಶಂಕರ್ ಎಂಬಾತನೇ ಆದರ್ಶ ಡೆವಲಪರ್ಸ್‌ನ ಕಾರಣಪುರುಷ. ನಂ. 10, ವಿಠ್ಠಲ್ ಮಲ್ಯ ರಸ್ತೆಯಲ್ಲಿ ತನ್ನ ಲ್ಯಾಂಡ್ ಗ್ರ್ಯಾಬಿಂಗ್ ಅಡ್ಡೆ ತೆರೆದು ಅದಕ್ಕೆ ಆದರ್ಶ್ ಪ್ರೈಮ್ ಪ್ರಾಜೆಕ್ಟ್ ಪ್ರೈ.ಲಿ. ಆದರ್ಶ್ ಡೆವಲಪರ್ಸ್, ಆದರ್ಶ್ ರಿಯಾಲ್ಟಿ ಅಂಡ್ ಹೋಟೆಲ್ಸ್, ಆದರ್ಶ್ ಪ್ರಾಪರ್ಟಿ ಡೆವಲಪ್‌ಮೆಂಟ್ ಮತ್ತು ಆರ್ಕಿಡ್ಸ್ ಅಪಾರ್ಟ್‌ಮೆಂಟ್ಸ್ ಪ್ರೈ.ಲಿ. ಎಂಬ ಬೋರ್ಡು ಬರೆಸಿ ಹಾಕಿದ್ದಾನೆ. ಇವೆಲ್ಲವೂ ಬ್ಯಾಂಕ್ ದೋಚಲೆಂದೇ ಹುಟ್ಟಿಕೊಂಡ ಲೆಟರ್‌ಹೆಡ್ ಕಂಪೆನಿಗಳು. ಜೈಶಂಕರನ ಹೆಂಡತಿ ಸುಧಾಶಂಕರ್ ಮತ್ತು ತಮ್ಮ ಬಿ.ಎಂ.ಕರಣೇಶ್ ಮೂವರೇ ಈ ಎಲ್ಲಕ್ಕೂ ಡೈರೆಕ್ಟರ್‌ಗಳು.

ಕೆಐಎಡಿಬಿ ವಲಯದಲ್ಲಿ ಮರಿಕುಪೇಂದ್ರರೆಡ್ಡಿ ಎಂದೇ ಕುಖ್ಯಾತನಾದ ಜೈಶಂಕರ್ 2002ರಲ್ಲಿ ಬೆಳ್ಳಂದೂರು ರಿಂಗ್ ರಸ್ತೆಗೆ ಹೊಂದಿಕೊಂಡಂತೆ ದೇವರ ಬಿಸನಹಳ್ಳಿಯ 35 ಎಕರೆ ಭೂಮಿಯನ್ನು ದೋಚುತ್ತಾನೆ. ಆದರ್ಶ ಪ್ರೈಮ್ ಪ್ರಾಜೆಕ್ಟ್ ಎಂಬ ನಕಲಿ ಕಂಪೆನಿ ಹುಟ್ಟುಹಾಕಿ ಸಹಸ್ರಾರು ಕನ್ನಡಿಗರಿಗೆ ಕೆಲಸ ಕೊಡುತ್ತೇನೆಂದು ಬಡರೈತರ 35 ಎಕರೆ ಭೂಮಿಯನ್ನು ಪುಡಿಗಾಸಿಗೆ ಸ್ವಾಧೀನ ಮಾಡಿಸಿಕೊಂಡು ಅದನ್ನು ಹತ್ತುಪಟ್ಟು ರೇಟಿಗೆ ಇಂಟೆಲ್ ಎಂಬ ವಿದೇಶಿ ಕಂಪೆನಿಗೆ ಮಾರಿಕೊಳ್ಳುತ್ತಾನೆ. ಎಂಥಾ ಪಾಖಂಡಿಯೆಂದರೆ ಹೀಗೆ ಲಾಭಕ್ಕೆ ಮಾರಿದ್ದನ್ನೇ ಮುಚ್ಚಿಟ್ಟು ತಾನು ವಿದೇಶಿ ಕಂಪೆನಿಯೊಂದಕ್ಕೆ ತನಗೆ ಮಂಜೂರಾದ ಭೂಮಿ ಬಿಟ್ಟುಕೊಟ್ಟದ್ದರಿಂದ ತನಗೆ ಮತ್ತೊಮ್ಮೆ ಪರ್ಯಾಯವಾಗಿ ಭೂಮಿ ಕೊಡುವಂತೆ ಮತ್ತೆ ಕೆಐಎಡಿಬಿಗೆ ಅರ್ಜಿ ಹಾಕುತ್ತಾನೆ. ಕೆಐಎಡಿಬಿಯ ಖದೀಮರು ಎರಡನೇ ಬಾರಿ ಅದೇ ದೇವರ ಬಿಸನಹಳ್ಳಿಯಲ್ಲಿ ಮತ್ತೆ 35 ಎಕರೆ ಬಡರೈತರ ಭೂಮಿ ಕಿತ್ತುಕೊಡುತ್ತಾರೆ. ಬೆಳ್ಳಂದೂರು, ದೇವರಬಿಸನಹಳ್ಳಿ, ದೊಡ್ಡಕನ್ನಲ್ಲಿಯ ರೈತರು ಬೀದಿಗಿಳಿದು ಪ್ರತಿಭಟಿಸಿದರೂ ಲೆಕ್ಕಿಸದೇ ಭೂಮಿ ದೋಚುತ್ತಾನೆ.

ಇಂಥದೊಂದು ಹೈಟೆಕ್ ಭೂಕೊಳ್ಳೆಗೆ ನೆರವಾಗಿದ್ದೇ ಶೋಭಾ ಕರಂದ್ಲಾಜೆ. ಒಂದು ಮೂಲದ ಪ್ರಕಾರ ಜೈಶಂಕರ್‌ನನ್ನು ಯಡ್ಡಿಯ ಬಳಿ ಕರೆದೊಯ್ದು, ಯಡ್ಡಿಯ ಮೂಲಕ ದೇಶಪಾಂಡೆಗೆ ಹೇಳಿಸಿ ಲೂಟಿಗೆ ದಾರಿಮಾಡಿಕೊಟ್ಟ ಕರಂದ್ಲಾಜೆಯನ್ನು ಜೈಶಂಕರ್ ಕ್ರಮೇಣ ತನ್ನ ಪಾರ್ಟನರ್ ಮಾಡಿಕೊಂಡ. ಜೆಡಿಎಸ್-ಬಿಜೆಪಿ ಸಮ್ಮಿಶ್ರ ಸರ್ಕಾರ ಸ್ಥಾಪನೆಗೊಂಡಿದ್ದೇ ಸರ್ಜಾಪುರ ಹೋಬಳಿಯ ಬಿಳಿಚಿಕ್ಕನಹಳ್ಳಿ, ಅಂದೇನಹಳ್ಳಿ, ಆಲಿ ಬೊಮ್ಮಸಂದ್ರ, ಅಡಿಗೊಂಡನಹಳ್ಳಿ, ಮುತ್ತಾನಲ್ಲೂರು, ಚಿಕ್ಕದುನ್ನಸಂದ್ರ, ಚಿಕ್ಕನಹಳ್ಳಿ, ಸಮ್ಮನಹಳ್ಳಿ, ಕೋಟಿಗಾನಹಳ್ಳಿ, ಸೊಳ್ಳೇಪುರ, ಬೂರಗುಂಟೆ ಮತ್ತು ಮುತ್ತಾನಲ್ಲೂರು ಅಮಾನಿಕೆರೆ ಇತ್ಯಾದಿ ಹನ್ನೆರಡು ಗ್ರಾಮಗಳ 1270 ಎಕರೆ ಭೂಮಿಗೆ ಕೆಐಎಡಿಬಿಯಿಂದ ನೋಟಿಫೈ ಮಾಡಿಸಿ ಅಲ್ಲೊಂದು ಎಸ್‌ಇಝೆಡ್ (SEZ)ಗೆ ಮಂಜೂರಾತಿ ಪಡೆದುಕೊಂಡಿದ್ದು ಜೈಶಂಕರ್‌ನ ಭೂಕೊಳ್ಳೆಗೊಂದು ತಾಜಾ ಉದಾಹರಣೆ.

ಒಂದಲ್ಲ, ಎರಡಲ್ಲ, ಹನ್ನೆರಡು ಗ್ರಾಮಗಳ 1270 ಎಕರೆಯನ್ನು ಜೈಶಂಕರ್‌ನ ಖೊಟ್ಟಿ ಕಂಪನಿಗೆಂದು SEZ ಹೆಸರಲ್ಲಿ KIADBಕಿತ್ತುಕೊಡುತ್ತದೆಯೆಂದರೆ ಅದಕ್ಕೆ ಕಟ್ಟಾನಾಯ್ಡುಗಿಂತಲೂ ಯಡ್ಡಿಯ ಒತ್ತಾಸೆಯೇ ಹೆಚ್ಚಿತ್ತು, ಅದಕ್ಕೆ ಕೊಂಡಿಯಾದವಳು ಕರಂದ್ಲಾಜೆ. ಸಾವಿರಾರು ರೈತ ಕುಟುಂಬಗಳನ್ನು ಬೀದಿ ಪಾಲು ಮಾಡಿದ ಪಾಪಕ್ಕೆ ಈಗ ಜೈ ಶಂಕರ್ ಕೊಟ್ಟ ಮೂರು ಕೋಟಿ. ಇದು ಲೆಕ್ಕ, ಖತರ್‌ನಾಕ್ ಕರಂದ್ಲಾಜೆಯ ದೇಶಭಕ್ತಿ? ■


ಕೆನರಾ ಬ್ಯಾಂಕ್ ಮಾಧವನಗರ ಶಾಖೆಯ ಅಕೌಂಟ್ ನಂಬರ್ 56890 ರಲ್ಲಿ ಎರಡು ಲಕ್ಷದ ಎಂಟುನೂರ ಎಂಬತ್ತೆರಡು ರೂಪಾಯಿ ಕ್ಯಾಶ್, ಗಂಗೇನಹಳ್ಳಿಯ ಫೆಡರಲ್ ಬ್ಯಾಂಕಿನಲ್ಲಿ ಎರಡು ಲಕ್ಷ 87 ಸಾವಿರ ರೂಪಾಯಿ ನಗದು, ಅಪೆಕ್ಸ್. ಬ್ಯಾಂಕ್‌ನಲ್ಲಿ 6 ಲಕ್ಷ 63 ಸಾವಿರದ 745 ರೂಪಾಯಿ ಡೆಪಾಸಿಟ್, ಕಪಿಲಾ ಮಂಜುಶ್ರೀ ಅಪ್ಪೆರಲ್ಸ್ ಪ್ರೈ ಲಿ ಎಂಬ ಗಾರ್ಮೆಂಟ್ ಫ್ಯಾಕ್ಟರಿಯ 50 ಸಾವಿರ ರೂ. ಷೇರು, 70 ಸಾವಿರ ರೂಪಾಯಿಯ ಎಲ್‌ಐಸಿ ಷೇರು ಮತ್ತು ಒಂದು ಲಕ್ಷ ರೂಪಾಯಿಯ ಕಿಸಾನ್ ವಿಕಾಸ್ ಪತ್ರ.....!

ಹೀಗೆ ಸಾಗುವ ಶೋಭಾ ಕರಂದ್ಲಾಜೆಯ ಚರ-ಸ್ಥಿರಾಸ್ತಿಯ ಪಟ್ಟಿ ಇಷ್ಟಕ್ಕೇ ಮುಗಿಯುವುದಿಲ್ಲ. ಒಂದಾನೊಂದು ಕಾಲಕ್ಕೆ ಒಪ್ಪತ್ತಿನ ಗಂಜಿಗಾಗಿ ಮಣಿಪಾಲದ ಕಿಮ್ಸ್‌ನಲ್ಲಿ ದಿನಗೂಲಿ ಪರಿಚಾರಿಕೆಯಾಗಿದ್ದಾಕೆ, ಕಂಡಕಂಡವರಲ್ಲಿ ಸಾಲ ಎತ್ತಿ ಬೆಂಗಳೂರಿಗೆ ಓಡಿ ಬಂದಾಕೆ, ಬಿಜೆಪಿ ಕಚೇರಿಯಲ್ಲಿ ಯಕಶ್ಚಿತ್ ಆಫೀಸ್ ಅಸಿಸ್ಟೆಂಟ್ ಆಗಿದ್ದುಕೊಂಡು ಅದರ ತಲಾ ಶಾಸಕನಿಂದ ತಿಂಗಳಾಂಪ್ರತಿ ಎರಡು ಸಾವಿರ ರೂ.ಗಳ ಭಕ್ಷೀಸಿಗಾಗಿ ಕೈಚಾಚುತ್ತಿದ್ದಾಕೆ; ಕೇವಲ ಮೂರೇ ಮೂರು ವರ್ಷದಲ್ಲಿ ಐದು ಕೋಟಿಗೂ ಮೀರಿದ ಆಸ್ತಿವಂತೆಯಾಗುತ್ತಾಳೆಂದರೆ, ಅದನ್ನು ಪವಾಡವೆನ್ನಬೇಕೋ ಅಥವಾ ಭಾವಿ ಮುಖ್ಯಮಂತ್ರಿ ಯಡಿಯೂರಪ್ಪನವರ ವರಪ್ರಸಾದವೆನ್ನಬೇಕೊ?

ಹಾಗಂತ ಇದು ಕರಂದ್ಲಾಜೆಯ ಅಸಲೀ ಆಸ್ತಿ ಪಟ್ಟಿಯಲ್ಲ. ಚುನಾವಣಾಧಿಕಾರಿಗಳಿಗೆ ತನ್ನ ನಾಮಪತ್ರದ ಜೊತೆ ಆಕೆ ಸಲ್ಲಿಸಿದ ಚರ ಮತ್ತು ಸ್ಥಿರಾಸ್ತಿಗಳ ಪಟ್ಟಿಗೂ, ಕೇವಲ ಮೂರೇ ಮೂರು ವರ್ಷದಲ್ಲಿ ಆಕೆ ಸಂಪಾದಿಸಿದ ಬೇನಾಮಿ ಸೊತ್ತಿಗೂ ಅಜಗಜಾಂತರ ವ್ಯತ್ಯಾಸವಿದೆ. ಆದರೂ ಆಕೆಯೇ ಸಹಿ ಹಾಕಿ ಕೊಟ್ಟ ಪ್ರಮಾಣದಲ್ಲಿ ಮೇಲ್ಕಾಣಿಸಿದ್ದಕ್ಕಿಂತಲೂ ಇನ್ನೂ ಏನೇನೋ ವಿವರಣೆಗಳಿವೆ.

ಎಲ್‌ಐಸಿಯ 50 ಸಾವಿರದ ಮತ್ತೊಂದು ಪಾಲಿಸಿ, ಇನ್ನೊಂದು ಲಕ್ಷದ ಮಗದೊಂದು ಪಾಲಿಸಿಯಲ್ಲದೇ ಬಿರ್ಲಾ ಸನ್ ಲೈಫ್‌ನ 70 ಸಾವಿರ ರೂಪಾಯಿ ಮೊತ್ತದ ಒಂದು ಪಾಲಿಸಿ. ಜೊತೆಗೆ 2 ಲಕ್ಷದ ಇನ್ನೊಂದು ಪಾಲಿಸಿಗಳು ಕರಂದ್ಲಾಜೆಯ ಹೆಸರಿಗಿವೆ. ಸಾಮಾನ್ಯವಾಗಿ ತಲಾ ವ್ಯಕ್ತಿಯೊಬ್ಬ ಎಲ್‌ಐಸಿಯಲ್ಲಿ ಒಂದು ಪಾಲಿಸಿ ಮಾಡಿಸುತ್ತಾನೆ. ಆದರೆ ಕರಂದ್ಲಾಜೆ ಎಲ್‌ಐಸಿಯಲ್ಲಿ ಮೂರು ಮತ್ತು ಬಿರ್ಲಾ ಕಂಪೆನಿಯಲ್ಲಿ ಮತ್ತೆರಡು ಒಟ್ಟೂ ಐದು ಪಾಲಿಸಿಗಳ ಒಡತಿ?

ಹತ್ತು ಲಕ್ಷ ರೂಪಾಯಿ ಮೌಲ್ಯದ KA O1 ME 5886 ನಂಬರಿನ ಸಫಾರಿ ಗಾಡಿಯೊಂದೇ ಆಕೆಯ ಹೆಸರಲ್ಲಿದೆಯಂತೆ. ಜೊತೆಗೆ ಐನೂರೈವತ್ತು ಗ್ರಾಂಗಳಷ್ಟು ಚಿನ್ನ ಮತ್ತು ಮೂರು ಕೇಜಿಗೆ ಇನ್ನೂರು ಗ್ರಾಂ ಕಮ್ಮಿಯಷ್ಟು ಬೆಳ್ಳಿಯ ಆಭರಣಗಳಿವೆಯಂತೆ. ಇವೆಲ್ಲದರ ಜೊತೆ ಕಪಿಲಾ ಮಂಜುಶ್ರೀ ಅಪ್ಪೆರಲ್ಸ್ ಎಂಬ ಗಾರ್ಮೆಂಟ್ ಫ್ಯಾಕ್ಟರಿಗೆ ಶೋಭಾ ಮೂರು ಕೋಟಿ ಒಂದು ಲಕ್ಷದ ಇಪ್ಪತ್ತೊಂದು ಸಾವಿರ ರೂಪಾಯಿಗಳ ಸಾಲ ಕೊಡುತ್ತಾಳೆ. ಅದನ್ನು ಚುನಾವಣಾಧಿಕಾರಿಗಳಿಗೆ ಲಿಖಿತವಾಗಿ ತಿಳಿಸುತ್ತಾಳೆ. ಇನ್ನೂ ನಿಗೂಢವೆಂದರೆ ಬೆಂಗಳೂರಿನ ಆದರ್ಶ ಡೆವಲಪರ್ಸ್ ಎಂಬ ನೆಲವಂಚಕ ಕಂಪೆನಿಯಿಂದ ಶೋಭಾ ಮೂರು ಕೋಟಿ ರೂಪಾಯಿಗಳಷ್ಟು ಭಾರೀ ಮೊತ್ತದ ಸಾಲ ಪಡೆದಿದ್ದೇನೆಂದು ಚುನಾವಣಾ ಆಯೋಗಕ್ಕೆ ಪ್ರಮಾಣಪತ್ರ ಸಲ್ಲಿಸುತ್ತಾಳೆ!



ಶೋಭಾ ಕರಂದ್ಲಾಜೆ:

ಇಷ್ಟೆಲ್ಲ ಆಸ್ತಿ ಎಲ್ಲಿಂದ ಬಂತು?



ಒಂದಾನೊಂದು ಕಾಲಕ್ಕೆ ಒಪ್ಪತ್ತಿನ ಗಂಜಿಗಾಗಿ ಮಣಿಪಾಲದ ಕಿಮ್ಸ್‌ನಲ್ಲಿ ದಿನಗೂ ಪರಿಚಾರಿಕೆಯಾಗಿದ್ದಾಕೆ, ಕಂಡಕಂಡವರಲ್ಲಿ ಸಾಲ ಎತ್ತಿ ಬೆಂಗಳೂರಿಗೆ ಓಡಿ ಬಂದಾಕೆ ಬಿಜೆಪಿ ಕಚೇರಿಯಲ್ಲಿ ಯಕಶ್ಚಿತ್ ಆಫೀಸ್ ಅಸಿಸ್ಟೆಂಟ್ ಆಗಿದ್ದುಕೊಂಡು ಅದರ ತಲ ಶಾಸಕನಿಂದ ತಿಂಗಳಾಂಪ್ರತಿ ಎರಡು ಸಾವಿರ ರೂ.ಗಳ ಭಕ್ಷೀಸಿಗಾಗಿ ಕೈಚಾಚುತ್ತಿದ್ದಾಕೆ ಕೇವಲ ಮೂರೇ ಮೂರು ವರ್ಷದಲ್ಲಿ ಐದು ಕೋಟಿಗೂ ಮೀರಿದ ಆಸ್ತಿವಂತೆಯಾಗ ತ್ತಾಳೆಂದರೆ, ಅದನ್ನು ಪವಾಡವೆನ್ನಬೇಕೋ ಅಥವಾ ಭಾವಿ ಮುಖ್ಯಮಂತ್ರಿ ಯಡಿಯೂರಪ್ಪನವರ ವರಪ್ರಸಾದವೆನ್ನಬೇಕೊ?

■ ರಾ. ಸೋಮನಾಥ

ಎಚ್‌ಎಸ್‌ಆರ್ ಲೇಔಟಿನ ಸೈಟ್ ನಂ. 133/A ರಲ್ಲಿ 50x80 ಅಳತೆಯ ನಿವೇಶನ, ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲ್ಲೂಕು ಚಾರ್ವಾಕ ಗ್ರಾಮದಲ್ಲಿ ಎರಡೆಕರೆ ಮತ್ತು 11 ಗಂಟೆಯ ಪಿತ್ರಾರ್ಜಿತ ಸೊತ್ತು ಮತ್ತು ಪುತ್ತೂರಿನಲ್ಲೊಂದು ಕಾಂಪ್ಲೆಕ್ಸ್- ಇದಿಷ್ಟೂ ಶೋಭಾ ಕರಂದ್ಲಾಜೆಯ ಚರ-ಸ್ಥಿರಾಸ್ತಿಗಳ ಅಧಿಕೃತ ಪಟ್ಟಿ.

ಈ ಪ್ರಕಾರವೇ ಲೆಕ್ಕ ಹಾಕುವುದಾದರೆ ದ.ಕ. ಜಿಲ್ಲೆ ಪುತ್ತೂರು ತಾಲ್ಲೂಕು ಚಾರ್ವಾಕ ಗ್ರಾಮದ ಮೋನಪ್ಪ ಗೌಡರ ದ್ವಿತೀಯ ಪುತ್ರಿ ಶೋಭಾ ಕರಂದ್ಲಾಜೆ 2005ರ ತನಕ ಕೂಡಿಟ್ಟ ಕಾಸೆಂದು 6700 ರೂಪಾಯಿ ಬಿಟ್ಟರೆ ಬೇರೇನೂ ಇರಲಿಲ್ಲ, ಅಪ್ಪ ಮೋನಪ್ಪ ಗೌಡ ಕೂಡ ಸಾಮಾನ್ಯ ರೈತ. ಸ್ವಂತಕ್ಕೊಂದು ಸಣ್ಣ ಹೆಂಚಿನ ಮನೆ ಮತ್ತು ಪಿತ್ರಾರ್ಜಿತವಾಗಿ ಬಂದಿದ್ದ ಎರಡೆಕರೆ ಹನ್ನೊಂದು ಗುಂಟೆ ಜಮೀನಿನ ಹೊರತಾಗಿ ನಯಾಪೈಸೆಯ ಆದಾಯ ಮೂಲವಿರಲಿಲ್ಲ, 1990 ರಲ್ಲಿ ಶೋಭಾ ಮಂಗಳೂರು ವಿಶ್ವವಿದ್ಯಾಲಯದಲ್ಲಿ MSW ಪದವಿ ಮುಗಿದ ನಂತರ 1996 ರಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಎಂ.ಎ. ಮುಗಿಸಿ ತಿಂಗಳಿಗೆ ಯಕಶ್ಚಿತ್ ಎರಡೂವರೆ ಸಾವಿರ ರೂಪಾಯಿ ಸಂಬಳಕ್ಕಾಗಿ ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ ಪರಿಚಾರಿಕೆಯಾಗುತ್ತಾಳೆ.

ಈ ಹಂತದಲ್ಲೇ ಲೆಕ್ಚರರ್ ಓರ್ವ ಕರಂದ್ಲಾಜೆಯನ್ನು ಇನ್ನಿಲ್ಲದಂತೆ ವಂಚಿಸುತ್ತಾನೆ. ಇನ್ನೇನು ಬದುಕೇ ಮುಗಿದು ಹೋಯಿತೆನ್ನುವಾಗ ಶೋಭಾ ಕೈಹಿಡಿದವನು ಲೋಕಲ್ ಆರೆಸ್ಸೆಸ್ ನಾಯಕ ಅಪ್ಪಯ್ಯ ಮಣಿಯಾಣಿ ಆತನ ಮೂಲ ಆರೆಸ್ಸೆಸ್‌ನ ಮಹಿಳಾ ಘಟಕವಾದ ರಾಷ್ಟ್ರಸೇವಿಕಾ ಸಂಘ ಕಾಲಿಟ್ಟ ಶೋಭಾ 1997 ರಲ್ಲಿ ಉಡುಪಿಯಲ್ಲಿ ಬಿಜೆ ಪರ ಪ್ರಚಾರಕ್ಕೆಂದು ಬಂದಾಗಲೇ ರಾಜ್ಯ ಬಿಜೆಪಿ ನಾಯ ಯಡ್ಡಿಯ ಕಣ್ಣು ಕುಕ್ಕಿದ್ದು!

ಅಲ್ಲಿಂದಾಚೆಗೆ ಆಮೆ ಗತಿಯಲ್ಲಿದ್ದ ಶೋಭಕ್ಕನ ಲಕ ರಾಕೆಟ್ ವೇಗದಂತೆ ಏರುತ್ತಾ ಹೋಗುತ್ತದೆ. 199 ರಲ್ಲಿ ಯಡ್ಡಿಯೇ ನಿಂತು ಆಕೆಯನ್ನು ರಾಜ್ಯ ಬಿಜೆ ಕಾರ್ಯಾಲಯಕ್ಕೆ ಕರೆತರುತ್ತಾರೆ. ಅದೇ ವರ್ಷ ಉಡು ಜಿಲ್ಲೆಗೆ ಮಹಿಳಾ ಮೋರ್ಛಾದ ಕಾರ್ಯದರ್ಶಿಯಾ ಶೋಭಾ ಆದಾಗಿ ಮೂರೇ ತಿಂಗಳಿಗೆ ರಾಜ್ಯ ಮಹಿಳ ಮೋರ್ಛಾದ ಕಾರ್ಯದರ್ಶಿಯಾಗುತ್ತಾಳೆ. 2000 ಹೊತ್ತಿಗೆ ರಾಜ್ಯ ಬಿಜೆಪಿ ಕಾರ್ಯದರ್ಶಿಯಾಗಿ, 200 ರಲ್ಲಿ ಎಮ್ಮೆಲ್ಸಿಯಾಗುವ ಶೋಭಾ ಇನ್ನೇನು ಕುಮಾರಸ್ವಾ ಸಂಪುಟದಲ್ಲಿ ಮಂತ್ರಿಯಾಗಿಬಿಡುತ್ತಿದ್ದಳೋ ಏನೋ!

ಅನಂತ್ ಬಣದ ಆಕ್ರೋಶದ ಕಾರಣಕ್ಕೆ ಮಂತ್ರಿ ತಪ್ಪಿಸಿಕೊಂಡ ಶೋಭಾ ಬೆಳೆದ ಪರಿ ಎಂಥವರಿಗ ಅಚ್ಚರಿ ಹುಟ್ಟಿಸುವಂಥದ್ದೆ. 2000 ದಿಂದ 2004 ರ ಎಮ್ಮೆಲ್ಸಿಯಾಗುವ ತನಕ ಪ್ರತಿ ತಿಂಗಳೂ ಬಿಜೆಪಿಯ ಒಬ್ಬೊಬ್ಬ ಎಮ್ಮೆಲ್ಲೇ ಆಕೆಯ ಖರ್ಚಿಗೆಂದು ಎರಡ ಸಾವಿರ ರೂಪಾಯಿ ಕೊಡುವಂತೆ ಯಡ್ಡಿ ಗೋಗರೆಯು ತ್ತಿದ್ದರು. ತಮ್ಮ ಲಕ್ಷ್ಮಣ ಮಾಗಡಿರೋಡಿನ ಫೈನಾನ ಅಡ್ಡೆಯೊಂದರಲ್ಲಿ ಪಿಗ್ಮಿ ಕಲೆಕ್ಟರಾಗಿದ್ದ. ಸಾಲ ಕೊಟ್ಟವ ಕರಂದ್ಲಾಜೆಯನ್ನು ಹುಡುಕಿಕೊಂಡು ಬಿಜೆಪಿ ಕಚೇರಿ ಎಡತಾಕುತ್ತಿದ್ದರು. ಸಂಬಳ ಭತ್ಯೆ ಅಂತ ನೋಡಿದ್ದು 200 ಕ್ಕೆ ಆಕೆ ಎಮ್ಮೆಲ್ಸಿಯಾದ ನಂತರವೇ. ಆ ಪ್ರಕಾ ತಿಂಗಳೊಂದಕ್ಕೆ ಎಮ್ಮೆಲ್ಸಿ ಭತ್ಯೆ ಎಂದು ಕನಿಷ್ಠ ಐವತ್ತ ಸಾವಿರ ರೂಪಾಯಿಯಂತೆ ಲೆಕ್ಕ ಹಾಕಿದರೂ ಮನೆಬಾಡಿ ರೇಷನ್, ಪೆಟ್ರೋಲು, ಫೋನ್ ಎಲ್ಲಾ ಕಳೆದು ಹತ ಸಾವಿರಕ್ಕಿಂತಲೂ ಹೆಚ್ಚಿನ ದುಡ್ಡನ್ನು ಉಳಿಸಲು ಸಾಧ್ಯವ ಇಲ್ಲ. ಇದರ ಹೊರತಾಗಿ ಬೇರೆ ಯಾವುದೇ ವ್ಯಾಪಾ

ಲೆಕ್ಕ ಕೊಟ್ಟದ್ದು ಕವಡೆ ಕಿಮ್ಮತ್ತಿನ ಸೊತ್ತಾದರೆ ಕರಂದ್ಲಾಜೆ ಬಚ್ಚಿಟ್ಟದ್ದು ಬೆಟ್ಟದಷ್ಟಿದೆ.

ಸದ್ಯ ತನ್ನ ವಿಳಾಸವೆಂದು ನಂ. 18, ಶ್ರೀಕಂಠಯ್ಯ ಲೇಔಟ್, ಕ್ರೆಸೆಂಟ್ ರೋಡ್, ಹೈಗ್ರೌಂಡ್ಸ್, ಬೆಂಗಳೂರು 1 ಎಂದು ಪ್ರಮಾಣದಲ್ಲಿ ನಮೂದಿಸಿರುವುದು ನಿಜವಾದರೂ ಅದು ತಾನು ಬಾಡಿಗೆಗಿರುವ ಮನೆ ಎಂಬುದು ಕರಂದ್ಲಾಜೆಯ ವಾದ. ವಾಸ್ತವವೇನೆಂದರೆ ಅದು ಕೂಡ ಕರಂದ್ಲಾಜೆಯ ಬೇನಾಮಿ ಆಸ್ತಿಯೇ. ತನ್ನ ಆರೆಸ್ಸೆಸ್ ಗುರು ಅಪ್ಪಯ್ಯ ಮಣಿಯಾಣಿ ಹೆಸರಲ್ಲಿ ಫ್ಲಾಟ್ ಖರೀದಿಸಿ ಅದನ್ನು ತನಗೆ ಬಾಡಿಗೆಗೆ ಕೊಟ್ಟಂತೆ ದಾಖಲೆ ಸೃಷ್ಟಿಸಿಕೊಂಡಿದ್ದಾಳೆ.

ಹಾಗೇ ಕರಂದ್ಲಾಜೆಗೆ ಇದನ್ನು ಗಿಫ್ಟ್ ಆಗಿ ಕೊಟ್ಟವನು ಯಡ್ಡಿಯ ಬಲಗೈ ಬಂಟ ಮತ್ತು ಮಾಲೂರಿನ ನೆಲಕಂಟಕ ಶಾಸಕ ಕೃಷ್ಣಯ್ಯ ಶೆಟ್ಟಿ!

ಇದೊಂದೇ ಒಂದೂವರೆ ಕೋಟಿಯ ಸೊತ್ತಾಗುತ್ತದೆ. ಇದಲ್ಲದೇ ಇಲ್ಲಿಗೆ ಮೂರೂವರೆ ತಿಂಗಳ ಹಿಂದೆ ಮತ್ತಿಕೆರೆಯ ಇಸ್ರೋ ಲೇಔಟಿನಲ್ಲೊಂದು ಭರ್ಜರಿ ಬಂಗಲೆ ಖರೀದಿಸಿದ್ದಾಳೆ. ಅದೇ ಮೂರು ಕೋಟಿಯ ಬೆಲೆ ಬಾಳುತ್ತದೆ. ಅದನ್ನು ತನ್ನ ತಂಗಿಯ ಹೆಸರಿಗೆ ಮಾಡಿಸಿಟ್ಟ ಬೆನ್ನಲ್ಲೇ ಕ್ರೆಸೆಂಟ್ ರಸ್ತೆಯ ಅಪಾರ್ಟ್‌ಮೆಂಟ್ ಖಾಲಿ ಮಾಡಿ ತೀರ ಇತ್ತೀಚೆಗೆ ಕುಮಾರಪಾರ್ಕ್‌ನ ರೈಲ್ವೇ ಪ್ಯಾರಲಲ್ ರಸ್ತೆಯ 60x40 ಬಂಗಲೆಯೊಂದಕ್ಕೆ ಮನೆ ಬದಲಾಯಿಸುತ್ತಾಳೆ. ಅದು ಬಿಜೆಪಿ ನಾಯಕ ರಾಮಚಂದ್ರ ಗೌಡರು ಶೋಭಾಗೆಂದೇ ಕೊಟ್ಟ ಪ್ರೀತಿಯ ಕಾಣಿ ಕಮ್ಮಿಯೆಂದರೂ ಅದು ಎರಡೂವರೆ ಕೋಟಿಯ ಆಸ್ತಿ. ಅದನ್ನು ತನ್ನ ಅಕ್ಕನ ಹೆಸರಿ ಮಾಡಿಸಿದ್ದಾಳೆ. ರಾಮಚಂದ್ರಗೌಡರ ಗೆಳೆಯ ಮಿಲ್ಟ್ರಿ ಅಧಿಕಾರಿಯೊಬ್ಬರಿಗೆ ಸೇರಿ ಸದರಿ ಸೊತ್ತು ಕರಂದ್ಲಾಜೆಯ ಅಕ್ಕ ಮತ ತಮ್ಮ ಲಕ್ಷ್ಮಣನ ಜಂಟಿ ಒಡೆತನ ಬಂದದ್ದು ಕೂಡ ಚೊಕ್ಕಸದ ಲೂಟಿಯ ಯಡ್ಡಿ ಉಪಮುಖ್ಯಮಂತ್ರಿಯಾ ದ್ದಷ್ಟೂ ದಿನ ಕರಂದ್ಲಾಜೆ ಮತ್ತು ರಾಮಚಂ ಗೌಡರ ಮಗ ಸಪ್ತಗಿರಿಗೌಡ ಸೇರಿಕೊಂಡ ವಿಂಡ್ಸರ್ ಮ್ಯಾನರ್ ಹೋಟೆಲಿನಲ್ಲೊಂದು ರೂಮ ಹಿಡಿದು ಡೀಲಿಗಿಳಿದರು. ಸಿಂಗಲ್ ನಂಬರ್ ಲಾಟರಿ

ಬಚ್ಚಿಟ್ಟ ಬೇನಾಮಿ ಸೊತ್ತೇ ಹತ್ತು ಕೋಟಿ!

ವ್ಯವಹಾರಗಳಿಲ್ಲ, ಏನೇ ಲಗಾಟ ಹೊಡೆದರೂ ಕರಂದ್ಲಾಜೆ ಎಮ್ಮೆಲ್ಸಿಯಾಗಿ ಈತನಕ ಐದು ಲಕ್ಷಕ್ಕಿಂತ ಹೆಚ್ಚಿನ ಮೊತ್ತವನ್ನು ಕೂಡಿ ಹಾಕಲು ಸಾಧ್ಯವೇ ಇಲ್ಲ.

ಆದರೆ ತನ್ನ ಮೂರು ಬ್ಯಾಂಕ್ ಖಾತೆಗಳಲ್ಲಿ ಈಕೆ ಕೂಡಿಟ್ಟ ದುಡ್ಡೇ ಹನ್ನೊಂದು ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚಿನ ಮೊತ್ತವಾಗುತ್ತದೆ. ಐದೂ ಇನ್ಶೂರೆನ್ಸ್ ಪಾಲಿಸಿಗಳನ್ನು ಗುಡ್ಡೆ ಹಾಕಿದರೆ ಅದೇ ಆರೂವರೆ ಲಕ್ಷವಾಗುತ್ತದೆ. ಹಾಗಿದ್ದರೆ ಅರ್ಧ ಕೇಜಿಗಿಂತಲೂ ಹೆಚ್ಚು ತೂಕದ ಚಿನ್ನ ಖರೀದಿಸಲು ದುಡ್ಡು ಎಲ್ಲಿಂದ ಬಂತು? ಎರಡೂ ಮುಕ್ಕಾಲು ಕೇಜಿಯಷ್ಟು ಬೆಳ್ಳಿ, ಸಫಾರಿ ಕಾರ್ ಕೊಳ್ಳಲು, ಹತ್ತು ಲಕ್ಷ ಎಚ್‌ಎಸ್‌ಆರ್ ಲೇಔಟನಲ್ಲಿ ಸೈಟುಕೊಳ್ಳಲು ಮತ್ತೆ ಹತ್ತು ಲಕ್ಷದಷ್ಟು ನಿಧಿ ಹೇಗೆ ಯಾರಿಂದ ಬಂತು?

ಇದು ಕರಂದ್ಲಾಜೆಯ ಚುನಾವಣಾ ಪ್ರಮಾಣ ಪತ್ರದ ತಕ್ಕ ಲೆಕ್ಕವಾದರೆ, ಬಚ್ಚಿಟ್ಟದ್ದು, ಬೇನಾಮಿ ಆಸ್ತಿ, ಬ್ಲಾಕ್ ಮನಿ ಇತ್ಯಾದಿಗಳ ಲೆಕ್ಕವೇ ಭಯಂಕರವಾಗಿದೆ. ತನ್ನ ಆಸ್ತಿ ವಿವರಣೆಯ ಪ್ರಮಾಣದಲ್ಲಿ ಎಚ್‌ಎಸ್‌ಆರ್ ಲೇಔಟಿನ ಸೈಟಿನ ಬೆಲೆಯನ್ನು ಕೇವಲ ಹತ್ತು ಲಕ್ಷ ಎಂದು ನಮೂದಿಸುತ್ತಾಳೆ. ಆದರೆ 50x80 ಅಳತೆಯ ಸದರಿ ನಿವೇಶನವನ್ನು ಕಳ್ಳನಿಗೆ ಕೊಟ್ಟರೂ ಎರಡೂವರೆ ಕೋಟಿ ಕೊಡುತ್ತಾನೆ!

ಎಲ್ಲಿಯ ಹತ್ತು ಲಕ್ಷ ಎಲ್ಲಿಯ ಎರಡೂವರೆ ಕೋಟಿ?

ತನ್ನ ಪ್ರಮಾಣಪತ್ರದಲ್ಲಿ ತಾನು ಮೂರು ಕೋಟಿ ರೂಪಾಯಿಗಳಷ್ಟನ್ನು ಪೀಣ್ಯದ ಕಪಿಲಾ ಮಂಜುಶ್ರೀ ಅಪ್ಪೆರಲ್ಸ್ ಎಂಬ ಗಾರ್ಮೆಂಟ್ ಕಂಪೆನಿಗೆ ಸಾಲವಾಗಿ ಕೊಟ್ಟಿದ್ದೇನೆಂದೂ, ಬೆಂಗಳೂರಿನ ಆದರ್ಶ ಡೆವಲಪರ್ಸ್‌ನಿಂದ ಮೂರು ಕೋಟಿ ರೂಪಾಯಿಗಳ ಸಾಲ ಪಡೆದಿದ್ದೇನೆಂದೂ ತೋರಿಸುತ್ತಾಳೆ. ಅದು ಕರಂದ್ಲಾಜೆ-ಯಡ್ಡಿ ಮತ್ತು ಆದರ್ಶ ಡೆವಲಪರ್ಸ್ ಧಣಿ ಜೈಶಂಕರ್ ನಡುವಿನ ನಿಗೂಢ ಸಂಬಂಧವೊಂದರ ತುಣುಕಷ್ಟೆ....!



ಕಪಿಲಾ ಮಂಜುಶ್ರೀ ಅಪ್ಪೆರಲ್ಸ್ ಎಂಬ ಗಾರ್ಮೆಂಟ್ ಫ್ಯಾಕ್ಟರಿಯೊಂದು ಪೀಣ್ಯ ಎರಡನೇ ಹಂತದ ಡೊಡ್ಡಣ್ಣ ಇಂಡಸ್ಟ್ರಿಯಲ್ ಎಸ್ಟೇಟಿನಲ್ಲಿದೆ. ಇದು ಬಿಜೆಪಿ ನಾಯಕ ಯಡ್ಡಿಯ ದ್ವಿತೀಯ ಪುತ್ರಿ ಉಮಾದೇವಿಯ ಒಡೆತನದ ಕಂಪೆನಿ. ಉಮಾದೇವಿಯ ಪತಿ ಅರ್ಥಾತ್ ಯಡ್ಡಿಯ ಅಳಿಯ ಸೋಹನ್ ಎಂಬಾತನೇ ಇಡೀ ಕಂಪೆನಿಯ ಸೂತ್ರಧಾರ. ಕಪಿಲಾ ಮತ್ತು ಮಂಜುಶ್ರೀ ಇಬ್ಬರೂ ಯಡ್ಡಿಯ ಮೊಮ್ಮಕ್ಕಳು. ಅಂದರೆ ಉಮಾದೇವಿ-ಸೋಹನ್ ದಂಪತಿಗಳ ಮಕ್ಕಳು.

ತನ್ನ ಪರಮಾಪ್ತ ಯಡ್ಡಿಯದೇ ಗಾರ್ಮೆಂಟ್ ಕಂಪೆನಿ. ಮಗಳು(!) ಸಮಾನಳದ ಕರಂದ್ಲಾಜೆ ಮೂರು ಕೋಟಿ ರೂಪಾಯಿಗಳಷ್ಟು ಸಾಲ ಕೊಡುತ್ತಾಳೆಂದರೆ ಅದನ್ನು ಹುಚ್ಚರ ಹೊರತಾಗಿ ಬೇರೆ ಯಾರಾದರೂ ನಂಬುತ್ತಾರಾ?

ಅಷ್ಟಕ್ಕೂ ನಿರ್ಗತಿಕಳಾದ ಕರಂದ್ಲಾಜೆಯಿಂದ ಮೂರು ಕೋಟಿ ಸಾಲಕ್ಕೆ ಕೈಚಾಚುವಷ್ಟು ದಾರಿದ್ರ್ಯ ಯಡ್ಡಿಗಿಲ್ಲ. ಈ ಮೂರು ಕೋಟಿಯನ್ನು ತಾನು ಆದರ್ಶ ಡೆವಲಪರ್ಸ್‌ನಿಂದ ಸಾಲ ಪಡೆದು ಕೊಟ್ಟಿದ್ದೇನೆಂದು ಮತ್ತೆ ಕರಂದ್ಲಾಜೆ ಸುಳ್ಳು ಪ್ರಮಾಣ ಪತ್ರದಲ್ಲಿ ಸಲ್ಲಿಸಿದ್ದು ಕೂಡ ಕಪಟ ನಾಟಕವಲ್ಲದೇ ಮತ್ತೇನಲ್ಲ, ಆದರ್ಶ ಡೆವಲಪರ್ಸ್ ಎಂಬುದು ಬೆಂಗಳೂರಿನ ಮತ್ತೊಬ್ಬ ಕುಖ್ಯಾತ ನೆಲಗಳ್ಳ ಜೈಶಂಕರ್ ಎಂಬಾತನ ನಕಲಿ ಕಂಪೆನಿ. ಲ್ಯಾಂಡ್ ಗ್ರಾಬಿಂಗ್ ಬಿಟ್ಟರೆ ಮತ್ತೇನೂ ಗೊತ್ತಿಲ್ಲದ ಜೈಶಂಕರ್ ಶೋಭಾ ಕರಂದ್ಲಾಜೆಗೆ ಏಕೆ ಮೂರು ಕೋಟಿ ಸಾಲ ಕೊಡುತ್ತಾನೆ? ಸಂಬಂಧಿಯಲ್ಲದ, ಪಕ್ಷದವನೂ ಅಲ್ಲದ ಭೂಡಕಾಯಿತ ಜೈಶಂಕರ್ ಯಾವ ಗ್ಯಾರಂಟಿಯ ಮೇಲೆ ಕರಂದ್ಲಾಜೆಗೆ ಮೂರು ಕೋಟಿಯಷ್ಟು ಭಾರಿ ಮೊತ್ತದ ಸಾಲ ಕೊಟ್ಟ?

ಹಕೀಕತ್ತೇನೆಂದರೆ ಈ ಆದರ್ಶ ಡೆವಲಪರ್ಸ್ ಧಣಿ ಜೈಶಂಕರ್ ಕೂಡ ಯಡ್ಡಿಯ ಬೇನಾಮಿ. ಯಡ್ಡಿಯನ್ನು ಮುಂದಿಟ್ಟುಕೊಂಡು ಈತ ಬೆಳ್ಳಂದೂರು ರಿಂಗ್‌ರೋಡ್‌ನಲ್ಲಿ ಕೆಐಎಡಿಬಿಯ ಮೂಲಕ ದೋಚಿದ ಬಡರೈತರ ಭೂಮಿಯಲ್ಲಿ ಯಡ್ಡಿ ಮತ್ತು ಕರಂದ್ಲಾಜೆ ಇಬ್ಬರು ಪಾಲು ಪಡೆದಿದ್ದಾರೆ. ಹಾಗೇ ಯಡ್ಡಿಗೆ ಸಂದಾಯವಾಗಬೇಕಿದ್ದ ಮೂರು ಕೋಟಿಯಷ್ಟು ಲಂಚದ ದುಡ್ಡೇ ಶೋಭಾ ಕರಂದ್ಲಾಜೆಗೆ ಸಾಲದ ರೂಪದಲ್ಲಿ ಸಂದಾಯವಾಗಿ ಅದೇ ದುಡ್ಡು once again ಯಡ್ಡಿಯ ಮಗಳ ಗಾರ್ಮೆಂಟ್ ಫ್ಯಾಕ್ಟರಿಗೆ ಹರಿದುಬಂದಿದೆ. ಅದೀಗ ಕರಂದ್ಲಾಜೆಯ ಪ್ರಮಾಣಪತ್ರದ ಮೂಲಕ ಬಯಲಾಗುತ್ತಿದೆ.

ಯಡ್ಡಿ ಮತ್ತು ಕರಂದ್ಲಾಜೆ ಸೇರಿಕೊಂಡು ಹೊಡೆದ ಕೊಳ್ಳೆಯ ಸಣ್ಣ ಸುಳಿವೊಂದು ಈ ಮೂಲಕ ಬಯಲಾಗುತ್ತಿದೆ. ಅರೆಗಳಿಗೆಯ ಅಧಿಕಾರದಲ್ಲೇ ಈ ಪಾಟ ದೋಚಿದ ಕರಂದ್ಲಾಜೆ ಇನ್ನು ಗೆದ್ದು ಎಮ್ಮೆಲ್ಲೆಯಾದರೆ ಗತಿಯೇನು? ಈಕೆಯ ಖೊಟ್ಟಿ ಪ್ರಮಾಣಪತ್ರದ ಕುರಿತು ತನಿಖೆ ಮಾಡುವವರ್‍ಯಾರು? ■

ಆಮದನಿಯ ಜೊತೆಗೆ ಅಬಕಾರಿ ಟ್ರಾನ್ಸ್‌ಫರ್, ಲಿಕ್ಕರ್ ದಂಧೆಕೋರರ ಉಸಾಬರಿಗಳನ್ನೆಲ್ಲ ಕರಂದ್ಲಾಜೆಯೇ ನಿಭಾಯಿಸಬೇಕಿತ್ತು, ಕೊಳ್ಳೆಯ ದುಡ್ಡಲ್ಲಿ ಪುತ್ತೂರಿನ ಚಾರ್ವಾಕದ ಅಕ್ಕನ ಗಂಡನಿಗೊಂದು ಸ್ಕಾರ್ಪಿಯೋ ಕೊಡಿಸಿದ್ದು, ಅದೇ ಊರಲ್ಲೊಂದು ಭರ್ಜರಿ ಬಂಗಲೆಯೆಬ್ಬಿಸಿದ್ದು, ಪುತ್ತೂರಿನಲ್ಲೊಂದು ಕಾಂಪ್ಲೆಕ್ಸ್ ಕಟ್ಟಿಸಿದ್ದು, ಮಂಗಳೂರಿನಲ್ಲಿ ತಂಗಿಯ ಹೆಸರಿಗೆ ಮತ್ತೊಂದು ಬಂಗಲೆ ಮತ್ತು ತಮ್ಮ ಲಕ್ಷ್ಮಣನನ್ನು ಬಳ್ಳಾರಿಯ ಗಣಿ ದರೋಡೆ ಜನಾರ್ದನ್ ರೆಡ್ಡಿಯ ದಂಧೆಯಲ್ಲಿ ಪಾಲುದಾರನನ್ನಾಗಿ ಮಾಡಿದ್ದು ಕರಂದ್ಲಾಜೆಯ ಅಗಾಧ ಬುದ್ಧಿಗೆ ಕೆಲ ಸ್ಯಾಂಪಲ್ಲುಗಳಷ್ಟೇ. ಗಣಿ ಲೂಟಿಯ ಪಾಲುದಾರಿಕೆಯ ಹೊರತಾಗಿಯೂ ಇಷ್ಟೆಲ್ಲ ಸೊತ್ತಿನ ಮೊತ್ತ ಹತ್ತು ಕೋಟಿಯನ್ನು ಮೀರುತ್ತದೆ.

ಕರಂದ್ಲಾಜೆಯ ಇಂಥ ಬೇನಾಮಿ ಆಸ್ತಿಯ ಬಗ್ಗೆಯೂ ತನಿಖೆಯಾಗಬೇಕು. ■

ಯಡ್ಡಿ ವಿರುದ್ಧ ನಾದಿನಿಯರ ದೂರು!

ಯಡ್ಡಿ ಎಂತೆಂಥಾ ಘನಂದಾರಿ ಕೆಲಸ ಮಾಡಿ ಮುಖ್ಯಮಂತ್ರಿ ಸ್ಥಾನದವರೆಗೂ ಏರಿದ ಎಂಬುದಕ್ಕೆ ಇಲ್ಲೊಂದು ಚಿಕ್ಕ ಉದಾಹರಣೆಯಿದೆ. ಈತನ ವಿರುದ್ಧ ಖುದ್ದು ನಾದಿನಿಯರಾದ ಶ್ರೀಮತಿ ವಿಜಯಮ್ಮ ಕೋಂ ಪಂಚಾಕ್ಷರಿ ಮತ್ತು ಶ್ರೀಮತಿ ಮಂಜುಳ ಕೋಂ ಷಡಕ್ಷರಿ ಎಂಬುವವರೇ ಪೊಲೀಸರಿಗೆ ದೂರು ನೀಡಿ ಯಡ್ಡಿ ತಮ್ಮ ಮೇಲೆ ನಡೆಸುತ್ತಿರುವ ದೌರ್ಜನ್ಯಗಳನ್ನು ವಿವರಿಸಿ ಆತನ ವಿರುದ್ಧ ಕ್ರಮ ಕೈಗೊಂಡು ತಮಗೆ ನ್ಯಾಯ ಒದಗಿಸಬೇಕೆಂದು ಕೇಳಿದ್ದರು.

ಆ ದೂರಿನಲ್ಲಿ ಅವರಿಬ್ಬರೂ ಶಿಕಾರಿಪುರದ ಶಾಸಕ ಯಡಿಯೂರಪ್ಪನವರ ಸಹಚರರು ತಮ್ಮ ಮೇಲೆ ಪದೇ ಪದೇ ಹಲ್ಲೆ ನಡೆಸುತ್ತಿದ್ದಾರೆಂದೂ, ತಮ್ಮ ಗಂಡಂದಿರರಿಗೆ ಹುಚ್ಚರ ಪಟ್ಟ ಕಟ್ಟಿ, ಅವರನ್ನು ಗೃಹಬಂಧನದಲ್ಲಿರಿಸಿದ್ದಾರೆಂದೂ, ತಮ್ಮಿಂದ ಕೆಲವು ಕಾಗದಪತ್ರಗಳ ಮೇಲೆ ಬಲವಂತವಾಗಿ ಸಹಿ ಪಡೆದು ತಮ್ಮ ಆಸ್ತಿಪಾಸ್ತಿಗಳನ್ನು ಮೋಸದಿಂದ ವಶಪಡಿಸಿಕೊಂಡಿದ್ದಾರೆಂದೂ ದೂರಿದ್ದರು. ಅಷ್ಟೇ ಅಲ್ಲ, ಯಡಿಯೂರಪ್ಪ ಶಿಕಾರಿಪುರದ ಶಾಸ್ತ್ರಿ ಮನೆತನಕ್ಕೆ ಅಳಿಯನಾಗಿ ಬಂದಮೇಲೆ ಆಸ್ತಿಯನ್ನೆಲ್ಲಾ ವಿಂಗಡನೆ ಮಾಡಿ ಆತನ ಪತ್ನಿಗೆ ಸೇರಬೇಕಾದ ಭಾಗವನ್ನು ಕೊಟ್ಟು ರಿಜಿಸ್ಟರ್ ಮಾಡಿಕೊಟ್ಟಿದ್ದೂ ಅಲ್ಲದೆ 1974-75ರಲ್ಲಿಯೇ ಅವರ ಮಾವನವರು 'ಯಡಿಯೂರಪ್ಪನಿಗೂ ತಮಗೂ ಇನ್ನು ಮುಂದೆ ಯಾವುದೇ ಸಂಬಂಧವಿಲ್ಲ' ಎಂದು ಪತ್ರಿಕಾ ಹೇಳಿಕೆ ನೀಡಿ ಸ್ಪಷ್ಟಪಡಿಸಿದ್ದರು. ಆದರೂ ಯಡಿಯೂರಪ್ಪನವರು ತಮ್ಮನ್ನು ಬೆದರಿಸಿ ಆಸ್ತಿಪಾಸ್ತಿಯನ್ನು ವಶಪಡಿಸಿಕೊಂಡಿದ್ದಾರೆಂದು ದೂರಿನಲ್ಲಿ ಆರೋಪಿಸಿದ್ದರು. ಅಲ್ಲದೇ, ಈ ಕುರಿತು ಯಡಿಯೂರಪ್ಪನವರ ವಿರುದ್ಧ ಶಿಕಾರಿಪುರ ಪೊಲೀಸ್ ಠಾಣೆಗೆ ಹಲವು ಬಾರಿ ದೂರು ಕೊಟ್ಟಿದ್ದರೂ ಏನೂ ಪ್ರಯೋಜನವಾಗಿಲ್ಲವೆಂದು ಹೇಳಿ ಯಡಿಯೂರಪ್ಪನವರ ವಿರುದ್ಧ ಕ್ರಮ ಕೈಗೊಂಡು ತಮ್ಮಗೆ ತಮ್ಮ ಆಸ್ತಿಪಾಸ್ತಿಗಳನ್ನು ವಾಪಾಸ್ಸು ಕೊಡಿಸಿ ನ್ಯಾಯ ಒದಗಿಸಬೇಕೆಂದು ಬಿನ್ನವಿಸಿಕೊಂಡಿದ್ದರು.

ಕೊನೆಗೆ, ತಮ್ಮ ಕುಟುಂಬದಲ್ಲಿ ಏನಾದರೂ ಸಾವು ನೋವು ಸಂಭವಿಸಿದರೆ ಅದಕ್ಕೆ ಯಡಿಯೂರಪ್ಪನವರೇ ಕಾರಣ ಎಂದು ಹೇಳಿದ್ದರು. ಯಡ್ಡಿಯ ಪಾಖಂಡಿತನಕ್ಕೆ ಇದಕ್ಕಿಂತ ಜಾಸ್ತಿ ಪುರಾವೆ ಬೇಕೆ?

ಕೀಚಕ ಯಡ್ಡಿಯ ನಾದಿನಿ ಪೀಡನಾ ಪುರಾಣ

ಬಿಜೆಪಿ ನಾಯಕ ಯಡಿಯೂರಪ್ಪನವರ ಕ್ರೌರ್ಯ, ದುಷ್ಟತನ, ಆಸ್ತಿದಾಹ ಮತ್ತು ವಿಕೃತಿಗಳೆಲ್ಲ ಮೊದಲ ಬಾರಿಗೆ ಬಯಲಾಗಿದ್ದು 1997 ರಲ್ಲಿ.

1997 ರ ಡಿಸೆಂಬರ್ 4 ರಂದು ರಾಜ್ಯ ಹೈಕೋರ್ಟ್ ಶಿಕಾರಿಪುರದ ಡಿವೈಎಸ್‌ಪಿ ಮತ್ತು ಪ್ರದೇಶ ಬಿಜೆಪಿ ಅಧ್ಯಕ್ಷರಾಗಿದ್ದ ಯಡಿಯೂರಪ್ಪನವರಿಗೆಂದು ಹೊರಡಿಸಿದ ನೋಟೀಸಿನಲ್ಲಿ ಕೋರ್ಟ್ ಸ್ಪಷ್ಟವಾಗಿಯೇ ಹೇಳಿತ್ತು, ಆಸ್ತಿ ಲಪಟಾಯಿಸಲೆಂದು ತನ್ನ ಪತ್ನಿಯ ಸೋದರ ಮತ್ತು ಆತನ ಪತ್ನಿಗೆ ಪ್ರಾಣ ಬೆದರಿಕೆ ಹಿಂಸೆಕೊಟ್ಟ ಯಡಿಯೂರಪ್ಪ ಮತ್ತು ಈ ಸಂಬಂಧ ದೂರನ್ನೇ ದಾಖಲಿಸದ ಶಿಕಾರಿಪುರದ ಡಿವೈಎಸ್‌ಪಿ ಇಬ್ಬರೂ 1998 ರ ಮಾರ್ಚ್ 18 ರಂದು ಖುದ್ದಾಗಿ ಬಂದು ಹೈಕೋರ್ಟ್ ಕಟಕಟೆಯಲ್ಲಿ ನಿಲ್ಲತಕ್ಕದ್ದು!


ರಾಜ್ಯ ಹೈಕೋರ್ಟ್ ನ್ಯಾಯಮೂರ್ತಿಗಳಾದ ಆರ್.ಪಿ. ಸೇಠಿ ಮತ್ತು ವಿ. ಗೋಪಾಲಗೌಡರ ವಿಭಾಗೀಯ ನ್ಯಾಯಪೀಠ ಈ ರೀತಿಯ ತೀರ್ಪು ಕೊಡುವುದಕ್ಕೂ ಕಾರಣವಿತ್ತು, ಅದು ಯಡ್ಡಿಯ ದುಷ್ಟತನ ಮತ್ತು ಕಾಮವಿಕೃತಿ!

ಕೆ.ಆರ್. ಪೇಟೆಯ ಬೂಕನಕೆರೆಯಲ್ಲಿ ಲಿಂಬೆಹಣ್ಣಿನ ಮೂಟೆಯನ್ನು ಸೈಕಲ್ಲೊಂದಕ್ಕೆ ಪೇರಿಸಿಕೊಂಡು ಬೀದಿಬೀದಿ ಸುತ್ತಿ ಮಾರುತ್ತಿದ್ದ ಯಡಿಯೂರಪ್ಪನವರನ್ನು ಶಿಕಾರಿಪುರಕ್ಕೆ ಕರೆತಂದು, ತಮ್ಮ ಮಗಳು ಮೈತ್ರಾದೇವಿಯನ್ನು ಕೊಟ್ಟು ಮನೆ ಅಳಿಯನನ್ನಾಗಿ ಮಾಡಿಕೊಂಡ ಪಾಪಕ್ಕೆ ಶಿಕಾರಿಪುರದ ಹಿರೀಕ ವೀರಭದ್ರಾ ಶಾಸ್ತ್ರಿಗಳಿಗೆ ಯಡ್ಡಿ ತಕ್ಕ ಶಿಕ್ಷೆಯನ್ನೇ ವಿಧಿಸಿದ್ದ.



ಪಂಚಾಕ್ಷರಿ, ಷಡಾಕ್ಷರಿ ಮದುವೆಯಾದಾಗ ಹೀಗಿದ್ದರು.


ರೈಸ್ ಮಿಲ್, ಹೆಂಚಿನ ಕಾರ್ಖಾನೆ, ಬೇಕಾಬಿಟ್ಟಿ ಜಮೀನಿದ್ದ ವೀರಭದ್ರಾ ಶಾಸ್ತ್ರಿಗಳ ಮೊದಲ ಮಗಳೇ ಮೈತ್ರಾದೇವಿ. ಎರಡನೆಯವಳು ಭ್ರಮರಾಂಭ. ಆನಂತರದವರೇ ಪಂಚಾಕ್ಷರಿ ಮತ್ತು ಷಡಾಕ್ಷರಿ ಎಂಬ ಅವಳಿ ಜವಳಿ. ಯಾವತ್ತು ತಮ್ಮ ಎರಡನೇ ಮಗಳು



ಭ್ರಮರಾಂಭಳ ಗರ್ಭಿಣಿ ಹೆಣ ಮನೆ ಹಿಂದಿನ ಬಾವಿಯಲ್ಲಿ ತೇಲಾಡಿತೋ ಆಗಲೇ ಮಾವ ವೀರಭದ್ರಾ ಶಾಸ್ತ್ರಿಗಳಿಗೆ ಯಡ್ಡಿಯ ದುಷ್ಟಬುದ್ಧಿಯ ವಾಸನೆ ಹತ್ತಿದೆ. ಅದೇ ಹೊತ್ತಿಗೆ ಯಡ್ಡಿ ಮಾವನ ಹೆಸರಲ್ಲಿ ಅನೇಕ ಜನಕ್ಕೆ ಟೋಪಿ ಹಾಕಿದ್ದೂ ಬಯಲಾಗಿದೆ.

ನಾಲ್ಕೆಕರೆ ಜಮೀನು ಬರೆದು ಕೊಟ್ಟದ್ದೇ ಮಗಳು ಅಳಿಯ ಇಬ್ಬರನ್ನೂ ಮನೆಯಿಂದ ಹೊರದಬ್ಬಿದ್ದ ಶಾಸ್ತ್ರಿಗಳು ಆನಂತರ ಹಾಸಿಗೆ ಬಿಟ್ಟೇಳಲೇ ಇಲ್ಲ. ಕೊರಗಿಗೆ ಬಿದ್ದೇ ಕೊನೆಯುಸಿರೆಳೆದರು. ಪತ್ನಿ ಗಂಗಮ್ಮ ಕೂಡ ಬೆನ್ನಲ್ಲೇ ತೀರಿಕೊಂಡರು. ಯಡ್ಡಿಯ ಪಾಲಿಗಿದು ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಗಿತ್ತು.

ಪಾಳು ಮನೆಗೆ ಉಳಿದವನೇ ಗೌಡನಂತೆ ಪತ್ನಿ ಮೈತ್ರಾದೇವಿಯ ಅವಳಿ ತಮ್ಮಂದಿರಿಗೆ ಚನ್ನಗಿರಿ ತಾಲ್ಲೂಕು ಸಂತೆಬೆನ್ನೂರಿನ ಜಗಳೂರು ಮಾದಪ್ಪನ ಇಬ್ಬರು ಹೆಣ್ಣುಮಕ್ಕಳನ್ನು ತಂದು ಗಂಟು ಹಾಕಿದ್ದು ಕೂಡ ಯಡ್ಡಿಯ ಹುನ್ನಾರವಾಗಿತ್ತು. ಈ ಪೈಕಿ ಹಿರಿಯವನಾದ ಪಂಚಾಕ್ಷರಿಗೆ ವಿಜಯಮ್ಮ ಪತ್ನಿಯಾದರೆ ಷಡಾಕ್ಷರಿಗೆ ಮಂಜುಳಾ ಹೆಂಡತಿಯಾದಳು. ಅದೇನಾಯಿತೋ ಬರುಬರುತ್ತ ಷಡಾಕ್ಷರಿ ಮತ್ತು ಪಂಚಾಕ್ಷರಿ ಹುಚ್ಚು ಹುಚ್ಚಾಗಿ ವರ್ತಿಸಲಾರಂಭಿಸಿದ್ದಾರೆ.



ಇಂದಿನ ಪಂಚಾಕ್ಷರಿ, ಷಡಾಕ್ಷರಿ

ವಿಜಯಮ್ಮ ಹೇಳುವಂತೆ ಅದು ಯಡ್ಡಿಯ ವಾಮಾಚಾರದ ಫಲ. ಪದೇಪದೇ ಕೇರಳಕ್ಕೆ ಹೋಗಿ ಬರುತ್ತಿದ್ದ ಯಡಿಯೂರಪ್ಪ ಪ್ರತಿ ಅಮವಾಸ್ಯೆಯಂದು ಪಂಚಾಕ್ಷರಿ-ಷಡಾಕ್ಷರಿಗಳ ಮನೆ ಬಾಗಿಲಲ್ಲಿ ಮಂತ್ರಿಸಿದ ನಿಂಬೆಹಣ್ಣು ಮತ್ತು ತಾಯಿತಗಳನ್ನು ಇಡುತ್ತಿದ್ದ!

ಬಹುಶಃ ಯಡ್ಡಿಯ ಮುಖ ಕಂಡಿದ್ದೇ ಆ ಅವಳಿಗಳಿಗೆ ಬಾವಿಯಲ್ಲಿ ಹೆಣವಾಗಿ ತೇಲಿದ ತಮ್ಮ ಅಕ್ಕ ಭ್ರಮರಾಂಭಳ ನೆನಪಾಗುತ್ತಿತ್ತೋ ಏನೊ. ಇದಾದ ಕೆಲದಿನಕ್ಕೇ ಅವರಿಬ್ಬರನ್ನೂ ಧಾರವಾಡದ ಹುಚ್ಚಾಸ್ಪತ್ರೆಗೆ ಸೇರಿಸಿದ ಯಡ್ಡಿ ಇತ್ತ ಅವರಿಬ್ಬರ ಹೆಂಡಿರ ಯೋಗಕ್ಷೇಮಕ್ಕೇ ಮೊದಲ ಆದ್ಯತೆ ಕೊಟ್ಟರು!

ಹೇಳು ಕೇಳುವವರಿಲ್ಲದ ಕುಟುಂಬವೊಂದು ಯಡ್ಡಿಯ ಕಪಿಮುಷ್ಟಿಗೆ ಸಿಲುಕಿತ್ತು. ಈ ಹಂತದಲ್ಲೇ ಯಡ್ಡಿಗೆ ಮಾವನ ಆಸ್ತಿ ದೋಚುವ ದುರಾಶೆ ಬಲಿತಿದೆ. ಪಂಚಾಕ್ಷರಿಯ ಪತ್ನಿ ವಿಜಯಮ್ಮನನ್ನು ಅದು ಹೇಗೋ ಒಪ್ಪಿಸಿದ ಯಡ್ಡಿ ಒಂದೊಂದಾಗಿ ಆಕೆಯ ಆಸ್ತಿ ಬರೆಸಿಕೊಳ್ಳಲಾರಂಭಿಸಿದ್ದಾರೆ. ಈ ಪೈಕಿ ಶಿಕಾರಿಪುರದ ಸರ್ಕಾರಿ ಆಸ್ಪತ್ರೆ ಪಕ್ಕದ ನಾಲ್ಕೆಕರೆ ಜಾಗವನ್ನು ಅಂಬಾರ ಗೊಪ್ಪಲು ನಾಗಪ್ಪನಿಗೆ ಹದಿನೇಳು ಲಕ್ಷಕ್ಕೆ ಮಾರಿಕೊಂಡರು. ನಾಗಪ್ಪ ಅದನ್ನು ಸೈಟು ಮಾಡಿ ಮಾರಿಕೊಂಡ.

ವೀರಭದ್ರಾ ಶಾಸ್ತ್ರಿಗಳ ಹೆಸರಿಗೆ ಚನ್ನಳ್ಳಿಯಲ್ಲಿದ್ದ ಏಳೆಕರೆ ಜಮೀನನ್ನು ತನ್ನ ಮಗ ರಾಘವೇಂದ್ರನ ಹೆಸರಿಗೆ ಬರೆಸಿಕೊಂಡು ಅದಕ್ಕೆಂದು ಸಬ್ ರಿಜಿಸ್ಟ್ರಾರ್ ಬೋಜ್ಯಾ ನಾಯಕನನ್ನು ಮನೆಗೇ ಕರೆಸಿಕೊಂಡ ಯಡ್ಡಿ ಧಮಕಿ ಹಾಕಿಯೇ ವಿಜಯಮ್ಮನಿಂದ ಸಹಿ ಮಾಡಿಸಿಕೊಂಡ, ಯಡಿಯೂರಪ್ಪ ಇನ್ನೇನು ರೈಸ್ ಮಿಲ್ ಮತ್ತು ಹೆಂಚಿನ ಫ್ಯಾಕ್ಟರಿಗಳನ್ನು ಬಲವಂತ ಮಾಡಿ ಬರೆಸಿಕೊಳ್ಳಬೇಕೆನ್ನುವಷ್ಟರಲ್ಲಿ ಇಬ್ಬರೂ ನಾದಿನಿಯರು ಸಹನೆಯ ಕಟ್ಟೆ ಒಡೆದಿದೆ. ವಡ್ನಾಳ್ ರಾಜಣ್ಣ ಮತ್ತು ಶಿವಮೊಗ್ಗದ ಶಾಂತ ಬಸ್ ಮಾಲೀಕ ಚಂದ್ರಪ್ಪರಂಥ ಸಂಬಂಧಿಗಳೂ ಯಡ್ಡಿಗೆ ಹೆದರಿ ಅವರಿಗೆ ನೆರವಾಗದೇ ಹೋದಾಗ ಸಹೋದರಿಯರಿಬ್ಬರೂ ಶಿಕಾರಿಪುರದ ಜನರ ಮೊರೆ ಹೊಕ್ಕಿದ್ದಾರೆ.

ಈ ಹಂತದಲ್ಲಿ ಅವರ ನೆರವಿಗೆ ಬಂದದ್ದು ಸ್ಥಳೀಯ ವಿಶಾಲವಾರ್ತೆ ಸಂಪಾದಕ ವೇಣುಗೋಪಾಲ್ ಮತ್ತು ಯಡ್ಡಿಯ ಎದುರಾಳಿ ನಗರದ ಮಾದೇವಪ್ಪ!

ಇಂಥವರು ಧೈರ್ಯ ಕೊಡದೇ ಹೋಗಿದ್ದರೆ ಸೋದರಿಯರಿಬ್ಬರೂ ತಮ್ಮ ದುರ್ಗತಿಯನ್ನು ಹೈಕೋರ್ಟ್ ನ್ಯಾಯಮೂರ್ತಿಗಳಿಗೆ ಪತ್ರ ಬರೆದು ಸಹಾಯ ಕೋರುವುದು ಸಾಧ್ಯವಿರಲಿಲ್ಲ, ಅಕ್ಕತಂಗಿಯರು ಬರೆದ ಪತ್ರವನ್ನೇ ರಿಟ್ ಅರ್ಜಿಯನ್ನಾಗಿ ಪರಿಗಣಿಸಿದ ಹೈಕೋರ್ಟ್ 1997 ರ ಡಿಸೆಂಬರ್ 4 ರಂದು ಶಿಕಾರಿಪುರದ ಡಿವೈಎಸ್‌ಪಿಯ ಜೊತೆ ಯಡಿಯೂರಪ್ಪ ಕೂಡ ಕಟಕಟೆಗೆ ಬರಬೇಕೆಂಬ ಆದೇಶ ಹೊರಡಿಸಿದೆ. ಅದು ಎಲ್ಲಾ ಪತ್ರಿಕೆಗಳಲ್ಲೂ ಸುದ್ದಿಯಾಗುತ್ತಿದ್ದಂತೆ ಯಡ್ಡಿಯ ತಲೆ ಕೆಲಸ ಮಾಡಿದೆ.

ಆ ಹೊತ್ತಿಗೆ ಯಡ್ಡಿ ರಾಜ್ಯ ಬಿಜೆಪಿ ಅಧ್ಯಕ್ಷ. ವಿರೋಧ ಪಕ್ಷದ ನಾಯಕ ಕೂಡ. ಎಲ್ಲಿ ತನ್ನ ವಿರುದ್ಧವೇ ಕ್ರಿಮಿನಲ್ ಕೇಸು ದಾಖಲಾಗುತ್ತೋ ಎಂದು ಹೆದರಿ ತನ್ನ ನಾದಿನಿಯರಿಬ್ಬರನ್ನೂ ಕರೆಸಿ ಸರಿ ಮಾಡಿಕೊಂಡರು ಯಡಿಯೂರಪ್ಪ ಬಹುಶಃ ಹೈಕೋರ್ಟ್ ಯಡ್ಡಿಯ ಅಸಹಾಯಕ ನಾದಿನಿಯರಿಬ್ಬರ ನೆರವಿಗೆ ಬರದೇ ಹೋಗಿದ್ದರೆ, ಈತನಕ ಮೈತ್ರಾದೇವಿಯ ತಮ್ಮಂದಿರಿಬ್ಬರೂ ಹುಚ್ಚಾಸ್ಪತ್ರೆಯಿಂದ ಹೊರಬರುತ್ತಿರಲಿಲ್ಲ ಮತ್ತು ಯಡ್ಡಿಯ ಮಾವ ವೀರಭದ್ರ ಶಾಸ್ತ್ರಿಗಳ ಚೂರುಪಾರು ಆಸ್ತಿಯೂ ಆ ಹೆಣ್ಣುಮಕ್ಕಳಿಗೆ ದಕ್ಕುತ್ತಿರಲಿಲ್ಲ!

ಇದು ಭಾವೀ ಮುಖ್ಯಮಂತ್ರಿ ಯಡಿಯೂರಪ್ಪನವರ ದುಷ್ಟತನಕ್ಕೆ ಒಂದು ಉದಾಹರಣೆಯಷ್ಟೇ. ಇಷ್ಟಾದ ನಂತರವೂ ಯಡ್ಡಿ ತನ್ನ ನಾದಿನಿಯರಿಗೆ ದಕ್ಕಬೇಕಿದ್ದ ಪೂರ್ತಿ ಸೊತ್ತನ್ನು ಹಿಂತಿರುಗಿಸಿಲ್ಲವೆಂದರೆ ಆತನ ಕಪಿಮುಷ್ಟಿಯಲ್ಲಿ ನರಳುತ್ತಿರುವ ಮೈತ್ರಾದೇವಿಯ ಇಬ್ಬರು ತಮ್ಮಂದಿರು ಮತ್ತು ಅವರ ಪತ್ನಿಯರನ್ನು ಯಾರು ತಾನೇ ಕಾಪಾಡಲು ಸಾಧ್ಯ?

ಹೆಣ್ಣು ಕೊಟ್ಟ ಮಾವನ ಇಡೀ ಮನೆತನವನ್ನೇ ಸರ್ವನಾಶ ಮಾಡಿದ ಯಡಿಯೂರಪ್ಪ ಇನ್ನು ಕರ್ನಾಟಕಕ್ಕೆ ಯಾವ ಗತಿ ಕಾಣಿಸುತ್ತಾರೋ?

■ ದಾ. ಸೋಮನಾಥ್

ಯಡ್ಡಿ ದೊಡ್ಡ ಲೀಡರ್ ಅಲ್ಲ



ಕರ್ನಾಟಕದ ಪರಾಕ್ರಮಿ ರಾಜಕಾರಣಿ ಬಂಗಾರಪ್ಪ ಶಿಕಾರಿಪುರದಿಂದ ಸ್ಪರ್ಧಿಸುವ ಘೋಷಣೆ ಮಾಡಿ ಇನ್ನೂ 24 ಗಂಟೆಯೂ ಆಗಿಲ್ಲ, ಆಗಲೇ ಸದಾಶಿವನಗರದ ಅವರ ಮನೆ ಹತ್ತಿರ ಅಸಾಧ್ಯ ಜನಜಂಗುಳಿ.

ಈಗ ರಾಜ್ಯಾದ್ಯಂತ ಕಂಪನ ಸೃಷ್ಟಿಸಿರುವ ಈ ಸುದ್ದಿ ಕುರಿತೇ ಮಾತನಾಡಲು ಬಂಗಾರಪ್ಪ ಸಿಕ್ಕರು.

ಅಚ್ಚುಕಟ್ಟಾದ ಪುಟ್ಟ ಕಚೇರಿ, ಒಳಗೊಂದು ಖಾಸಗಿ ಚೇಂಬರ್, ಸೊಗಸಾದ ಚೇರು-ಟೇಬಲ್‌ಗಳು... ನಮ್ಮ ಸಂದರ್ಶನ ನಡೆದದ್ದು ಅಲ್ಲೆ.

75 ವಯಸ್ಸಿನ ಬಂಗಾರಪ್ಪ ಚುರುಕಾಗಿ ನಡೆದು ಬಂದು ಕುಳಿತರು. ರಾಜ್ಯಾದ್ಯಂತ ಸಂಚಲನ ಸೃಷ್ಟಿಸುವಂತ, ಇಡೀ ಎಲೆಕ್ಷನ್ ಹವಾವನ್ನೇ ಬದಲಿಸಿದ ನಿರ್ಧಾರ ಕೈಗೊಂಡಿದ್ದರೂ ಬಂಗಾರಪ್ಪ ಮಾತ್ರ ಕೂಲಾಗಿದ್ದರು. ಚುಟುಕಾದ ಮಾತು, ಸಿಟ್ಟು, ವ್ಯಂಗ್ಯ ಹಾಗೂ ದೂರದೃಷ್ಟಿಯಿರುವ ಅವರ ಕೆಲವು ಮಾತುಗಳನ್ನು ಇಲ್ಲಿ ದಾಖಲಿಸಿದೆ.

ಸಂದರ್ಶನ

ಲಂ: ಇದೊಂದು ಸೆನ್ಸೇಷನಲ್ ನ್ಯೂಸ್....!

ಬಂ: (ನಕು) ಹಾಗೇನಿಲ್ಲ, ಎಲೆಕ್ಷನ್ ಅಂದ ಮೇಲ ಇವೆಲ್ಲಾ ಇದ್ದಿದ್ದೆ.

* ಶಿಕಾರಿಪುರವನ್ನೇ ಯಾಕೆ ಆರಿಸಿಕೊಂಡಿರಿ?

ಬಂ: ಏನಿಲ್ಲ.... ಅಸೆಂಬ್ಲಿಗೆ ಬರಬೇಕು ಅಂತ ನನ್ನ ತೀರ್ಮಾನ.

* ಅದು ಸರಿ. ಆದರೆ ಬೇರೆ ಕ್ಷೇತ್ರಗಳಿದ್ದವಲ್ಲ, ಸಾಗರದಿಂದ ನಿಲ್ಲೋ ಯೋಚನೇನೂ ನಿಮಗಿತ್ತು ಅಲ್ವಾ?

ಬಂ: ಹೌದು... ಹೌದು ಆದರೆ ಶಿಕಾರಿಪುರದ ಜನರ ಒತ್ತಡ ಬಹಳ ಇತ್ತು, ಅವರೆಲ್ಲಾ ಇಲ್ಲೇ ಬಂದು ಸ್ಪರ್ಧಿಸಿ ಅಂತ ಒತ್ತಾಯ ಮಾಡಿದ ಕಾರಣ ಅಲ್ಲಿ ನಿಲ್ಲುತ್ತಿದ್ದೀನಿ. ಶಿಕಾರಿಪುರ ಸೇರಿದಂತೆ ಇಡೀ ಶಿವಮೊಗ್ಗ ಜಿಲ್ಲೇನೇ ನನ್ನ ಪಾರ್ಲಿಮೆಂಟ್ ಕ್ಷೇತ್ರಕ್ಕೆ ಬರುತ್ತೆ.

* ಮೊದಲು ಸಾಗರ-ಶಿಕಾರಿಪುರ ಎರಡೂ ಕಡೆ ನಿಲ್ಲೋ ಬಗ್ಗೆ ಮಾತಾಡಿದ್ರಿ?

ಬಂ: (ತಲೆಯಾಡಿಸುತ್ತಾ) ಈಗ ಶಿಕಾರಿಪುರ ಒಂದೇ ಕ್ಷೇತ್ರ ಅಂತ ತೀರ್ಮಾನ ಆಗಿದೆಯಲ್ಲ.

* ನಿಮ್ಮ ತೀರ್ಮಾನ ಇಡೀ ಬಿಜೆಪಿಗೆ ಶಾಕ್ ನೀಡಿಬಿಟ್ಟಿದೆ....!

ಬಂ: ಅದನ್ನು ನಾನು ನೋಡಲ್ಲ, ಬೇರೆ ವಿಚಾರಾನೂ ಮಾತಾಡಲ್ಲ.

* ಹಾಗಲ್ಲ, ನಾವಿನ್ನೇನು ಗೆದ್ದೇಬಿಟ್ಟೆವು ಅಂತ ಭ್ರಮಿಸಿಕೊಂಡಿರುವ ಬಿಜೆಪಿ ಪಾರ್ಟಿ ಮತ್ತು ಕಾರ್ಯಕರ್ತರ ಹುಮ್ಮಸ್ಸಿಗೆ ನಿಮ್ಮ ಸ್ಪರ್ಧೆಯ ತೀರ್ಮಾನ ಪರಿಣಾಮ ಬೀರುತ್ತೆ ಅನ್ನಿಸುತ್ತದೆ!

ಬಂ: (ಯೋಚಿಸಿ) ಒಂದೊಂದು ಸಾರಿ ಹಾಗಾಗುತ್ತೆ ನಿಜ.

* ಅಲ್ಲ ಸಾರ್, ಯಡಿಯೂರಪ್ಪ ದೊಡ್ಡ ಲೀಡರ್...

ಬಂ: (ನಡುವೆ ಪ್ರವೇಶಿಸಿ) ನೋಡಿ ದೊಡ್ಡ ವ್ಯಕ್ತಿ ಅಂತ ಅವರೇ ಅಂದುಕೋಬೇಕಷ್ಟೇ. ಪ್ರತಿ ಪಾರ್ಟಿಗೂ ಒಬ್ಬ ಲೀಡರ್ ಇದ್ದೇ ಇರ್ತಾನೆ. ಹಾಗೇನೇ ಯಡಿಯೂರಪ್ಪ ಕೂಡ.

* ಈ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಜೊತೆ ಏನಾದರೂ ಮಾತುಕತೆ ಆಗಿದೆಯಾ?

ಬಂ: ಇಲ್ಲ, ನಾನು ದೆಹಲಿಗೆ ಹೋಗಿದ್ದು ನಮ್ಮ ಸಮಾಜವಾದಿ ಪಾರ್ಟಿ ನಾಯಕರನ್ನು ಭೇಟಿ ಮಾಡೋಕೆ, ಅಷ್ಟೆ.

* ನೀವು ಮಾತುಕತೆಗೆ ಬಂದಿದ್ದು ನಿಜ ಅಂತ ಕಪಿಲ್ ಸಿಬಲ್ ಹೇಳಿದ್ದಾರೆ?

ಬಂ: ಅವರು ಯಾರೂಂತಾನೆ ನನಗೆ ಗೊತ್ತಿಲ್ಲ, ಈ ಕಾಂಗ್ರೆಸ್‌ನವರ ಹತ್ತಿರ ಮಾತಾಡೋವಾಗ ಹುಷಾರಾಗಿರಬೇಕು. ಕುತ್ತಿಗೆಗೆ ಬಂದಾಗ ಹೈಕಮಾಂಡ್ ಅನ್ನಾರೆ. ಬೇರೆ ಟೈಂನಲ್ಲಿ ನಾನೇ ಹೈಕಮಾಂಡ್ ಅಂದುಬಿಡ್ತಾರೆ.

* ಈಗಿನ ಎಲೆಕ್ಷನ್‌ನಲ್ಲಿ ನಿಮ್ಮ ಒಟ್ಟಾರೆ ಪಾತ್ರ ಹಾಗೂ ಯೋಜನೆ ಏನು?

ಬಂ: **Everybody will become important.**

* ಬಿಜೆಪಿ ಬಗ್ಗೆ ನಿಮ್ಮ ಅಭಿಪ್ರಾಯ ಏನು?

ಬಂ: ಅವರ ನೀತಿ ನನಗೆ ಒಪ್ಪಿಗೆಯಿಲ್ಲ.

* ನೀವು ಎಲೆಕ್ಷನ್‌ಗೆ ಯಾವತ್ತೂ ಹೆದರಿದೋರಲ್ಲ, ಪದೇಪದೇ ರಿಸ್ಕ್ ತಗೊಂಡರೂ ಗೆದ್ದಿದ್ದೀರಿ... ಏನಿದರ ಕಾರಣ?

ಬಂ: **It comes out of our experience.** ಮತ್ತೆ ನಾನು ಮೊದಲಿಂದಲೂ ಪ್ರಿನ್ಸಿಪಲ್‌ಗೆ ಬದ್ಧನಾಗಿರುವ ಮನುಷ್ಯ. ಬಿಜೆಪಿ ಬಿಟ್ಟ ಮೇಲೆ ಸಂಸದನ ಸ್ಥಾನಕ್ಕೂ ರಾಜೀನಾಮೆ ಕೊಟ್ಟೆ, ಮತ್ತೆ ಎಸ್‌ಪಿಯಿಂದ ನಿಂತು ಗೆದ್ದೆ.

* ಒಂದು ಸಾರಿ ಬಾಗಲಕೋಟೆಲಿ ಸಿದ್ದು ನ್ಯಾಮಗೌಡರಂಥ ಹೊಸಬರನ್ನ ಕರೆತಂದು ರಾಮಕೃಷ್ಣ ಹೆಗಡೇನೇ ಸೋಲಿಸಿದ್ದೀರಿ. ಆಗ ನಿಮಗೆ ಗೆದ್ದೆಗೆಲ್ಲುವ ನಂಬಿಕೆ ಇತ್ತ?

ಬಂ: ಹೌದು, ನಾನಾಗ ಮುಖ್ಯಮಂತ್ರಿಯಾಗಿದ್ದೆ. ಸ್ವತಃ ರಾಜೀವ್ ಗಾಂಧಿ 'ಈ ಹುಡುಗ ಹೆಗಡೇನ ಸೋಲಿಸೋಕ್ಕಾಗುತ್ತಾ, Can you do that' ಅಂತ ಕೇಳಿದ್ದರು.

ನಾನು `Let me take this challenge' ಅಂತ ಹೇಳಿಬಂದಿದ್ದೆ. ಹಾಗೆ ಸಿದ್ದು ನ್ಯಾಮಗೌಡರನ್ನು ಗೆಲ್ಲಿಸಿ ಕೇಂದ್ರದಲ್ಲಿ ಮಂತ್ರಿನೂ ಮಾಡಿಸಿದೆ.

* ನೀವು ಶಿಕಾರಿಪುರಕ್ಕೆ ಬಂದಿದ್ದು ನೋಡಿ ಯಡಿಯೂರಪ್ಪ ಬೇರೆ ಇನ್ನೊಂದು ಕ್ಷೇತ್ರ ಹುಡುಕುತ್ತಿದ್ದಾರಂತೆ!

ಬಂ: ಇದು ನನಗೆ ಗೊತ್ತಿಲ್ಲ, (ಆಗ ಅಲ್ಲೇ ಕುಳಿತಿದ್ದ ಶಿಕಾರಿಪುರದ ಬೇರೊಂದು ಪಕ್ಷದ ನಾಯಕರೊಬ್ಬರು 'ತುಮಕೂರಿಗೆ ಹೋಗಬಹುದು ಸಾರ್' ಎಂದರು. ಇದನ್ನು ಕೇಳಿ ನಸುನಕ್ಕ ಬಂಗಾರಪ್ಪ ಮಾತು ಮುಂದುವರೆಸುತ್ತಾ)

ಬಂ: ನಾರ್ಥ್ ಕರ್ನಾಟಕದ ಕಡೆ ಯಾವುದಾದರೂ ಕ್ಷೇತ್ರ ಇದೆಯಾ ಅಂತ... (ನಗು)

* ಯಡಿಯೂರಪ್ಪ ಕ್ಷೇತ್ರದಲ್ಲಿ ಬಹಳ ಕೆಲಸ ಮಾಡಿಸಿದ್ದಾರಂತಲ್ಲ?

ಬಂ: ಅಲ್ಲಿಗೇ ಹೋಗಿ ನೋಡಿ ಗೊತ್ತಾಗುತ್ತೆ, ಕೆರೆಹೂಳು ತೆಗೆಸೊ ಕಾಮಗಾರಿಯಲ್ಲೇ ಜೆಸಿಬಿ ಯಂತ್ರ ಬಳಸಿ ಕೋಟಿಗಟ್ಟಲೆ ಹಣ ದುರುಪಯೋಗ ಆಗಿದೆ.

* ನಿಮ್ಮ ಪ್ರಕಾರ ಕರ್ನಾಟಕ ಎಲೆಕ್ಷನ್‌ನ ಅಂತಿಮ ರಿಸಲ್ಟ್ ಹೇಗಿರುತ್ತೆ?

ಬಂ: ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಇವರ್‍ಯಾರಿಗೂ ಮೆಜಾರಿಟಿ ಸೀಟ್ ಬರಲ್ಲ, ಇದು ಅವರಿಗೂ ಗೊತ್ತು, ಯಾರಿಗೆ ಗೊತ್ತು ನಾಳೆ ಕೇಂದ್ರದ ಯುಪಿಎ ಸರ್ಕಾರದ ತರಾನೇ ಇಲ್ಲೂ ಆಗಬಹುದು.

* ಅಂದರೆ....?

ಬಂ: ಸೆಕ್ಯುಲರ್ ನೆಲೆಯಲ್ಲಿ **to keep communal forces away.....**

ಶಿವಮೊಗ್ಗದ ಪತ್ರಕರ್ತರ ಪೈಕಿ ಕೆಲವರು ನಾಚಿಕೆ ಮಾನ ಮರ್ಯಾದೆಗಳನ್ನೆಲ್ಲಾ ಪೂರ್ತಿ ಬಿಟ್ಟಂತೆ ಕಾಣುತ್ತಿದೆ.

ತೀರಾ ಮೊನ್ನೆ ಕೆಲ ಪತ್ರಕರ್ತರು ಶಿಕಾರಿಪುರಕ್ಕೆ ಹೋಗಿ ಯಡ್ಡಿ ಮಗ ರಾಗವೇಂದ್ರನ ಕೈಯಿಂದ ಬೆಳ್ಳಿ ಚೊಂಬು ಮ... ಚೊಂಬಿನೊಳಗೊಂದು ಚಿನ್ನದ ಉಂಗುರವಿದ್ದ ಗಿಫ್ಟ್ ತೆಗೆದುಕೊಂಡು ಬಂದಿದ್ದಾರೆ.

ಶಿಕಾರಿಪುರದಿಂದ ನಾಮಪತ್ರ ಸಲ್ಲಿಸಲು ಯಡ್ಡಿ ಬಂದಿದ್ದಾಗ ನಡೆದಿರುವ ಲಂಚ ಪ್ರಕರಣ ಇದು.

ಅಲ್ಲಾ ಒಬ್ಬ ಅಭ್ಯರ್ಥಿ ನಾಮಪತ್ರ ಹಾಕಿದರೆ ಪತ್ರಕರ್ತರಿಗೇಕೆ ಚಿನ್ನ-ಬೆಳ್ಳಿ ಉಡುಗೊರೆ ಕೊಡುತ್ತಾನೆ? ತನ್ನ ಪರವಾಗಿ ಸುದ್ದಿ ಬರೆಯಲಿ ಅಂತ ತಾನೆ?

ಪತ್ರಕರ್ತರಿಗೆ ಬೆಳ್ಳಿ ಚೊಂಬು!

ಹೀಗೆ ಆಮಿಷ ಒಡ್ಡುವ ಪುಡಾರಿ ಬ... ಬೀಳುವ ಪತ್ರಕರ್ತರಿಗಾದರೂ ಸಂಕೋ... ಇರಬಾರದಾ?

ಯಾವನೋ ಗಿಫ್ಟ್ ಕೊಟ್ಟ ಅಂತ ಗಬಕ್ಕಂತ ಈಸಿಕೊಂಡು ಬಂದು ಬಿಡುವುದಾ?


ಇಷ್ಟಕ್ಕೂ ಕೆಲ ವರದಿಗಾರರ ಬಗ್ಗೆ ಯಡ್ಡಿ ಮಗ ರಾಘವೇಂದ್ರ "ಇವರಿಗೆಲ್ಲಾ ದುಡ್ಡು ಕೊಟ್ಟು ಕೊಟ್ಟು ನನಗೂ ಸಾಕಾ... ಹೋಗಿದೆ" ಅಂತ ಗೋಳಾಡುತ್ತಿದ್ದಾನೆ.

ಪತ್ರಕರ್ತರಿಗೇ ಇಂಥ ದುರ್ಬುದ್ಧಿ ಬಂದರೆ ಇನ್ನು ಜನಸಾಮಾನ್ಯರ ಪಾಡೇನು?

ಯಡ್ಡಿಗೀಗ ನಿಜಕ್ಕೂ ಪೀಕಲಾಟ. ಬಂಗಾರಪ್ಪ ಬಂದರೆಂದು ಹೆದರಿ ಬೇರೆ ಕ್ಷೇತ್ರಕ್ಕೆ ಓಡಿಹೋದ... ಹೇಡಿ ಅನ್ನಿಸಿಕೊಳ್ಳಬೇಕಾಗುತ್ತದಲ್ಲ ಎಂಬ ಭೀತಿ. ಅಲ್ಲೇ ನಿಂತು ಸೆಣಸಿ ಆಕಸ್ಮಾತ್ ಸೋತ... ಹೋದರೆ ತನ್ನ ಜೀವನದ ಕನಸಾದ ಸಿಎಂಗಿರಿ ಕೈತಪ್ಪುತಲ್ಲಾ ಎಂಬ ಸಂಕಟ.

■ ಬಿಳಿದಾಳೆ ಪಾರ್ವತೀ...

ಯಡ್ಡಿ ಗರ್ವ 'ಬಂ'ಗ



ರಾಜ್ಯ ಬಿಜೆಪಿ ತಲೆ ಮೇಲೆ ಬೀಳುತ್ತಿರುವ ಅತಿ ದೊಡ್ಡ ಬಾಂಬ್ ಇದು.

ಶಿಕಾರಿಪುರದಲ್ಲಿ ಯಡಿಯೂರಪ್ಪ ವಿರುದ್ಧ ಬಂಗಾರಪ್ಪ ಅಖಾಡಕ್ಕಿಳಿಯುತ್ತಿದ್ದಾರೆ. ಈ ಸುದ್ದಿ ಕೇವಲ ಯಡ್ಡಿಗೆ ಮಾತ್ರವಲ್ಲ ರಾಜ್ಯಾದ್ಯಂತ ರಣೋತ್ಸಾಹದಿಂದ ಅಬ್ಬರಿಸುತ್ತಿದ್ದ ಇಡೀ ಬಿಜೆಪಿ ಪಟಾಲಂ ತತ್ತರಿಸಿ ಹೋಗುವಂತೆ ಮಾಡಿಬಿಟ್ಟಿದೆ.

ಶಿಕಾರಿಪುರದಲ್ಲಿ ಯಡ್ಡಿ ಗೆದ್ದೇ ಬಿಟ್ಟಿದ್ದಾರೆಂಬಂಥ ವಾತಾವರಣ ಕ್ರಿಯೇಟ್ ಆಗಿ ಹೋಗಿದ್ದಿದು ನಿಜ. ಯಡ್ಡಿ ಕೂಡಾ ಹಾಗಂತ ನಂಬಿಕೊಂಡು ಯಶವಂತಪುರದಿಂದ ಶೋಭಾರನ್ನು ಗೆಲ್ಲಿಸಿಕೊಳ್ಳುವುದಷ್ಟೇ ತಮ್ಮ ಜವಾಬ್ದಾರಿ ಎಂದು ಭಾವಿಸಿಕೊಂಡಿದ್ದರು. ಆದರೆ ಇಡೀ ಪರಿಸ್ಥಿತಿ ಈಗ ಉಲ್ಟಾಪಲ್ಟಾ ಆಗಿ ಹೋಗಿದೆ.

ಬಂಗಾರಪ್ಪ ಹುಲಿಯಂತೆ ರಂಗ ಪ್ರವೇಶ ಮಾಡಿದ್ದಾರೆ. ಬಂಗಾರಪ್ಪ ಸಾಮರ್ಥ್ಯ ಏನೆಂಬುದು ಬೇರೆಲ್ಲರಿಗಿಂತ ಸ್ವತಃ ಯಡ್ಡಿಗೇ ಚೆನ್ನಾಗಿ ಗೊತ್ತಿದೆ. 1999 ರ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಮಹಾಲಿಂಗಪ್ಪ ಎಂಬ ಮಾಮೂಲಿ ಲಾಯರ್ ಅನ್ನು ಯಡ್ಡಿ ವಿರುದ್ಧ ನಿಲ್ಲಿಸಿ ಗೆಲ್ಲಿಸಿಕೊಂಡಿದ್ದರು ಬಂಗಾರಪ್ಪ, ಈಗ ಅವರೇ ತೋಳೇರಿಸಿಕೊಂಡು ಬಂದು ನಿಂತಿದ್ದಾರೆ. ಯಡ್ಡಿ ಆಪ್ತ ವಲಯಗಳ ಮಾತನ್ನು ನಂಬುವುದಾದರೆ ಈ ಸುದ್ದಿ ಕೇಳಿ ಯಡ್ಡಿ ತುಂಬಾ ಅಪ್‌ಸೆಟ್ ಆಗಿ ಹೋಗಿದ್ದಾರೆ. ಬಂಗಾರಪ್ಪ ಸಾಗರ ಅಥವಾ ಶಿಕಾರಿಪುರದಿಂದ ಸ್ಪರ್ಧಿಸುತ್ತೇನೆ ಎಂದು ಹೇಳಿಕೊಂಡು ಬಂದಿದ್ದರೂ ಏನೇ ಆಗಲಿ ತನ್ನ ವಿರುದ್ಧವೇ ಬಂಗಾರಪ್ಪ ಶಿಕಾರಿಪುರಕ್ಕೆ ಬರಲಾರರೆಂದು ಯಡ್ಡಿ ನಂಬಿದ್ದರು.

ಹಾಗೊಂದು ವೇಳೆ ಸ್ಪರ್ಧಿಸಿಯೆ... ಬಿಟ್ಟರೆ ಗತಿ ಏನೆಂದು ಯೋಚಿ... ತುಮಕೂರು ಕ್ಷೇತ್ರಕ್ಕೆ ವಲ... ಹೋಗುವ ಯೋಚನೆಯೂ ಯ... ಗಿತ್ತು. ಕೊನೆಗೆ ಏನಾಯಿತೊ... ಏನೋ ಯಡ್ಡಿ ಶಿಕಾರಿಪುರವನ್ನೆ... ಆರಿಸಿಕೊಂಡು ನಾಮಪತ್ರ ಹಾ... ಬಿಟ್ಟರು....

ಅದರ ಬೆನ್ನ ಹಿಂದೆಯೆ... ಶಿಕಾರಿಪುರಕ್ಕೇ ಬಂದು ಬಿ... ಬಂಗಾರಪ್ಪ ಎಂಬ ಬಾಂಬ್.


ಯಡ್ಡಿಗೀಗ ನಿಜಕ್ಕೂ ಪೀ... ಲಾಟ. ಬಂಗಾರಪ್ಪ ಬಂದರೆಂದ... ಹೆದರಿ ಬೇರೆ ಕ್ಷೇತ್ರಕ್ಕೆ ಓಡಿಹೋದ... ಹೇಡಿ ಅನ್ನಿಸಿಕೊಳ್ಳಬೇಕಾಗುತ್ತದ... ಎಂಬ ಭೀತಿ. ಅಲ್ಲೇ ನಿಂತು ಸೆಣ... ಆಕಸ್ಮಾತ್ ಸೋತು ಹೋದರೆ ತ... ಜೀವನದ ಕನಸಾದ ಸಿಎಂ ಗಿ... ಕೈತಪ್ಪುತಲ್ಲಾ ಎಂಬ ಸಂಕಟ. ಇಂ... ಕೆಟ್ಟ ಪರಿಸ್ಥಿತಿ ಉಂಟಾಗಲು ಸಾಕ್ಷಾತ್ ಯಡಿಯೂರಪ್ಪ... ದುಡುಕ ಹಾಗೂ ಅವಿವೇಕಿ ನಿರ್ಧಾರಗಳೇ ಕಾರಣ ಎಂದ... ಬಿಜೆಪಿಗಳೇ ಈಗ ದೂಷಿಸುತ್ತಿದ್ದಾರೆ.

ಯಡ್ಡಿಗೇ ತಿರುಗುಬಾಣವಾದ ಸ್ಕೆಚ್

ಕಳೆದ ಮೂರು ದಶ... ಗಳಿಂದ ರಾಜ್ಯ ರಾಜಕೀಯ... ದಲ್ಲಿ ತನ್ನದೇ ಪ್ರಭಾ... ಬೀರುತ್ತಾ ಬಂದಿರುವ ಬಂಗ... ರಪ್ಪ ಯಾರಿಗೂ ತಲೆಬಾಗು... ಆಸಾಮಿಯಲ್ಲ. ಸಮಾ... ವಾದಿ ಪಕ್ಷ, ಕಾಂಗ್ರೆಸ್... ಕರ್ನಾಟಕ ಕ್ರಾಂತಿರಂಗ, ಕರ್ನಾ... ಟಕ ಕಾಂಗ್ರೆಸ್ ಪಕ್ಷ ಕರ್ನಾಟ... ವಿಕಾಸ ಪಕ್ಷ ಮತ್ತೆ ಕಾಂಗ್ರೆಸ್ ಪಕ್ಷ... ಬಿಜೆಪಿ ಕೊನೆಗೆ ಸಮಾಜವಾದಿ ಪಕ್ಷ.

ಹೀಗೆ ತನ್ನ ಸ್ವಂತ ಶಕ್ತಿ ಸಾಮರ್ಥ್ಯದ ಮೇ... ರಾಜಕೀಯ ಮಾಡಿಕೊಂಡು ಬಂದಿದ್ದಾರೆ ಬಂಗಾರಪ್ಪ... ರಾಷ್ಟ್ರೀಯ ಪಕ್ಷಗಳ ಹಂಗಿನಿಂದ ಹೊರಬಂದು ತಮ್ಮದೆ... ಸ್ವಂತ ಪಕ್ಷ ರಚಿಸಿಕೊಂಡಾಗಲೂ ಚುನಾವಣೆಗಳ... ನಡೆದಾಗಲೆಲ್ಲಾ ಕನಿಷ್ಠ 30 ರಿಂದ 50 ಕ್ಷೇತ್ರಗಳ... ಸೋಲು-ಗೆಲುವು ನಿರ್ಧರಿಸುವ ಶಕ್ತಿ ಬಂಗಾರಪ್ಪನವ...

ಶೆಟ್ಟರ್‌ಗೆ ಆಗಲೇ ಸಿಎಂ ಕನಸು!



ಕೂಸು ಹುಟ್ಟೋಕು ಮೊದಲೇ ಕುಲಾವಿ ಹೊಲೆಯುವುದರಲ್ಲಿ ಬಿಜೆಪಿಗಳು ನಿಸ್ಸೀಮರು ಬಿಡಿ. ಸಿಎಂ ಆಗೇ ಬಿಟ್ಟೆ ಎಂದು ಯಡ್ಡಿ ಸೈತ ಅನೇಕ ಬಾರಿ ಹೊಸ ಸಫಾರಿ ಸೂಟುಗಳನ್ನು ಹೊಲಿಸಿಕೊಂಡು ರೆಡಿಯಾಗಿದ್ದು ಎಲ್ಲರಿಗೂ ಗೊತ್ತು.

ಈಗ ಆ ಸಾಲಿಗೆ ಬಿಜೆಪಿಯ ಇನ್ನೊಬ್ಬ ಲಿಂಗಾಯತ ಲೀಡರ್ ಜಗದೀಶ್ ಶೆಟ್ಟರ್ ಸೇರಿದ್ದಾರೆ.

ಬಂಗಾರಪ್ಪ ವಿರುದ್ಧ ಶಿಕಾರಿಪುರದಲ್ಲಿ ಯಡ್ಡಿ ಗೆಲ್ಲುವುದು ಕಷ್ಟ ಎಂಬ ಮಾತು ಈಗ ಎಲ್ಲಾ ಕಡೆ ಕೇಳಿಬರುತ್ತಿದೆಯಷ್ಟೇ. ಅದೇ ಮಾತು ಈಗ ಶೆಟ್ಟರ್ ಪಾಲಿಗೆ ಸಿಎಂ ಕುರ್ಚಿ ಕನಸು ಬೀಳಿಸುತ್ತಿದೆ. ಒಂದು ವೇಳೆ ಬಿಜೆಪಿಗೆ ಮೆಜಾರಿಟಿ ಸಿಕ್ಕು ಯಡ್ಡಿ ಲಾಗ ಹೊಡೆದರೆ ಸಿಎಂ ಹುದ್ದೆಗೆ ನಾನಲ್ಲದೆ ಇನ್ಯಾರಿದ್ದಾರೆ ಅಂತ ಶೆಟ್ಟರ್ ಲೆಕ್ಕಾಚಾರ. ಮತ್ತೊಂದೆಡೆ ಬಸವರಾಜ ಪಾಟೀಲ್ ಯತ್ನಾಳಿಗೂ ಇದೇ ಕನಸು ಬಿದ್ದಿದೆ ಅಂತ ರೂಮರ್.

ಶಿಕಾರಿಪುರದಲ್ಲಿ ಯಡ್ಡಿ ಸೋಲಲಿ ಎಂದು ಬಿಜೆಪಿಯೊಳಗೇ ಅನೇಕ ನಾಯಕರು ಬಯಸುತ್ತಿದ್ದಾರೆ ಅನ್ನುವ ಸುದ್ದಿ ಬಹುಶಃ ಸುಳ್ಳಿರಲಾರದು.... ಅಲ್ಲವೆ?

ರುತ್ತಿತ್ತು.

ಈಗಲೂ ಅಷ್ಟೇ ಶಕ್ತಿ ಅವರಿಗಿದೆ. 2004ರ ಚುನಾವಣೆ ಲ್ಲಿ ಬಜೆಪಿಗೆ 79 ಕ್ಷೇತ್ರ ಗೆಲ್ಲಲು ಬಂಗಾರಪ್ಪನವರ ಡುಗೆಯೇ ಮಹತ್ವವಾಗಿತ್ತು. ಆದರೆ ಬಂಗಾರಪ್ಪ ಜೆಪಿಗಳಿಗೆ ಉಗಿದು ಪಕ್ಷ ಬಿಟ್ಟು ಹೊರಬಂದರು. ಎಸ್‌ಪಿ ಿ ಮತ್ತೆ ಶಿವಮೊಗ್ಗದಿಂದ ಸ್ಪರ್ಧಿಸಿ ಎಂಪಿಯಾದರು. ಉಪಮುಖ್ಯಮಂತ್ರಿಯಾಗಿದ್ದ ಯಡ್ಡಿ ಅತೀ ಆವೇಶದಿಂದ ಗಾರಪ್ಪನವರ ನಿಯಂತ್ರಣದಲ್ಲಿದ್ದ ಕ್ಷೇತ್ರಗಳಿಗ ದೆಮುಂದೆ ನೋಡದೆ ನುಗ್ಗಿದ್ದರು. ನೇರ ಸೊರಬ ಕ್ಷೇತ್ರಕ್ಕೇ ೀಗಿ 200 ಕೋಟಿ ವೆಚ್ಚದ ದಂಡಾವತಿ ಯೋಜನೆ ಟಿಸಿ ಬಂಗಾರಪ್ಪ ವಿರುದ್ಧ ಜನರನ್ನು ಎತ್ತಿಕಟ್ಟಲು ೀದಿದ್ದರು. ಅಷ್ಟೇ ಅಲ್ಲದೆ ಗಾರಪ್ಪ ಶಿಷ್ಯ ಶಾಸಕರಾದ ತಾಳು ಹಾಲಪ್ಪ ಹಾಗೂ ೀಪಾಲ ಕೃಷ್ಣ ಬೇಳೂ ೂ ಆಮಿಷ ತೋರಿಸಿ ಗಾರಪ್ಪನವರಿಂದ ದೂರ ಡಿಬಿಟ್ಟರು. ಈಗ ಇದು ಾವ 'ಹಂತಕ್ಕೆ ೀಗಿದೆಯೆಂದರೆ ಸೊರಬ ೇತ್ರದಿಂದ ಹರತಾಳು ಲಪ್ಪಗೆ ಬಜೆಪಿ ಟಿಕೆಟ್ ಡಲಾಗಿದೆ. ಅಲ್ಲಿಗ 'ಬಂ' ತ್ರ ಮಧು ಬಂಗಾರಪ್ಪನೇ ಅಭ್ಯರ್ಥಿ. ಜೊತೆಗೆ ಸಾಗರದಲ್ಲಿ ್ನೊಬ್ಬ 'ಬಂ' ಶಿಷ್ಯ ಬೇಳೂರು ಗೋಪಾಲಕೃಷ್ಣಾಗೂ ಜೆಪಿ ಟಿಕೆಟ್ ಕೊಡ ಲಾಗಿದೆ.

ಬಂಗಾರಪ್ಪ ಯಾರನ್ನು ದ್ರೋಹಿಗಳೆಂದು ದೂರ ಡಿದ್ದರೋ ಅಂತವರನ್ನೇ ಹುಡುಕಿಕೊಂಡು ಹೋಗಿ ಜೆಪಿ ಟಿಕೆಟ್ ಕೊಟ್ಟು ಭೂ ಬಿಟ್ಟ ತಪ್ಪಿಗೆ ಯಡ್ಡಿ ಈಗ ತಿರಬೇಕಾಗಿ ಬಂದಿದೆ.

ಯಡ್ಡಿ ವಿರುದ್ಧ ಸಾಕ್ಷಾತ್ ಬಂಗಾರಪ್ಪನವರೇ ಬಂದು ತಿದ್ದಾರೆ.



ದೆಹಲಿ ತಂತ್ರವಿರಬಹುದಾ?

ಹಾಗಂತ ಕೇಳಿದರೆ ಬಂಗಾರಪ್ಪ 'ಖಂಡಿತಾ ಇಲ್ಲ' ್ನುತ್ತಿದ್ದಾರೆ. ಆದರೆ ಈಗಿನ ಚುನಾವಣೆ ಪರಿಸ್ಥಿತಿಯಲ್ಲಿ ಗ್ರೆಸ್ ಅಥವಾ ದಳದ ಒಬ್ಬಾನೊಬ್ಬ ನಾಯಕನೂ ಯಡ್ಡಿಯ ಸು, ರಣೋತ್ಸಾಹ ಸರಿಗಟ್ಟುವ ಲೆವೆಲ್ ನಲ್ಲಿರಲಿಲ್ಲ. ಲಿ ಪಾರ್ಲಿಮೆಂಟ್ ಮೆಂಬರ್ ಬಂಗಾರಪ್ಪ ತಮ್ಮ ಮಾಜವಾದಿ ಪಕ್ಷದಿಂದ ಎಲ್ಲಾ ಕಡೆ ಕ್ಯಾಂಡಿಡೇಟ್ ಕುವುದಾಗಿ ಹೇಳಿಕೆ ನೀಡುತ್ತಿದ್ದುದು ಬಿಟ್ಟರೆ ಒಟ್ಟಾರೆ ಷ್ಯದ ಎಲೆಕ್ಷನ್‌ಗೆ ಹೇಳಿಕೊಳ್ಳುವಂಥ ಬಿಸಿಯೇ ಇರಲಿಲ್ಲ. ತರ ಇದ್ದಕ್ಕಿದ್ದಂತೆ ಕಳೆದ ವಾರ 'ಬಂ' ದೆಹಲಿಗೆ ಹೋಗಿ ದರು. ಸಮಾಜವಾದಿ ಪಕ್ಷದ ನಾಯಕರನ್ನು ನೋಡಲು ೀಗಿದ್ದೆ ಎಂದು ಬಂಗಾರಪ್ಪ ವಿವರಣೆ ಕೊಡುತ್ತಿದ್ದಾರೆ. ೞರೆ ಕಾಂಗ್ರೆಸ್ ಜೊತೆ ಮಾತುಕತೆಗೆ ಹೋಗಿದ್ದರೆಂಬ ಮರ್‌ಗಳೂ ಇದ್ದವು. ಒಟ್ಟಾರೆ ಅಲ್ಲೇನಾಯಿತೋ ಏನೋ ಲ್ಲವರ್‍ಯಾರು?

ಅಲ್ಲಿಂದ ನೇರ ಬೆಂಗಳೂರಿಗೆ ಬಂದ ಬಂಗಾರಪ್ಪ ವು ಶಿಕಾರಿಪುರದಿಂದಲೇ ಸ್ಪರ್ಧಿಸುವುದಾಗಿ ಯುದ್ಧ ೀಷಣೆ ಮಾಡಿದ್ದಾರೆ.

ಯಾರ ಗಮನಕ್ಕೂ ಬಂದಿರದ ವಿಚಾರ ಏನೆಂದರೆ ಗಾರಪ್ಪ ಕಳೆದ ಎರಡು ತಿಂಗಳಿಂದಲೂ ಈ ತಯಾರಿ ಡಿಕೊಂಡೇ ಬಂದಿದ್ದರು. ಶಿಕಾರಿಪುರದ ಪ್ರಮುಖ ಗ್ರೆಸ್, ದಳ ಹಾಗೂ ಕೆಲ ಬಜೆಪಿ ಲೀಡರ್‌ಗಳನ್ನು ್ಯೇಕವಾಗಿ ಒಮ್ಮೆ ತುಮಕೂರಿಗೂ ಇನ್ನೊಮ್ಮೆ ನ್ನಳಿಗೂ ಕರೆಸಿಕೊಂಡು ಚರ್ಚಿಸಿ ಕಳುಹಿಸಿದ್ದರು. ಈಗ್ಗೆ ನೈದು ದಿನಗಳ ಹಿಂದೆ ಶಿಕಾರಿಪುರಕ್ಕೆ ಹೋಗಿ ರಾಮೇಶ್ವರ ರಥೋತ್ಸವದಲ್ಲೂ ಭಾಗವಹಿಸಿ ಬಂದಿದ್ದಾರೆ. ಶಿಕಾರಿಪುರದಿಂದ ಬಂಗಾರಪ್ಪ ಸ್ಪರ್ಧಿಸಿದ ಸುದ್ದಿ ಎಂಥ ಸ ಸೃಷ್ಟಿಸಿದೆಯೆಂದರೆ ಕ್ಷೇತ್ರದ ಪ್ರಮುಖ ಲೀಡರ್‌ಗಳಾದ ರಪ್ಪ, ಗೋಣಿ ಮಾತೇಶ್, ಕಬಡಿ ರಾಜಣ್ಣ, ರಂಗಪ್ಪ ಾರ್, ಜಯ ನಾಯ್ಕರ್, ಸುಧಾ ರಾಜಶೇಖರ್ ಮೇಶ್ವರಪ್ಪ, ಷಣ್ಮುಕಪ್ಪ ಮುಂತಾದವರು ಈಗಾಗಲೇ ಲಿಗೆ ಚಕ್ರ ಕಟ್ಟಿಕೊಂಡವರಂತೆ ಓಡಾಡಲು ುಮಾಡಿದ್ದಾರೆ. ಶಿಕಾರಿಪುರ ಕಾಂಗ್ರೆಸ್ ಲೀಡರ್‌ಗಳೆಲ್ಲಾ ಾಗಲೇ 'ಬಂ' ಪರ ನಿಂತುಬಿಟ್ಟಿದ್ದಾರೆ.

2004ರಲ್ಲಿ ಯಡಿಯೂರಪ್ಪ 23 ಸಾವಿರ ಲೀಡ್‌ನಿಂದ ದ್ದರು. ಆದರೆ ಆಗ ಯಡ್ಡಿಗೆ 'ಬಂ' ಬೆಂಬಲವಿತ್ತು. ತರ 2005ರ ಜೂನ್‌ನಲ್ಲಿ ನಡೆದ ಪಾರ್ಲಿಮೆಂಟ್ ಚುನಾವಣೆಯಲ್ಲಿ ಬಂಗಾರಪ್ಪ ಸ್ಪರ್ಧಿಸಿ ಗೆದ್ದಾಗ ಇದೇ ರಿಪುರದಲ್ಲಿ 13 ಸಾವಿರ ಲೀಡ್ ದೊರಕಿತ್ತು. ಕಾಂಗ್ರೆಸ್ ಓಟು, ಮುಸ್ಲಿಮರ ಓಟು ಬಂಗಾರಪ್ಪಗೆ ರಲಿಲ್ಲ.

ಆದರೆ ಈ ಬಾರಿ ಬಂಗಾರಪ್ಪನವರ ಖಾಯಂ ಲಿಗರು ಜೊತೆಗೆ ಕಾಂಗ್ರೆಸ್‌ನ ಓಟುಗಳು, ಮುಸ್ಲಿಮರು, ತರು, ಕುರುಬರೆಲ್ಲಾ ಬಂಗಾರಪ್ಪ ಬೆನ್ನಿಗೆ ನಿಲ್ಲಿಸಿದ್ದಾರೆ. ಇದನ್ನು ಜೆನಿಸಿಕೊಂಡೇ ಯಡ್ಡಿಗೆ ಚಳಿ ಜ್ವರ ರಿದ್ದಾರೆ. ■

ಗೌಡ-ಧರಂ ಡೀಲ್!

ದೇವೇಗೌಡ ಈಗೇನು ಮಾಡುತ್ತಿದ್ದಾರೆ ನಿಮಗೆ ಗೊತ್ತಾ?

ಒಂದೆಡೆ ಕಾಂಗ್ರೆಸ್‌ನ ಖರ್ಗೆ, ಸಿದ್ಧರಾಮಯ್ಯನವರು ಬಂಡುಕೋರರನ್ನು ನಿಯಂತ್ರಿಸುವಲ್ಲಿ, ಭಿನ್ನಮತ ತಡೆಯುವಲ್ಲಿ ಬ್ಯುಸಿಯಾಗಿದ್ದಾರೆ. ಮತ್ತೊಂದೆಡೆ ಟಿಕೆಟ್ ಮಾರಿಕೊಂಡ ಹಗರಣದ ಪರಿಣಾಮ ಬಜೆಪಿಯ ಯಡ್ಡಿ, ಸದಾನಂದಗೌಡ ಯಾರ ಕೈಗೂ ಸಿಗದಂತೆ ತಲೆತಪ್ಪಿಸಿಕೊಂಡು ತಿರುಗುತ್ತಿದ್ದಾರೆ.

ಆದರೆ ಒಬ್ಬ ದೇವೇಗೌಡ ಮಾತ್ರ ಯಾವುದೇ ಟೆನ್ಷನ್ ಇಲ್ಲದೆ, ನಿರಾಳವಾಗಿ ಎಲೆಕ್ಷನ್‌ಗೆ ರೆಡಿಯಾಗುತ್ತಿದ್ದಾರೆ. ಡಿ.ಟಿ.ಜಯಕುಮಾರ್ ಹೋಗಲಿ, ಡಿ. ಮಂಜುನಾಥ ರಾಜೀನಾಮೆ ಕೊಡಲಿ. ಜಿ.ಟಿ. ದೇವೇಗೌಡ ಬಜೆಪಿ ಸೇರಲಿ, ಕೊನೆಗೆ ಎಲ್ಲಾ ಏನೇ ಏರುಪೇರುಗಳಾಗಲಿ ದೇವೇಗೌಡ ಮನಸ್ಸು ಮಾತ್ರ ಬೇರೆ ಲೆಕ್ಕಾಚಾರ ಮಾಡುತ್ತಿದೆ.



ಅದು ಎಲೆಕ್ಷನ್ ನಂತರ ಏನೇನಾಗುತ್ತದೆ, ಏನೇನಾಗಬೇಕೆಂಬ ಲೆಕ್ಕಾಚಾರ. ಗೌಡರ ಈ ಗುಣಾಕಾರ ಭಾಗಾಕಾರಕ್ಕೆ ಸಕತ್ ಸಾಥ್ ನೀಡುತ್ತಿರುವ ಇನ್ನೊಬ್ಬ ನಾಯಕ ಕಾಂಗ್ರೆಸ್‌ನ ಧರಂಸಿಂಗ್!

ಸಿಂಪಲ್ಲಾಗಿ ಹೇಳಬೇಕೆಂದರೆ ಚುನಾವಣೆ ನಂತರ ಮತ್ತೆ ಅತಂತ್ರ ವಿಧಾನಸಭೆ ಏರ್ಪಟ್ಟರೆ, ಕಾಂಗ್ರೆಸ್ ದಳ ಮೈತ್ರಿ ಸರ್ಕಾರದ ಒಂದು ಸಾಧ್ಯತೆ ಇದ್ದೇ ಇರುತ್ತದೆ. ಆಗ ತಾನೇ ಮತ್ತೆ ಸಿಎಂ ಆಗಬಹುದಲ್ಲವಾ ಎನ್ನುವುದು ಧರ್ಮು ಯೋಚನೆ. ಈಗಿನ ಕಾಂಗ್ರೆಸ್ ಟಿಕೆಟ್ ಹಂಚಿಕೆಯ ವಿವರ ನೋಡಿದರೆ ಈ ಧರಂಸಿಂಗ್ ಕನಿಷ್ಠ 20 ಕ್ಷೇತ್ರಗಳಲ್ಲಿ ಗ್ಯಾರಂಟಿ ಸೋಲುವವರನ್ನೇ ಹುಡುಕಿ ಕಾಂಗ್ರೆಸ್ ಟಿಕೆಟ್ ಕೊಡಿಸಿದ್ದಾರೆ. ಇವೆಲ್ಲಾ ದಳದ ಅಭ್ಯರ್ಥಿಗಳಿಗೆ ನೆರವಾಗುವ ಉದ್ದೇಶ ಬಿಟ್ಟರೆ ಬೇರೇನೂ ಕಾರಣವಿಲ್ಲ. ಅಂದರೆ ಒಂದು ಕಾಂಗ್ರೆಸ್‌ಗೆ ಅಬ್ಸಲೂಟ್ ಮೆಜಾರಿಟಿ ಸಿಗಕೂಡದು ಹಾಗೂ ಅದೇ ವೇಳೆ ಜೆಡಿಎಸ್ ಕೂಡಾ ಕನಿಷ್ಠ 30-40 ಸೀಟ್ ಗೆಲ್ಲುವಂತಾಗಬೇಕು.

ಉದಾಹರಣೆಗೆ ಬೆಂಗಳೂರಿನ ಪದ್ಮನಾಭನಗರ ಕ್ಷೇತ್ರವನ್ನೇ ನೋಡಿ. ಇಲ್ಲಿ ಬಜೆಪಿಯ ಅಶೋಕ್ ಎದುರು ದಳದ ಕಬಡ್ಡಿ ಬಾಬು ಸೆಣೆಸಾಟಕ್ಕಿಳಿದಿದ್ದಾರೆ. ಇವರಿಬ್ಬರೆದುರು ನಿಲ್ಲುತ್ತಿರುವ ಕಾಂಗ್ರೆಸ್‌ನ ಡಾ॥ ಗುರಪ್ಪ ರೆಡ್ಡಿ ಯಾರೆಂಬುದೇ ಜನಕ್ಕೆ ಗೊತ್ತಿಲ್ಲ. ಇದರರ್ಥ ದಳದ ಕಬಡ್ಡಿ ಬಾಬುಗೆ ಅಲ್ಲಿ ಕಾಂಗ್ರೆಸ್ ಅಡ್ಡಿಯಾಗಬಾರದೆಂಬ ಹುನ್ನಾರ.



ಖರ್ಗೆ



ಚಕ್ರಪಾಣಿ



ಅನಿಲ್ ಲಾಡ್

ಅದೇರೀತಿ ಮಳವಳ್ಳಿಯಲ್ಲೂ ಆಗಿದೆ. ಎರಡು ಬಾರಿ ಸ್ಪರ್ಧಿಸಿ ಸೋತಿದ್ದ ನರೇಂದ್ರ ಸ್ವಾಮಿಗೆ ಈ ಬಾರಿ ಮತ್ತೆ ಕಾಂಗ್ರೆಸ್ ಟಿಕೆಟ್ ನೀಡಿದಿದ್ದರೆ ಆತ 25 ಸಾವಿರ ಲೀಡ್‌ನಲ್ಲಿ ಗೆದ್ದು ಬರುತ್ತಿದ್ದರು. ಆದರೆ ಅಲ್ಲಿ ದಳದಿಂದ ಡಾ॥ ಅನ್ನದಾನಿ ಇದ್ದಾರೆ. ಜೆಡಿಯುನ ಸೋಮಶೇಖರ್ ಕೂಡಾ ಕಣದಲ್ಲಿದ್ದಾರೆ.

ಒಳಗೊಳಗೆ ಏನು ವ್ಯವಹಾರ ಕುದುರಿತೋ ಏನೋ ಧರಂಸಿಂಗ್ 'ನರೇಂದ್ರ ಸ್ವಾಮಿ ಬೇಕಿಲ್ಲ ಅವರ ಬದಲು ಸಿದ್ಧರಾಜುಗೆ ಕೊಡಿ' ಎಂದು ಹಠ ಮಾಡಿಬಿಟ್ಟರು. ಆದರೆ ಪಕ್ಷದ ಅಲ್ಲಿನ ನಾಯಕರಾದ ಲೋಹಿಯಾ ವಿಚಾರಮಂಚದ ಶಿವಣ್ಣ ಮುಂತಾದವರ ಬೆಂಬಲ ನರೇಂದ್ರ ಸ್ವಾಮಿಗಿದೆ. ಈಗ ಬಂಡಾಯ ಕಾಂಗ್ರೆಸ್‌ನ ಅಭ್ಯರ್ಥಿಯಾಗಿ ಕಣದಲ್ಲಿರುವ ನರೇಂದ್ರಸ್ವಾಮಿ ಮಳವಳ್ಳಿಯಲ್ಲಿ ಗೆಲ್ಲುತ್ತಾರೆ ಎನ್ನಲಾಗಿದೆ.

ಈ ಧರಂಸಿಂಗ್ ಕರ್ನಾಟಕದ ನಕ್ಷೆಯನ್ನೇ ಸರಿಯಾಗಿ ನೋಡಿರುವಂತಿಲ್ಲ. ಏಕೆಂದರೆ ನೆಲಮಂಗಲದ ರೇಣುಕಾ ಪ್ರಸಾದ್‌ರನ್ನು ಕರೆದುಕೊಂಡು ಹೋಗಿ ಚಿಕ್ಕನಾಯಕನಹಳ್ಳಿಯಿಂದ ಕಾಂಗ್ರೆಸ್ ಟಿಕೆಟ್ ಕೊಡಿಸಿದ್ದಾರೆ. ಈತನಿಗೂ ಕ್ಷೇತ್ರಕ್ಕೂ ಅರ್ಥಾತ್ ಸಂಬಂಧವಿಲ್ಲ. ಸ್ಥಳೀಯರಾದ ಜಿಲ್ಲಾ ಪಂಚಾಯಿತಿ ಮೆಂಬರ್ ಹೊಸ್ಕೆರೆ ಟಿಕೆಟ್ ಕೇಳಿದ್ದರು. ಜೊತೆಗೆ ಜೆಡಿಯೂದ ಮಾಧುಸ್ವಾಮಿಯವರನ್ನು ಕಾಂಗ್ರೆಸ್‌ಗೆ ಕರೆತಂದು ಟಿಕೆಟ್ ಕೊಡಿಸುವ ಗುರಿ ಸಿದ್ಧರಾಮಯ್ಯನವರಿಗಿತ್ತು. ಆದರೆ ಧರ್ಮು ಎಲ್ಲಾ ಹಾಳು ಮಾಡಿಬಿಟ್ಟರು.

ಇನ್ನೂ ಮೈಸೂರಿನ ಚಾಮರಾಜದಲ್ಲಿ ಮಾದೇಗೌಡ ಅಥವಾ ದಾಸೇಗೌಡ ಟಿಕೆಟ್ ಆಕಾಂಕ್ಷಿಗಳಾಗಿದ್ದರು. ಇವರಿಬ್ಬರೂ ಬಲಿಷ್ಠರೇ. ಆದರೆ ಅಲ್ಲಿನ ಟಿಕೆಟ್ ವಾಸು ಪಾಲಾಗಿದೆ. ಮೇಲುಕೋಟೆ ಕ್ಷೇತ್ರದಲ್ಲಿ ಲೆಕ್ಕಕ್ಕೆ ಸಿಗದಷ್ಟು ವೀಕ್ ಆಗಿರುವ ಅಣ್ಣೇಗೌಡ ಕಾಂಗ್ರೆಸ್ ಅಭ್ಯರ್ಥಿ. ಇದು ಅಂಬಿ ಮತ್ತು ಪುಟ್ಟರಾಜು ನಡುವಿನ ಸೀಕ್ರೆಟ್ ಡೀಲ್ ಇರಬಹುದು ಎಂಬ ಅನುಮಾನಗಳಿವೆ.

ಇನ್ನು ಮಾಲೂರಿನ ಕತೆ ಈಗಾಗಲೇ ಜಗಜ್ಜಾಹೀರಾಗಿದೆ. ಬಜೆಪಿಯ ಖತರ್‌ನಾಕ್ ಖದೀಮ ಕೃಷ್ಣಯ್ಯ ಶೆಟ್ಟಿಯನ್ನು ಸೋಲಿಸಬೇಕೆಂದರೆ ಕಾಂಗ್ರೆಸ್‌ಗೆ ಅಲ್ಲಿ ಮಹಾ ತಾಕತ್ತಿರುವ ಅಭ್ಯರ್ಥಿ ಬೇಕಿತ್ತು. ಮಾಜಿ ಶಾಸಕ ಎ. ನಾಗರಾಜು ಪರವಾಗಿರಲಿಲ್ಲ. ಆದರೆ ಧರಂಸಿಂಗ್ ತನ್ನ ಅಕ್ಕನ ಮಗ ಕೃಷ್ಣಸಿಂಗ್‌ಗೆ ಅಲ್ಲಿ ಟಿಕೆಟ್ ಕೊಡಿಸಿದ್ದಾರೆ. ಈತನಿಗೆ ಇಡೀ ಮಾಲೂರಿನಲ್ಲಿ ತನ್ನ ಸ್ವಂತ ಬಲದ 25 ಓಟುಗಳೂ ಇಲ್ಲ. ಇದು ಧರಂಸಿಂಗ್ ಕಾಂಗ್ರೆಸ್‌ಗೆ ಮಾಡಲಿರುವ ಉಪಕಾರ.

ದೇವ್ರಾ ಯೋಜನೆ

ದೇವೇಗೌಡ ಬೇರೆಯವರಿಗಿಂತ ಎಷ್ಟು ಭಿನ್ನವಾಗಿ ಯೋಚಿಸುತ್ತಾರೆನ್ನಲು ಒಂದೆರಡು ಉದಾಹರಣೆಗಳನ್ನು ಕೊಡಬಹುದು.

ಬಜೆಪಿಯ ಮಾಜಿ ಶಾಸಕ ಅನಿಲ್ ಲಾಡ್ ಈಗ ಕಾಂಗ್ರೆಸ್ ಸೇರಿ ಬಳ್ಳಾರಿಯಿಂದ ಸ್ಪರ್ಧೆಗಿಳಿದಿದ್ದಾರೆ. ಮೊದಲು ಬಜೆಪಿಯಲ್ಲಿದ್ದಾಗಲೂ ಈತನ ವ್ಯವಹಾರಿಕ ನೆಂಟಸ್ತಿಕೆ ಇದ್ದಿದ್ದು ಗೌಡರ ಜೊತೆಗೆ ಮಾತ್ರ. ದಳದ ಶಾಸಕರು ಯಾವ ರೆಸಾರ್ಟ್‌ಗೆ ಹೋದರೂ ಬಜೆಪಿಯ ಲಾಡ್ ಅಲ್ಲಿರುತ್ತಿದ್ದ. ಖರ್ಚನ್ನೆಲ್ಲಾ ತಾನೇ ಭರಿಸುತ್ತಿದ್ದ. ಅಂಥ ಲಾಡ್ ಬಜೆಪಿ ತೊರೆದಾಗ ನೇರ ಬಂದು ಜೆಡಿಎಸ್ ಏಕೆ ಸೇರಲಿಲ್ಲ? ಕಾಂಗ್ರೆಸ್ ಸೇರಿದರು ಯಾಕೆ?

ನಾಳೆ ಮತ್ತೆ ಅತಂತ್ರ ವಿಧಾನಸಭೆ ಬಂದರೆ ಈ ಲಾಡ್ ಕಾಂಗ್ರೆಸ್‌ನಲ್ಲಿದ್ದುಕೊಂಡೇ ಗೌಡರ ಪರ ಲಾಬಿ ಮಾಡಲು ಬಳಸಲ್ಪಡುತ್ತಾರೆ. ಅದೇರೀತಿ ಗೌಡರ ಮಾನಸ ಪುತ್ರ ಚಕ್ರಪಾಣಿ ಈಗ ಕಾಂಗ್ರೆಸ್ ಸೇರಿದ್ದಾರೆ. ಈತ ಬೇರೆಲ್ಲಾ ನಾಯಕರ ಎದುರು ಕಾಂಗ್ರೆಸ್ ಸೇರದೆ ಕೇವಲ ಎಸ್.ಎಂ. ಕೃಷ್ಣ ಮನೆಗೆ ಹೋಗಿ ಕಾಂಗ್ರೆಸ್ ಸೇರಲೂ ಕಾರಣವಿದೆ.


ಕೃಷ್ಣ ಬಳಗದೊಳಗಿದ್ದುಕೊಂಡೇ ಗೌಡರ ಹಿತಾಸಕ್ತಿ ಕಾಪಾಡುವ ಹೊಣೆ ಚಕ್ರಪಾಣಿಯದು ಎಂದು ಕಾಣುತ್ತದೆ.

ಸಾರಾಂಶದಲ್ಲಿ ಹೇಳಬೇಕೆಂದರೆ ದೇವೇಗೌಡರೇ ಈ ಬಾರಿಯೂ ಚದುರಂಗದ ದಾಳಗಳನ್ನು ಚಾಕಚಕ್ಯತೆಯಿಂದ ಉರುಳಿಸುತ್ತಿದ್ದಾರೆ. ಒಂದೆಡೆ ದಳ ಗೆದ್ದೇ ಗೆಲ್ಲುವ ಹಲವು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪ್ರಬಲ ಅಭ್ಯರ್ಥಿಗಳನ್ನು ಹಾಕದಂತೆ ಧರಂಸಿಂಗ್ ಮೂಲಕ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಮತ್ತೊಂದೆಡೆ ದಳದ ಅತೀ ನಿಷ್ಠಾವಂತ ನಾಯಕರನ್ನೂ ಬೇಕೆಂತಲೇ ಕಾಂಗ್ರೆಸ್‌ಗೆ ಸೇರಿಸಿ ಮುಂದಿನ ಮೈತ್ರಿ ಸರ್ಕಾರಕ್ಕೆ ತಳಹದಿ ನಿರ್ಮಿಸಿಕೊಳ್ಳುತ್ತಿದ್ದಾರೆ.

ಕಾಂಗ್ರೆಸ್ ಕೂಡಾ ಇದಕ್ಕೆ ಮಾನಸಿಕವಾಗಿ ರೆಡಿಯಾಗುತ್ತಿರುವಂತೆ ಮೇಲುನೋಟಕ್ಕಂತೂ ಕಾಣುತ್ತಿದೆ.

■ ಪಾರ್ವತೀಶ

ಕಾಂಗ್ರೆಸ್ ಟಿಕೆಟ್ ನೀಡಿದ್ದು ಯಾರು?



ಕಾಂಗ್ರೆಸ್ ಟಿಕೆಟ್ ಹಂಚಿಕೆಯಲ್ಲಿ ಯಾರೆಷ್ಟೇ ಲಾಬಿ ಮಾಡಿದರೂ ಪಕ್ಷದ ಕೆಲ ನಿಯಮಗಳ ಪ್ರಕಾರ ಖರ್ಗೆ-ಧರಂಸಿಂಗ್ ಜೋಡಿ ನಿರ್ಣಾಯಕ ಪ್ರಭಾವ ಬೀರಿದೆ.

ಕೆಪಿಸಿಸಿ ಅಧ್ಯಕ್ಷರಾಗಿ ಖರ್ಗೆ ಹಾಗೂ ವಿರೋಧ ಪಕ್ಷದ ನಾಯಕರಾಗಿದ್ದ ಧರಂಸಿಂಗ್ ಆ ಸ್ಥಾನ ಬಲದ ಮೇಲೆಯೇ ಟಿಕೆಟ್ ಹಂಚಿಕೆಯ ಸ್ಟೀರಿಂಗ್ ಕಮಿಟಿ ಮೆಂಬರ್‌ಗಳಾಗಿದ್ದರು. ದೆಹಲಿಯ ಆ ಕಮಿಟಿಯಲ್ಲಿ ದಿಗ್ವಿಜಯ ಸಿಂಗ್ ಮತ್ತು ಕರ್ನಾಟಕ ವೀಕ್ಷಕ ಪೃಥ್ವಿರಾಜ್ ಚೌಹಾಣ್ ಹಾಗೂ ಸತೀಶ್‌ಕುಮಾರ್ ಬಗಾರಿಯಾ ಎಂಬುವವರು ಸದಸ್ಯರಾಗಿದ್ದರು. ಈ ಕಮಿಟಿ ಹಂತದಲ್ಲೇ ಪ್ರತಿ ಕ್ಷೇತ್ರಕ್ಕೂ ತಲಾ ಒಬ್ಬ ಅಭ್ಯರ್ಥಿ ಹೆಸರನ್ನೂ ಫೈನಲ್ ಮಾಡಿ ಹೈಕಮಾಂಡಿಗೆ ಕಳಿಸಲಾಯಿತು. ಪ್ರಣಬ್ ಮುಖರ್ಜಿ, ಸೋನಿಯಾ, ಅಹ್ಮದ್ ಪಟೇಲ್, ಅಂಬಿಕಾ ಸೋನಿ, ಆಸ್ಕರ್, ಮೊಹಿಸಿನಾ ಕಿದ್ವಾಯಿ ಸದಸ್ಯರಾಗಿರುವ ಆ ಕಮಿಟಿಯು ತನ್ನ ವಿಶೇಷ ಅಭಿಪ್ರಾಯವನ್ನೇನೂ ಹೇಳುವುದಿಲ್ಲ, ಬದಲಾಗಿ ಕರ್ನಾಟಕದ ಪಕ್ಷದ ನಾಯಕರೇ (ಖರ್ಗೆ-ಧರ್ಮಸಿಂಗ್) ಸದಸ್ಯರಾಗಿರುವ ಸ್ಟೀರಿಂಗ್ ಕಮಿಟಿ ಶಿಫಾರಸ್ಸನ್ನೇ ಒಪ್ಪಿ ಸಮ್ಮತಿಸುತ್ತದೆ.

ಮೊನ್ನೆ ಆದದ್ದೂ ಹಾಗೇನೆ!

ಧರ್ಮಸಿಂಗ್ ತಮಗಿದ್ದ ಈ ಸ್ಥಾನಬಲ ದುರುಪಯೋಗ ಪಡಿಸಿಕೊಂಡು ದೇವೇಗೌಡರ ಹಿತವನ್ನು ಕಾಪಾಡಿದ್ದಲ್ಲದೇ ಮುಂದೆ ತಾನೇ ಸಿಎಂ ಆಗುವ ಒಂದು ಬಾಗಿಲನ್ನು ತೆರೆದಿಟ್ಟುಕೊಂಡು ಬಿಟ್ಟಿದ್ದಾರೆ.

ಉಡುಪಿ: ಮಠದ ಕುದುರು ಈ ನೆಲ ಯಾರಿಗೆ ಸೇರಿದ್ದು?

ಉಡುಪಿಯಿಂದ ದಕ್ಷಿಣಕ್ಕೆ ಸುಮಾರು ನಾಲ್ಕು ಕಿಲೋಮೀಟರ್ ದೂರದಲ್ಲಿ ಉದ್ಯಾವರ ಹೊಳೆ ಹರಿಯುತ್ತಿದ್ದು ಅದು ಕಡಲನ್ನು ಕೂಡುವ ತಾಣದಿಂದ ಸ್ವಲ್ಪ ದೂರದಲ್ಲಿ ಮಠದ ಕುದುರು ಎಂಬ ದ್ವೀಪವಿದೆ. ಕರಾವಳಿಯ ಕಡಲ ಸಮೀಪದ ಹೊಳೆಗಳ ನಡುವೆ ಇಂತಹ ಹಲವು ದ್ವೀಪಗಳಿದ್ದು ಅವುಗಳನ್ನು 'ಕುದುರು' ಎನ್ನುತ್ತಾರೆ. ಮಠದ ಕುದುರು, ಅದರ ಹೆಸರೇ ಸೂಚಿಸುವಂತೆ ಉಡುಪಿಯ ಅಷ್ಟಮಠಗಳಲ್ಲಿ ಒಂದಾಗಿರುವ ಅದಮಾರು ಮಠದ ಒಡೆತನಕ್ಕೆ ಸೇರಿದೆ. ನಾಡಿನ ಇತರ ಪ್ರಮುಖ ಮಠಮಾನ್ಯಗಳು ಹೇಗೋ ಹಾಗೆಯೇ ಉಡುಪಿಯ ಮಠಗಳೂ ಒಂದು ಕಾಲಕ್ಕೆ ಭಾರೀ ಭೂಮಾಲಿಕ ಸಂಸ್ಥೆಗಳಾಗಿದ್ದವು. ಈ ಮಠಗಳಿಗೆ ನಡೆದುಕೊಳ್ಳುವ ನೂರಾರು ಭಕ್ತರಿದ್ದಂತೆಯೇ ಇವರ ನೆಲವನ್ನು ಉತ್ತು ಬಿತ್ತಿಗೆಯ್ದು ಗೇಣಿ ಸಲ್ಲಿಸುವ ನೂರಾರು ಒಕ್ಕಲುಗಳೂ ಇದ್ದರು. ಕರ್ನಾಟಕದಲ್ಲಿ ಶ್ರೀ ದೇವರಾಜ ಅರಸು ಅವರು ಮುಖ್ಯಮಂತ್ರಿಗಳಾಗಿದ್ದಾಗ ಜಾರಿಗೆ ಬಂದ ಭೂಸುಧಾರಣಾ ಕಾಯ್ದೆಯ ಅನ್ವಯ ಈ ಒಕ್ಕಲುಗಳಲ್ಲಿ ಹೆಚ್ಚಿನವರು ತಾವು ಉತ್ತ ಮಠದ ಭೂಮಿಗೆ ತಾವೇ ಒಡೆಯರಾದರೂ ಉಡುಪಿಯ ಮಠಗಳ ಬಳಿ ಈಗಲೂ ಸಾಕಷ್ಟು ಕೃಷಿ ಭೂಮಿ ಮತ್ತು ಉಡುಪಿಯ ಆಸುಪಾಸಿನಲ್ಲಿ ದೊಡ್ಡ ಪ್ರಮಾಣದಲ್ಲಿ ಕೃಷಿಯೇತರ ಖಾಲಿ ಜಮೀನು ಇದೆ.

ಈ ಜಮೀನನ್ನು ಮಠಗಳು ಮನೆಯ ಸೈಟುಗಳಾಗಿ ಪರಿವರ್ತಿಸಿ ಈಗ ಚಿನ್ನದ ಬೆಲೆಗೆ ಮಾರುತ್ತಿವೆ. ನ್ಯಾಯವಾಗಿ ಇಡೀ ಸಮುದಾಯದ ಸೊತ್ತಾಗಿರುವ ಭೂಮಿ ಹೀಗೆ ಉಡುಪಿಯಲ್ಲಿ ಬರೇ ಕೆಲವು ಕಾಗದ ಪತ್ರಗಳ ಆಧಾರದ ಮೇಲೆ, ದುಡ್ಡಿರುವವರ ಸ್ಥಿರಾಸ್ತಿಯಾಗಿ ಮಾರ್ಪಡುತ್ತಿದೆ. ಉಡುಪಿಯನ್ನು ಕೇವಲ ಮಧ್ವ, ಪುರಂದರ, ಕನಕರ ಪರಂಪರೆಯ ಜೊತೆ ಸಮೀಕರಿಸುವ ನಮ್ಮ ಕೆಲವು ಭಾವುಕ ಬುದ್ಧಿಜೀವಿಗಳು ಇನ್ನಾದರೂ ಇಂತಹ ಕ್ಷೇತ್ರಗಳ ಇನ್ನೊಂದು ಮುಖದತ್ತ ಗಮನಹರಿಸಬೇಕು. ಉಡುಪಿಯ ಮಾಧ್ವಮಠಗಳ ಶೋಷಣೆಯ ಈ ಕರಾಳ ಮುಖಕ್ಕೆ ಕೊಡಬಹುದಾದ ನೂರಾರು ಉದಾಹರಣೆಗಳಲ್ಲಿ ಒಂದು ಉದ್ಯಾವರದ ಮಠದ ಕುದುರಿನ ಮೂಲ ನಿವಾಸಿಗಳ ಬಗ್ಗೆ ಅದಮಾರು ಮಠದ ಹಿರಿಯ ಸ್ವಾಮಿ ಶ್ರೀವಿಭುದೇಶ ತೀರ್ಥರು ನಡೆದುಕೊಂಡ ರೀತಿ.

ಮಠದ ಕುದುರು, ಏನಿಲ್ಲವೆಂದರೂ ಸುಮಾರು 50 ಎಕರೆಯಷ್ಟು ವಿಸ್ತೀರ್ಣ ದ್ವೀಪ. ಸುತ್ತಲೂ ನೀರು, ನಡುವೆ ಸಾವಿರಾರು ತೆಂಗಿನಮರಗಳ ತೋಟವಿರುವ ಈ ದ್ವೀಪ ನಂದನವನವೇ-ನೋಡುವವರ ಕಣ್ಣಿಗೆ ಮೊನ್ನೆ ಏಪ್ರಿಲ್ 20ರ ಭಾನುವಾರ ಸಂಜೆ ಮಠದ ಕುದುರಿನಲ್ಲಿ ಒಂದು ಸಮಾರಂಭ ಏರ್ಪಾಡಾಗಿತ್ತು. ಆ ಕುದುರಿನಲ್ಲಿ ಲಾಗಾಯ್ತಿನಿಂದಲೂ ವಾಸವಾಗಿದ್ದ 21 ಆ ಕುಟುಂಬಗಳಿಗೆ ಅದಮಾರು ಮಠಾಧೀಶರು "ದಾನ"ವಾಗಿ ನೀಡಿದ ಒಂದೂವರೆ ಎಕರೆಯಷ್ಟು ಜಾಗದಲ್ಲಿ ಒಂದು ಖಾಸಗಿ ಟ್ರಸ್ಟ್ ನಿರ್ಮಿಸಿದ 21 ಮನೆಗಳನ್ನು ಕುಟುಂಬಗಳಿಗೆ ಉಡುಗೊರೆಯಾಗಿ ಕೊಡುವ ಸಮಾರಂಭ ಅದು. ಉಡುಪಿಯ ಮಾಜಿ ಬಿಜೆಪಿ ಶಾಸಕ ರಘುಪತಿ ಭಟ್ಟರೇ, ಮನೆಗಳನ್ನು ನಿರ್ಮಿಸಿದ ಆ ಖಾಸಗಿ ಟ್ರಸ್ಟ್‌ನ ಅಧ್ಯಕ್ಷರು. ಅಂದಿನ ಸಮಾರಂಭದಲ್ಲಿ ಬಿಜೆಪಿ ನಾಯಕರುಗಳಾದ ಯಡಿಯೂರಪ್ಪ, ಅರವಿಂದ ಲಿಂಬಾವಳಿ, ಸದಾನಂದ ಗೌಡ ಮುಂತಾದವರು ಭಾಗವಹಿಸಬೇಕಾಗಿತ್ತು; ಆದರೆ ಚುನಾವಣಾ ನೀತಿಸಂಹಿತೆ ಜಾರಿಗೆ ಬಂದದ್ದರಿಂದ ಅವರೆಲ್ಲ ಸಮಾರಂಭದಿಂದ ದೂರ ಉಳಿದರು. ಅವರ ಬದಲು ಕ್ರೇಜಿ ಸ್ಟಾರ್ ರವಿಚಂದ್ರನ್ ಆಗಮಿಸಿ ರಾಜಕೀಯದ ಸ್ಟಾರ್‌ಗಳ ಕೊರತೆಯನ್ನು ತುಂಬಿಕೊಟ್ಟರು. ಆದರೆ "ಇಲ್ಲಿಗೆ ಬರುತ್ತಿರುವುದು ಏಕೆ ಎಂದು ಗೊತ್ತಿರಲಿಲ್ಲ; ಬಡವರಿಗೆ ಮನೆ ನಿರ್ಮಾಣ ಮಾಡಿಕೊಡುತ್ತಿರುವುದರ ವಿಚಾರ ತಿಳಿದು ಸಂತೋಷವಾಯಿತು" ಎಂದು ಹೇಳಿದ ರವಿಚಂದ್ರನ್ ಮಾತಿನಿಂದ ಆ ಬಡವರಿಗೆ ಸಂತೋಷವಾಯಿತೇ ಹೇಗೆ ಎಂಬುದು ಗೊತ್ತಿಲ್ಲ. ಮಠದ ಕುದುರಿನ 21 ಕುಟುಂಬಗಳಲ್ಲಿ 5 ಬಿಲ್ಲವ, 8 ಮೊಗವೀರ ಮತ್ತು 8 ಕ್ರಿಶ್ಚಿಯನ್ ಸಮುದಾಯಕ್ಕೆ ಸೇರಿದವು. ಬಹುಶಃ ಈ ಕಾರಣಕ್ಕೋ ಏನೋ, ಸಮಾರಂಭದ ಇನ್ನೋರ್ವ ಮುಖ್ಯ ಅತಿಥಿ, ಆರ್‌ಎಸ್‌ಎಸ್ ನೇತಾರ ಕಲ್ಲಡ್ಕ ಪ್ರಭಾಕರ ಭಟ್, "ಹಿಂದೂ ದೇಶದಲ್ಲಿ ಮಾತ್ರ ಎಲ್ಲಾ ಜಾತಿಯವರೂ ಒಟ್ಟಾಗಿ ಬದುಕಲು ಅವಕಾಶವಿದೆ" ಎಂದು ಹೇಳಿ ತಮ್ಮ ಮೂರ್ಖತನವನ್ನು ಮೆರೆದರು. ಹಿಂದೂಗಳನ್ನು ಬಿಟ್ಟು ಬೇರೆ ಯಾವ ಸಮುದಾಯದಲ್ಲಿ ಜಾತಿ ಪದ್ಧತಿ ಇದೆ?

ರವಿಚಂದ್ರನ್, ಪ್ರಭಾಕರ ಭಟ್ಟ ವಗೈರೆಗಳು ಆ ಸಮಾರಂಭದಲ್ಲಿ ಬಾಯಿ ತುಂಬ ಹೊಗಳಿದ ಅದಮಾರು ಮಠದ ಸ್ವಾಮಿಗಳ ನೆಲ 'ದಾನ' ಮತ್ತು ರಘುಪತಿ ಭಟ್ಟರ ಟ್ರಸ್ಟಿನ ಗೃಹ ನಿರ್ಮಾಣದ ಹಿಂದೆ ಬಡವರ ಅಸಹಾಯಕತೆ ಹಾಗೂ ಮಠಮಾನ್ಯಗಳ ಸೋಗಲಾಡಿತನದ ದಾರುಣ ಕಥೆಯೊಂದಿದೆ.

> ರವಿಚಂದ್ರನ್, ಪ್ರಭಾಕರ ಭಟ್ಟ ವಗೈರೆಗಳು ಆ ಸಮಾರಂಭದಲ್ಲಿ ಬಾಯಿ ತುಂಬ ಹೊಗಳಿದ ಅದಮಾರು ಮಠದ ಸ್ವಾಮಿಗಳ ನೆಲ 'ದಾನ' ಮತ್ತು ರಘುಪತಿ ಭಟ್ಟರ ಟ್ರಸ್ಟಿನ ಗೃಹ ನಿರ್ಮಾಣದ ಹಿಂದೆ ಬಡವರ ಅಸಹಾಯಕತೆ ಹಾಗೂ ಮಠಮಾನ್ಯಗಳ ಸೋಗಲಾಡಿತನದ ದಾರುಣ ಕಥೆಯೊಂದಿದೆ.


ಜನರಿಗೆ ಸೇರಬೇಕಿದ್ದ ಭೂಮಿಯನ್ನು ಕಬಳಿಸಿದ ಬಗ್ಗೆ ಮಠದ ಸ್ವಾಮಿಯೊಂದಿಗೆ ರಘುಪತಿಭಟ್ಟರ ಚರ್ಚೆ

ನೂರಾರು ವರ್ಷಗಳಿಂದ ಅದಮಾರು ಮಠದ ಒಡೆತನದಲ್ಲಿರುವ ಮಠದ ಕುದುರಿನಲ್ಲಿ ಸುಮಾರು 50 ಕೂಲಿಕಾರ ಕುಟುಂಬಗಳು ತಲ ತಲಾಂತರದಿಂದಲೂ ವಾಸವಾಗಿವೆ. ಈ ಕುಟುಂಬಗಳಲ್ಲಿ ಹೆಚ್ಚಿನವರಿಗೆ ಕುದುರಿನ ತೋಟದಲ್ಲೇ ಕೂಲಿ ಕೆಲಸ ಸಿಗುತ್ತಿತ್ತು. ಕುದುರಿನ ಹೊರಗೂ ಅವರು ಕೂಲಿಗೆ ಹೋಗುತ್ತಿದ್ದರು. 1976 ರಲ್ಲಿ ದೇವರಾಜ ಅರಸು ಜಾರಿಗೆ ತಂದ ಭೂಸುಧಾರಣ ಶಾಸನದ ಕಲಮುಗಳ ಪ್ರಕಾರ ಈ 50 ಕುಟುಂಬಗಳವರನ್ನು ಅದಮಾರು ಮಠದ ಒಕ್ಕಲುಗಳೆಂದೇ ಪರಿಗಣಿಸಬಹುದಾಗಿದೆ. ಮಠದ ಕುದುರಿನ ನಿವಾಸಿಗಳು ಹೇಳುವ ಪ್ರಕಾರ ಈ ಕುಟುಂಬಗಳವರು ತಮ್ಮ ಮನೆ ಅಡಿ ಜಾಗ ಹಾಗೂ ಸುತ್ತಮುತ್ತಲಿನ ಕೃಷಿ ಭೂಮಿಯ ಒಡೆತನಕ್ಕೆ ಈ ಶಾಸನದ ಅನ್ವ[...] ಡಿಕ್ಲರೇಷನ್ ಕೊಡುವ ತಯಾರಿಯನ್ನೂ ನಡೆಸಿದ್ದ[...] ಆದರೆ ಅದರ ಅಗತ್ಯವೇನೂ ಇಲ್ಲವೆಂದೂ, ಸ್ವ[...] ತಾನೇ ಅವರಿಗೆಲ್ಲ ಜಾಗ ಬರೆದು ಕೊಡುವುದಾಗಿಯ[...] ಅದಮಾರು ಮಠದ ಹಿರಿಯ ಸ್ವಾಮಿಗಳು ಭರವ[...] ಕೊಟ್ಟರಂತೆ.

ಮಠದ ಕುದುರಿನ ನಿವಾಸಿಗಳು ಸ್ವಾಮಿಗ[...] ಮಾತನ್ನು ನಂಬಿದರು. ಆದರೆ ಸ್ವಾಮಿಗಳು ತವ[...] ಮಾತನ್ನು ಬಳಸಿಕೊಳ್ಳಲಿಲ್ಲ. ಅಷ್ಟು ಮಾತ್ರವೇ ಅ[...] ಆ ನಿವಾಸಿಗಳು ಜಾಗ ಖಾಲಿ ಮಾಡಬೇಕು ಎಂದ[...] ಸಹ ಸ್ವಾಮಿಗಳು ಬಯಸಿದ್ದರು. ಹಾಗಾಗಿ ಮಠ[...] ಕುದುರಿನಲ್ಲಿದ್ದ ಯಾವ ಮನೆಯವರಿಗೂ ತಮ್ಮ ಮನೆಗ[...] ದುರಸ್ತಿ ಇತ್ಯಾದಿ ಕಾಮಗಾರಿಯನ್ನು ಮಾಡಲು ಮಠ[...] ಮ್ಯಾನೇಜರ್ ಅನುಮತಿ ಕೊಡುತ್ತಿರಲಿಲ್ಲ; ಸ್ವತಃ ತಾನ[...] ಅದನ್ನು ಮಾಡಿಸುತ್ತಿರಲಿಲ್ಲ. ಇಡೀ ಮಠದ ಕುದುರಿನ[...] ಹೆಂಚಿನ ಮಾಡಿರುವ ಕಟ್ಟಡಗಳು ಕೇವಲ ಎರಡು[...] ಮಠದ ಮ್ಯಾನೇಜರ್‌ನ ವಸತಿ ಮತ್ತು ಅಲ್ಲಿ[...] ಸಮೀಪದ ಭಜನಾ ಮಂದಿರ. ವಿದ್ಯುಚ್ಛಕ್ತಿ ಸಂಪರ್ಕ[...] ಇದ್ದದ್ದೂ ಆ ಎರಡು ಕಟ್ಟಡಗಳಿಗೆ ಮಾತ್ರ. ಕುದುರಿ[...] ಉಳಿದ ಅಷ್ಟೂ ಮನೆಗಳಿಗೆ ಮಣ್ಣಿನ ಗೋಡ[...] ಮುಳಿಹುಲ್ಲಿನ ಮಾಡು. ಕಡಲತೀರದ ಮಳೆ, ಗಾ[...] ಮತ್ತು ಪ್ರವಾಹಗಳಿಗೆ ಆ ಮನೆಗಳು ವರ್ಷವರ್ಷವ[...] ತುತ್ತಾಗಿ ಚಿಂದಿಯೆದ್ದು ಹೋದರೂ, ಆ ಮನೆಗಳವರ[...] ತಮ್ಮ ಜೀವ ಕೈಯಲ್ಲಿ ಹಿಡಿದುಕೊಂಡು ಅವುಗಳ[...] ವಾಸಿಸಬೇಕಾಗಿತ್ತು. ಮಳೆಗಾಲದ ಕಥೆ ಹೀಗಾದ[...] ಬೇಸಿಗೆಯಲ್ಲಿ ಆ ಮನೆಗಳವರಿಗೆ ಕುಡಿಯುವ ನೀರಿಗ[...] ತತ್ವಾರ. ಕಡಲ ತೀರ ಸಮೀಪದಲ್ಲಿರುವುದರಿಂ[...] ಕುದುರಿನಲ್ಲಿ ಸಿಗುವ ನೀರೆಲ್ಲ ಉಪ್ಪಾಗಿಬಿಡುತ್ತದೆ. ಆದ[...] ಈ ಮನೆಯವರು ನೀರಿನ ಪೈಪಿನ ಸಂಪರ್ಕ[...] ಪಡೆದುಕೊಳ್ಳಲು ಮಠದವರು ಅನುಮತಿ ಕೊಟ್ಟರಲಿಲ್ಲ[...] ಈ ಪರಿಸ್ಥಿತಿಯಿಂದಾಗಿ ಒಂದೊಂದೇ ಮನೆಯವರ[...] ಕುದುರನ್ನು ಬಿಟ್ಟುಹೋಗಿ ಈಗ ಅಲ್ಲಿ 2[...] ಕುಟುಂಬಗಳು ಮಾತ್ರ ವಾಸ ಮಾಡಿಕೊಂಡಿವೆ.

ಇದು ಹೀಗೆಯೇ ಮುಂದುವರಿದಿದ್ದರೆ ಮಠದ[...] ಕುದುರು ಒಂದಲ್ಲ ಒಂದು ದಿನ ಖಾಲಿಯಾಗಿ ಸ್ವಾಮಿಗ[...] ಆಸೆ ಈಡೇರುತ್ತಿತ್ತು. ಆದರೆ ಕರ್ನಾಟಕ ಜನಪ[...] ವೇದಿಕೆಯ ಉಡುಪಿ ಘಟಕ ಅದಕ್ಕೆ ಅಡ್ಡಗಾಲು[...] ಹಾಕಿತು. ಹೊರಜಗತ್ತಿಗೆ ಮಠದ ಕುದುರು ನಿವಾಸಿಗ[...] ದಯನೀಯ ಸ್ಥಿತಿಯನ್ನು ಮನವರಿಕೆ ಮಾಡಿಕೊಟ್ಟದ್ದು[...] ಕೂಡ ಈ ಸಂಘಟನೆಯೇ. ಜನಪರ ವೇದಿಕೆಯ[...] ಶ್ರೀರಾಮ ದಿವಾಣ, ಜನಾರ್ದನ ಭಂಡಾರ್, ಗೋಪಾ[...] ಶೆಟ್ಟಿ ಮತ್ತಿತರರು 2005 ರ ಜೂನ್ ತಿಂಗಳಲ್ಲಿ ಒಂದು[...] ಪತ್ರಿಕಾಗೋಷ್ಠಿ ಕರೆದು ಮಠದ ಕುದುರಿನ ನಿವಾಸಿಗ[...] ದುಃಸ್ಥಿತಿಯನ್ನು ವಿವರಿಸಿದ್ದೇ ಅಲ್ಲದೆ, ಪತ್ರಕರ್ತರನ್ನು[...] ಸ್ಥಳಕ್ಕೂ ಕರೆದುಕೊಂಡು ಹೋಗಿ ತೋರಿಸಿದರು[...] ಕರ್ನಾಟಕ ಭೂಸುಧಾರಣ ಶಾಸನದ ಅನ್ವಯ, ಈ[...] ನಿವಾಸಿಗಳೇ ಮಠದ ಕುದುರಿನ ಜಮೀನಿನ ನೈಜಹಕ್ಕು[...] ದಾರರೆಂದೂ, ಅದಮಾರು ಮಠ ಅವರ ಜಮೀನನ್ನು[...]

ಶಾಂತಿನಗರ : ಬಿಜೆಪಿ-ದಳದ ಜಂಟಿ ಕ್ಯಾಂಡಿಡೇಟ್ ಮಲ್ಲಿಕಾರ್ಜುನ!

ಬಿಜೆಪಿ-ಜೆಡಿಎಸ್ ಕೂಡಿಕೆ ಸರ್ಕಾರ ನಡೆಯುತ್ತಿದ್ದಾಗ ಏನೇನು ಒಳವ್ಯವಹಾರಗಳು ನಡೆದಿದ್ದವೋ, ಯಾವ್ಯಾವ ಜಂಟಿ ಅವ್ಯವಹಾರಗಳು ಕುದುರಿದ್ದವೋ...

ಅವೆಲ್ಲಾ ಈ ಎಲೆಕ್ಷನ್‌ನಲ್ಲಿ ಕಾಣಿಸುತ್ತಿದೆ.

ಬೆಂಗಳೂರಿನ ಶಾಂತಿನಗರ ಕ್ಷೇತ್ರ ಇದಕ್ಕೊಂದು ಜೀವಂತ ಉದಾಹರಣೆಯಾಗಿದೆ. ಇಲ್ಲಿ ಕಾಂಗ್ರೆಸ್‌ನ ಎನ್.ಎ.ಹ್ಯಾರೀಸ್ ಸ್ಪರ್ಧಿಸುತ್ತಿದ್ದಾರೆ. ಆದರೆ ಹ್ಯಾರೀಸ್ ವಿರುದ್ಧ ನಿಂತಿರುವ ಕುಳ್ಳ ಮಲ್ಲಿಕಾರ್ಜುನ ಹೆಸರಿಗೆ ಬಿಜೆಪಿ ಅಭ್ಯರ್ಥಿಯಾಗಿದ್ದರೂ ಅದೇ ವೇಳೆಗೆ ಜಾತ್ಯತೀತ ದಳದ ಬೆಂಬಲವನ್ನೂ ಗಿಟ್ಟಿಸಿದ್ದಾರೆ.


ಇದು ಎಲೆಕ್ಷನ್ನು ಪಕ್ಷ ನಿಷ್ಠೆಗಳಿಗೂ ಮೀರಿರುವ ವ್ಯವಹಾರಿಕ ನಿಷ್ಠೆಯ ವಿಚಾರ. ಜೆಡಿಎಸ್‌ನಿಂದ ಮೊದಲು ಮಾಜಿ ಕಾರ್ಪೋರೇಟರ್ ವಾಸುದೇವ ಮೂರ್ತಿ ಅಭ್ಯರ್ಥಿ ಎಂದು ಘೋಷಿಸಲಾಗಿತ್ತು. ನಂತರ ರಾತ್ರೋರಾತ್ರಿ ಈ ಹೆಸರು ಮಾಯವಾಗಿ ಫ್ರಾನ್ಸಿಸ್ ಜಾಕ್ಸನ್ ಎಂಬ ಮುಖರಹಿತ ಅಸಾಮಿ ದಳದ ಅಧಿಕೃತ ಕ್ಯಾಂಡಿಡೇಟಾಗಿ ಬಿಟ್ಟರು.

ತಮಾಷೆ ಏನು ಗೊತ್ತೇ?

ಹೀಗೆ ದಳದ ಅಭ್ಯರ್ಥಿಯನ್ನೇ ಬದಲಾಯಿಸಿದ್ದು ಬೇರೆ ಯಾರೂ ಅಲ್ಲ, ಬಿಜೆಪಿಯ ಹುರಿಯಾಳಾಗಿರುವ ಇದೇ ಮಲ್ಲಿಕಾರ್ಜುನ. ಒಂದು ವೇಳೆ ವಾಸುದೇವ ಮೂರ್ತಿ ದಳದ ಅಭ್ಯರ್ಥಿಯಾದರೆ ತಾನು ಕಾಂಗ್ರೆಸ್‌ನ ಹ್ಯಾರೀಸ್ ಜೊತೆ ಸೆಣಸಾಡುವುದು ಕಷ್ಟ ಎಂದು ಹೆದರಿದ ಮಲ್ಲಿಕಾರ್ಜುನ ದಳದಿಂದ ಓರ್ವ ಡಮ್ಮಿ ಅಭ್ಯರ್ಥಿ ಹಾಕುವಂತೆ ಮಾಡಿಕೊಂಡಿದ್ದಾರೆ.

ಇದಕ್ಕಿರುವ ಕಾರಣ ಏನು ಗೊತ್ತೇ?


ದಳದ ನಾಯಕರಾದ ಕುಮಾರಸ್ವಾಮಿ ಹಾಗೂ ಜಮೀರ್ ಅಹಮದ್ ಖಾನ್. ಶಾಂತಿನಗರದಲ್ಲಿ ಜೆಡಿಎಸ್ ಗೆಲ್ಲದಿದ್ದರೂ ಪರವಾಗಿಲ್ಲ, ಆದರೆ ಬಿಜೆಪಿಯ ಮಲ್ಲಿಕಾರ್ಜುನ ಮಾತ್ರ ಸೋಲಬಾರದು ಎಂದು ಜೆಡಿಎಸ್ ನಾಯಕರು ಬಯಸುತ್ತಿದ್ದಾರೆ.


ಹ್ಯಾರೀಸ್


ಜಂಟಿ ಭೂವ್ಯವಹಾರಗಳೇ ಇದಕ್ಕಿರುವ ಕಾರಣ. ಈ ಹೊಸ ಬೆಳವಣಿಗೆಗಳಿಂದಾಗಿ ಬಿಜೆಪಿಯ ಮಲ್ಲಿಕಾರ್ಜುನ ಮತ್ತು ಕಾಂಗ್ರೆಸ್‌ನ ಹ್ಯಾರೀಸ್ ಮಧ್ಯೆ ನೇರ ಸೆಣಸಾಟ ನಡೆಯುತ್ತಿದೆ. ಹ್ಯಾರೀಸ್ ಕ್ರಿಶ್ಚಿಯನ್ ಆದ್ದರಿಂದ ಹಿಂದೂ ಓಟುಗಳನ್ನೆಲ್ಲಾ ತಾನೇ ಬಾಚಬಹುದೆಂಬುದು ಮಲ್ಲಿಕಾರ್ಜುನನ ಲೆಕ್ಕಾಚಾರ.

ಈ ಓಟಿನ ಲೆಕ್ಕಾಚಾರ ಒಂದೆಡೆ ಇರಲಿ, ಆದರೆ ಬರೀ ಲ್ಯಾಂಡ್ ಬ್ರೋಕರ್‌ಗಿರಿ ಮಾಡಿಕೊಂಡಿದ್ದ ಮಲ್ಲಿಕಾರ್ಜುನ ಬಿಜೆಪಿ ಟಿಕೆಟ್ ಹೊಡೆದುಕೊಂಡಿದ್ದು ನೋಡಿ ಸಾವಿರಾರು ಜನ ದಂಗು ಬಡಿದು ಹೋಗಿದ್ದಾರೆ. ಯಾಕೆಂದರೆ ಇವರೆಲ್ಲಾ ಈ ಮಲ್ಲಿಕಾರ್ಜುನನಿಂದ ಒಂದೋ ವಂಚನೆಗೊಳಗಾದವರು ಇಲ್ಲಾ ಜಂಟಿ ಲ್ಯಾಂಡ್ ಡೀಲ್ ನಡೆಸಲು ಹೋಗಿ ಕೋಟ್ಯಂತರ ರೂಪಾಯಿ ಕಳಕೊಂಡವರಾಗಿದ್ದಾರೆ.

ಊದುಬತ್ತಿ ಮಾರುತ್ತಿದ್ದವನ ಮಗ ಮಲ್ಲಿಕಾರ್ಜುನ ಒಬ್ಬ ತುಂಡು ರಿಯಲ್ ಎಸ್ಟೇಟ್ ಏಜೆಂಟಾಗಿದ್ದಾಗಿನಿಂದ ನೋಡಿದವರಿದ್ದಾರೆ. ಪಿಯರ್‌ಲೆಸ್ ಏಜೆನ್ಸಿ ಮಾಡುತ್ತಾ ಖಾಸಗಿ ಆಫೀಸ್‌ನಲ್ಲಿ ಕೆಲಸ ಮಾಡಿಕೊಂಡು ಹೊಟ್ಟೆ ಹೊರೆದುಕೊಳ್ಳುತ್ತಿದ್ದ ಮಲ್ಲಿಕಾರ್ಜುನ ಹಾಗೇ ಲ್ಯಾಂಡ್ ವ್ಯವಹಾರಕ್ಕೂ ಬಂದ. ಬಿಡಿಎನಲ್ಲಿ ಕೆಲವು ಅಧಿಕಾರಿಗಳ ಸ್ನೇಹ ಬೆಳೆಸಿಕೊಂಡು ಡಿನೋಟಿಫಿಕೇಶನ್ ದಂಧೆ ಪ್ರಾರಂಭಿಸಿದ. ಬೇರೆಲ್ಲರೂ ಕಮೀಷನ್ ಆಸೆಗೆ ಈ[...] ಕೆಲಸ ಮಾಡಿದರೆ ಈ ಮಲ್ಲಿಕಾರ್ಜುನ ಮಾತ್ರ[...] ಬಿಡಿಎನಿಂದ ಬಿಡಿಸಿಕೊಡುವ ಜಮೀನಿನ ಅರ್ಧಭಾಗ[...]ವನ್ನೇ ಪಾಲು ಕೇಳುತ್ತಿದ್ದ. ಬನಶಂಕರಿ ೬ನೇ ಹಂತ, ಉತ್ತರಹಳ್ಳಿ, ಅಂಜನಾನಗರ ಹಾಗೂ ರೈರಿ ಸರ್ಕಲ್ ಸುತ್ತಮುತ್ತ ಬಿಡಿಎ ನೋಟಿಫೈ ಮಾಡಿದ್ದ ನೂರಾರು ಎಕರೆ ಭೂಮಿ ಮಲ್ಲಿಕಾರ್ಜುನನ ಕೈವಾಡದಿಂದ ಡಿನೋಟಿಫೈ ಆಗುತ್ತಾ ಬಂದವು. ಅದೇ ವೇಗದಲ್ಲಿ ಅವನ ಆಸ್ತಿಯೂ ಬೆಳೆಯಿತು.


ಕುಳ್ಳ ಮಲ್ಲಿಕಾರ್ಜುನ

ಈ ಡೀಲ್‌ಗಳಲ್ಲಿ ಬಿಜೆಪಿಯ ಕಟ್ಟಾ ನಾಯ್ಡು[...]



. ಮಠದ ಕುದುರುವಿನಲ್ಲಿ ಮನೆ ಕಟ್ಟಿಸಿದ್ದರ ಬಗ್ಗೆ ತನ್ನ
ವೆಬ್‌ಸೈಟ್‌ಲ್ಲಿ ರಘುಪತಿಭಟ್ಟ ಕೊಚ್ಚಿಕೊಂಡಿರುವ ಪರಿ

ವರಿಗೇ ಬಿಟ್ಟು ಕೊಡಬೇಕು ಮತ್ತು ಅಲ್ಲಿನ ಎಲ್ಲ 21 ನೆಗಳನ್ನು ದುರಸ್ತಿ ಮಾಡಿ ವಿದ್ಯುತ್ ಹಾಗೂ ನೀರಿನ ಪರ್ಕಗಳನ್ನು ಹಾಕಿಸಿ ಕೊಡಬೇಕು ಎಂದೂ ಜನಪರ ದಿಕೆ ಆಗ್ರಹಿಸಿತು.

ಈ ಪತ್ರಿಕಾಗೋಷ್ಠಿ ನಡೆದ ಮಾರನೆಯ ದಿನ, ಅಂದರೆ 05 ಜೂನ್ 15ರಂದು ಜಿಲ್ಲೆಯ ಎಲ್ಲ ಪತ್ರಿಕೆಗಳಲ್ಲೂ ಠದ ಕುದುರು ದೊಡ್ಡ ಸುದ್ದಿ ಮಾಡಿತು. ಆಗ ಪರಿಸ್ಥಿತಿ ೋಪಕ್ಕೆ ತಿರುಗಬಹುದು ಎಂದು ಊಹಿಸಿದ ಅದಮಾರು ಠದ ಸ್ವಾಮಿಗಳು ತಾವಾಗಿಯೇ ಮಠದ ಕುದುರಿನ ಎಲ್ಲ ವಾಸಿಗಳಿಗೂ ತಲಾ ಐದೈದು ಸೆಂಟ್ಸ್‌ನಷ್ಟು ಜಾಗವನ್ನು ಿನ' ಮಾಡುವುದಾಗಿ ಆಶ್ವಾಸನೆ ನೀಡಿದರು. ಅದಮಾರು ಠದಲ್ಲಿ ನಡೆದ ಸಮಾಲೋಚನಾ ಸಭೆಯಲ್ಲಿ ಮಾಜಿ ಶಾಸಕ ಘುಪತಿ ಭಟ್ಟ ತನ್ನ ಟ್ರಸ್ಟ್‌ನ ವತಿಯಿಂದ 21 ಮನೆಗಳನ್ನು ್ಸುವುದಾಗಿ ಹೇಳಿದರು. ಈ ಸಮಸ್ಯೆಯನ್ನು ಇಲ್ಲಿಗೇ ಇತ್ಯರ್ಥಗೊಳಿಸಬೇಕಾಗಿಯೂ, "ಹೊರಗಿನ ನಕ್ಸಲ್" ಇತ್ಯಾದಿ ಶಕ್ತಿಗಳು ಇದರಲ್ಲಿ ತಲೆ ಹಾಕಲು ಆಸ್ಪದ ಕೊಡಬಾರದೆಂದೂ ಮಠದ ಕುದುರಿನ ನಿವಾಸಿಗಳಿಗೆ ತಾಕೀತು ಮಾಡಲಾಯಿತು.

ಈಗ ಮಠದ ಕುದುರಿನ ಪಶ್ಚಿಮ ತುದಿಯಲ್ಲಿ 21 ಮನೆಗಳನ್ನು ಒತ್ತೊತ್ತಾಗಿ ಒಂದೇ ಕಡೆ ನಿರ್ಮಿಸಲಾಗಿದೆ. ಮೊದಲು ಈ 21 ಮನೆಗಳು ಕುದುರಿನ ಉದ್ದಗಲದಲ್ಲಿಯೂ ಹರಡಿಕೊಂಡಿದ್ದು ಅದು ಒಂದು ಹಳ್ಳಿಯೇ ಆಗಿತ್ತು. ಇನ್ನು ಮುಂದೆ ಈ 21 ಹೊಸಮನೆಗಳ 'ಬಡಾವಣೆ'ಗೂ ಕುದುರಿನ ಉಳಿದ ಜಾಗಕ್ಕೂ ನಡುವೆ ತಡೆಗೋಡೆ ನಿರ್ಮಿಸಲಾಗುತ್ತದಂತೆ. ಆನಂತರ ಮಠದ ಅನುಮತಿ ಇಲ್ಲದೆ ಯಾರಿಗೂ ಅದರೊಳಗೆ ಪ್ರವೇಶವಿರುವುದಿಲ್ಲ. ಕರ್ನಾಟಕದ ಭೂಸುಧಾರಣಾ ಕಾಯ್ದೆಯ ಪ್ರಕಾರ ಕುದುರಿನ ಭೂಮಿಗೆ ಈ 21 ಮನೆಯವರು ಮತ್ತು ಈ ಮೊದಲು ಇದ್ದು ಈಗ ಬಿಟ್ಟುಹೋದವರು ನಿಜವಾದ ಹಕ್ಕುದಾರರು. ಕರಾವಳಿಯ ಇತರ ಕುದುರುಗಳಲ್ಲೂ ತೆಂಗಿನ ತೋಟ, ಕೃಷಿ ಭೂಮಿಗಳಿದ್ದು ಅದು ಅಲ್ಲಿನ ನಿವಾಸಿಗಳ ಒಡೆತನದಲ್ಲೇ ಇದೆ. ಆದರೆ ಮಠದ ಕುದುರು ನಿವಾಸಿಗಳು ಮಾತ್ರ ತನ್ನ ಮನೆ ಅಡಿಗಳಿಂದ ಹೊರದಬ್ಬಲ್ಪಟ್ಟು, ತಮ್ಮ ಹಕ್ಕುಗಳಿಂದ ವಂಚಿತರಾಗಿರುವುದು ಮಾತ್ರವಲ್ಲ, ಅವರಿಗೆ ಮಾಡಿದ ವಂಚನೆಯನ್ನು ಅವರಿಗೆ ಮಾಡಿದ ಉಪಕಾರ ಎಂದೇ ಬಿಂಬಿಸಲಾಗುತ್ತಿದೆ.


ಈ ಉಪಕಾರದಿಂದಾಗಿ ಅದಮಾರು ಮಠಕ್ಕೆ ಈಗ ಈ ಮನೆಗಳ ಒಟ್ಟು ಒಂದೂವರೆ ಎಕರೆ ಜಾಗವನ್ನು ಹೊರತುಪಡಿಸಿ, ಕುದುರಿನ ಉಳಿದ ಅಷ್ಟೂ ಜಾಗ ಒತ್ತರೆಯಾಗಿ ಒಂದೇ ಕಡೆ ದೊರೆತಂತಾಯಿತು. ಸರ್ಕಾರಿ ಕಾಗದಪತ್ರಗಳ ಪ್ರಕಾರ ಮಠದ ಕುದುರು ಅದಮಾರು ಮಠದ್ದಾಗಿರಬಹುದು. ಆದರೆ ಆ ನೆಲ ನಿಜವಾಗಿ ಸೇರಬೇಕಾದ್ದು ಯಾರಿಗೆ? ಉಡುಪಿಯಲ್ಲಿ ಶ್ರೀರಾಮ ದಿವಾಣ ಮತ್ತು ಜನಪರ ವೇದಿಕೆಯ ಇತರ ಗೆಳೆಯರು ಕೇಳಿದ್ದು ಈ ಮೂಲಭೂತ ಪ್ರಶ್ನೆಯನ್ನು; ಅವರಿಗೆ 'ನಕ್ಸಲ್' ಎಂಬ ಲೇಬಲ್ಲು ಹಚ್ಚಲಾಯಿತು. ಶ್ರೀರಾಮ ದಿವಾಣ, ರಘುಪತಿ ಭಟ್ಟರ ರಾಜಕೀಯ ಸಹವರ್ತಿಗಳು ನಡೆಸಿದ ಆದಿ ಉಡುಪಿ ಬೆತ್ತಲೆ ಪ್ರಕರಣದ ವಿರುದ್ಧ ಮೆರವಣಿಗೆ ತೆಗೆದು ಸಭೆ ಮಾಡಿದರು; 'ಭಯೋತ್ಪಾದಕರ ಪರ' ಎಂಬ ಲೇಬಲ್ಲು ಅವರಿಗೆ ತಗಲಿಕೊಂಡಿತು. ದಿವಾಣರ ಮನೆಯಲ್ಲಿ ತರಕಾರಿ ಹೆಚ್ಚುವ ಮಚ್ಚು ಕತ್ತಿ ಬಿಟ್ಟರೆ ಬೇರೆ ಯಾವ ಆಯುಧವೂ ಇಲ್ಲ. ಆದರೆ ಉಡುಪಿಯ ಮಠಾಧೀಶರಿಗೂ, ರಘುಪತಿ ಭಟ್ಟರಂತಹ ರಾಜಕಾರಣಿಗಳಿಗೂ ಅಪಾಯಕಾರಿಯಾಗಿ ಕಾಣುವ ಕೆಲವು ವಿಚಾರಗಳು ಅವರ ಬಳಿ ಇವೆ. ಶ್ರೀರಾಮ ದಿವಾಣರನ್ನು ತೆಗೆದರೆ ಎಲ್ಲ ಸರಿಹೋಗುತ್ತದೆ ಎಂದು ರಘುಪತಿಭಟ್ಟರು ಉಡುಪಿಯಲ್ಲಿ ಸಾರ್ವಜನಿಕವಾಗಿ ಅಪ್ಪಣೆ ಕೊಡಿಸಿದ್ದು ಸುಮ್ಮನೆ ಅಲ್ಲ. ಆದರೆ ಇವತ್ತಲ್ಲ ನಾಳೆ ಜನ, "ಮಠದ ಕುದುರಿನ ನೆಲ ಯಾರಿಗೆ ಸೇರಿದ್ದು? ಈ ನಾಡಿನ ನೆಲ, ನೀರು, ಯಾರಿಗೆ ಸೇರಿದ್ದು"ಎಂದು ಕೇಳಿಯೇ ಕೇಳುತ್ತಾರೆ. ಶ್ರೀರಾಮ ದಿವಾಣ ಒಂಟಿಯಲ್ಲ, ರಘುಪತಿ ಭಟ್ಟರಿಗೆ ಗೊತ್ತಿಲ್ಲದ ಸತ್ಯ ಇದು.

■ ಜಿ. ರಾಜಶೇಖರ

ೋಕ ಮತ್ತು ದಳದ ಜಮೀರ್ ಮತ್ತು ುಮಾರಸ್ವಾಮಿ ಶಾಮೀಲಾಗಿರುತ್ತಿದ್ದರು.




ಸುಬ್ರಮಣ್ಯಪುರದಲ್ಲಿ ಕುಮಾರ್ ಮಿಲ್‌ನವರಿಗೆ ಸೇರಿದ್ದ ದ್ದ ಜಮೀನೊಂದು 6/1 ೋಟಿಫಿಕೇಷನ್ ಆದಾಗ ಅರ್ಧ ು ತನಗೆಂಬ ಒಪ್ಪಂದದ ಮೇರೆಗೆ ೋಟಿಫಿಕೇಷನ್ ಡೀಲ್ ುರಿಸಿದ್ದ ಮಲ್ಲಿಕಾರ್ಜುನ. ೇರೀತಿ ಚಿಕ್ಕಲಕ್ಕಸಂದ್ರದ ಸರಾಜು, ಎಂ. ಶ್ರೀನಿವಾಸ್ ತಮ್ಮ ಕೃಷ್ಣಪ್ಪ ಿ, ಡೆವಲಪರ್ಸ್‌ನವರೊಂದಿಗೆಲ್ಲಾ ಈತನಿಗೆ ವಹಾರಗಳಿವೆ. ಬೆಂಗಳೂರು ದೈರಿ ದ ವಿವಾದಿತ ಜಮೀನಿನ ಡೀಲ್ ತ ಮಲ್ಲಿಕಾರ್ಜುನನದೆ.



ಕಾಸು ಈಸ್ಕೊಂಡು ಆಮೇಲೆ ಾಸ ತೋರಿಸಿಬಿಡುವುದು, ಭೂಮಿ ಿ ಕೊಡುತ್ತೇನೆಂದು ನಂಬಿಸಿ • ಭೂಮಿ ಅಸ್ಸರಿಗೆ ರಿಬಿಡುವುದು, ಒಂದಕ್ಕೆ ುನಷ್ಟು ಐರ್ಟು ತೋರಿಸಿ ತನ್ನ ರ ಬಂದಿದ್ದವರನ್ನ ಡಾಯಿಸುವುದು... ಇವೆಲ್ಲಾ ಗೆ ಕರಗತ.

ಫುಟ್‌ಲ್ಯಾಂಡ್ ಹೋಟೆಲ್‌ನಲ್ಲಿ ಖಾಯಂ ರೂಂ ುಕೊಂಡಿರುವ ಮಲ್ಲಿಕಾರ್ಜುನ್ ಎಷ್ಟು ದುಡ್ಡು ಬಿದ್ದಾಗೊದರೆ ಜೂಜು, ಕ್ಯಾಸಿನೋ ಮತ್ತು ಡ್ಯಾನ್ಸ್ ಶೋಕಿ ಮಾಡಲು ತಿಂಗಳಿಗೊಮ್ಮೆ ಸಿಂಗಾಪೂರ್, ಮಲೇಷಿಯಾ, ಶ್ರೀಲಂಕಾ... ಅಂತಾ ತಿರುಗುತ್ತಿರುತ್ತಾನೆ.


ಈತನ ಕಾಟ ತಾಳಲಾರದೆ ಮೊದಲ ಹೆಂಡತಿ ತಾನೇ ಪ್ರಾಣ ಕಳೆದುಕೊಂಡಳು. ಬಿಜೆಪಿ-ಜೆಡಿಎಸ್ ಮೈತ್ರಿ ಸರ್ಕಾರ ಬಿದ್ದಾಗಲೂ ಜೆಡಿಎಸ್ ಜೊತೆಗೆ ಇದ್ದ ಮಲ್ಲಿಕಾರ್ಜುನ ಚುನಾವಣೆ ಅನೌನ್ಸ್ ಆದೇಟಿಗೆ ಬಿಜೆಪಿಗೆ ನೆಗೆದಿದ್ದ. ಅಲ್ಲಿ ಟಿಕೆಟ್ ಮಾರಾಟ ಮಾಡುತ್ತಿದ್ದ ನಾಯಕನೊಬ್ಬನ ಸಖಿಯೊಬ್ಬಳಿಗೆ ಮೂಟೆ ತುಂಬಾ ನೋಟಿನ ಕಂತೆ ಸಲ್ಲಿಸಿ ಟಿಕೆಟ್ ಖರೀದಿಸಿಬಿಟ್ಟ. ಅಷ್ಟು ಸಾಲದೆಂಬಂತೆ ಜೆಡಿಎಸ್‌ನ ಬಲಿಷ್ಠ ಅಭ್ಯರ್ಥಿ ವಾಸುದೇವಮೂರ್ತಿಗೆ ಸಿಗಬೇಕಿದ್ದ ಟಿಕೆಟ್ ತಪ್ಪಿಸಿ ಜಾಕ್ಸನ್ ಎಂಬ ದಮ್ಮಿಗೆ ಟಿಕೆಟ್ ಸಿಗುವಂತೆ ಮಾಡಿದ್ದಾನೆ.



ಹಾಗಾಗಿ ಈಗೇನಿದ್ದರೂ ಶಾಂತಿನಗರದಲ್ಲಿ ಕಾಂಗ್ರೆಸ್‌ನ ಹ್ಯಾರೀಸ್ ಮತ್ತು ಬಿಜೆಪಿಯ ಮಲ್ಲಿಕಾರ್ಜುನ ನಡುವೆ ನೇರ ಹಣಾಹಣಿಗೆ ನಡೆಯುತ್ತಿದೆ.

ಕೊನೆಯದಾಗಿ ಒಂದು ಮಾತು: ಈ ಮಲ್ಲಿಕಾರ್ಜುನನಿಂದ ಮೋಸಕ್ಕೊಳಗಾಗಿರುವವರೆಲ್ಲಾ ಒಂದುಗೂಡಿ ತಿರುಗಿ ಬಿದ್ದರೂ ಸಾಕು ಅಲ್ಲಿ ಹ್ಯಾರೀಸ್ ಗೆಲ್ಲುತ್ತಾರೆ.... ■

ಕುಮಾರಸ್ವಾಮಿ ಜಾತಿ ಯಾವುದಯ್ಯ?



ರಾಜ್ಯಾದ್ಯಂತ ಟಿಕೆಟ್, ಬಂಡಾಯ ಎಂದು ಅಭ್ಯರ್ಥಿಗಳೆಲ್ಲಾ ಆವೇಶದಿಂದ ಬಡಿದಾಡುತ್ತಿರುವಾಗ ಶಿವಮೊಗ್ಗ ಗ್ರಾಮಾಂತರದ ಬಿಜೆಪಿ ಅಭ್ಯರ್ಥಿ ಕೆ.ಜಿ. ಕುಮಾರಸ್ವಾಮಿ ಡಿಫರೆಂಟಾದ ರಗಳೆ ಮಾಡಿಕೊಂಡಿದ್ದಾರೆ.


ಅದು ಈತನ ಜಾತಿ ಕುರಿತಾದದ್ದು. 'ನಾನು ಬೋವಿ ಜಾತಿಯವನು' ಎಂದು ಕುಮಾರಸ್ವಾಮಿ ಹೇಳಿಕೊಂಡು ತಿರುಗುತ್ತಿದ್ದಾನೆ. ಆದರೆ ಅದು ಸುಳ್ಳು ಅಂತ ಶೇಖರಪ್ಪ ಎಂಬಾತ ಸಮಾಜ ಕಲ್ಯಾಣ ಇಲಾಖೆಯ ನ್ಯಾಯಾಲಯದಲ್ಲೊಂದು ಪ್ರಕರಣ ದಾಖಲಿಸಿಬಿಟ್ಟಿದ್ದಾರೆ.

ಈ ಶೇಖರಪ್ಪನ ಪ್ರಕಾರ ಶಿವಮೊಗ್ಗದ ಅಸಾಧ್ಯ ತರಲೆ ರಾಜಕಾರಣಿ ಕುಮಾರಸ್ವಾಮಿ ಒಕ್ಕಲಿಗ ಜಾತಿಗೆ ಸೇರಿದ್ದಾರೆ. ಇದು ಬರೀ ಬಾಯಿ ಮಾತಿನ ಆರೋಪವಲ್ಲ, ಬದಲಾಗಿ ಕೆಲ ದಾಖಲೆಗಳು ಈಗ ಬಹಿರಂಗವಾಗಿವೆ.

ಶಿವಮೊಗ್ಗ

ಕುಮಾರಸ್ವಾಮಿ ತೀರ್ಥಹಳ್ಳಿ ತಾಲ್ಲೂಕಿನ ಕೋಣಂದೂರು ವಾಸಿ. ಗಂಗಪ್ಪ ಮತ್ತು ಶೇಷಮ್ಮ ಎಂಬ ದಂಪತಿಗಳಿಗೆ ಕುಮಾರಸ್ವಾಮಿ, ಸೋಮಶೇಖರ್, ಯಶೋನಾಥನ್, ಚನ್ನಕೇಶವ ಮತ್ತು ಪಾಂಡುರಂಗ ಎಂಬ ಪಂಚಪಾಂಡವ ಪುತ್ರರಿದ್ದಾರೆ. ತಮಾಷೆ ಏನೆಂದರೆ ಇವರಲ್ಲಿ ಕೆಲವರ ಶಾಲಾ ದಾಖಲಾತಿಗಳ ಜಾತಿ ಕಾಲಂನಲ್ಲಿ 'ಒಕ್ಕಲಿಗ' ಎಂದು ನಮೂದಾಗಿದ್ದರೆ ಇನ್ನು ಉಳಿದವರದ್ದು ಬೋವಿ ಎಂದು ದಾಖಲಾಗಿದೆ. ಒಂದೇ ಮನೆಯ, ಒಂದೇ ದಂಪತಿಗಳ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ಅದು ಹೇಗೆ ಬೇರೆಬೇರೆ ಜಾತಿಗೆ ಸೇರುತ್ತಾರೋ ಭಗವಂತನೇ ಬಲ್ಲ.

ಮೊದಲನೆಯದಾಗಿ ಕೆ.ಜಿ. ಕುಮಾರಸ್ವಾಮಿಯ ತಮ್ಮ ಕೆ.ಜಿ. ಯಶೋನಾಥನ್ ಶಾಲಾ ದಾಖಲೆಯಲ್ಲಿ ಒಕ್ಕಲಿಗ ಎಂದು ದಾಖಲಾಗಿದೆ. ಅದೇರೀತಿ ಇನ್ನೂ ಮೂವರು ತಮ್ಮಂದಿರಾದ ಕೆ.ಜಿ. ಚೆನ್ನಕೇಶವ, ಕೆ.ಜಿ. ಪಾಂಡುರಂಗ, ಕೆ.ಜಿ. ಸೋಮಶೇಖರರ ದಾಖಲೆಗಳಲ್ಲೂ ಒಕ್ಕಲಿಗ ಎಂದೇ ಇದೆ. ಆದರೆ ಪವಾಡವೋ ಎಂಬಂತೆ ಈ ಕುಮಾರಸ್ವಾಮಿ ಮಾತ್ರ ಬೋವಿ ಎಂದು ತೋರಿಸಿಕೊಂಡಿದ್ದಾನೆ.



ಸಹೋದರ ಚೆನ್ನಕೇಶವ ಒಕ್ಕಲಿಗನಾಗಿದ್ದಾರೆ, ಕುಮಾರ ಬೋವಿ ಜಾತಿಯವನಾಗಿರುವ ದಾಖಲೆ

ಅಷ್ಟೇ ಅಲ್ಲ; ಇದೇ ಕುಮಾರಸ್ವಾಮಿ 1968 ರಲ್ಲಿ ಕೋಣಂದೂರು ರಾಷ್ಟ್ರೀಯ ಪದವಿ ಪೂರ್ವ ಕಾಲೇಜು ಸೇರಿಕೊಂಡಾಗ ಅಡ್ಮಿಷನ್ ಫಾರಂನಲ್ಲಿ ಹಿಂದೂ ನಾಮಧಾರಿ ಜಾತಿ ಎಂದು ಮೂರನೇ ಅವತಾರ ಎತ್ತಿದ್ದಾನೆ.




ಈ ಕಾಲಂಗಳನ್ನು ಭರ್ತಿ ಮಾಡುವಾಗ ಯಾರ ತಲೆಗೆ ಏಟು ಬಿದ್ದಿತ್ತೋ ಏನೋ ಅಂತೂ ಇಂತೂ ಕುಮಾರಸ್ವಾಮಿ ಜಾತಿ ವಿವಾದ ಶುರುವಾಗಿತ್ತು. ಈ ಬಗ್ಗೆ ಹೊಳೆಹೊನ್ನೂರಿನ ಬೋವಿ ಸಮಾಜದ ಬಿ. ತಿಮ್ಮಪ್ಪ ಕೂಡಾ ಶಿವಮೊಗ್ಗ ಜಿಲ್ಲಾಧಿಕಾರಿಗೆ 2008 ರ ಜನವರಿಯಲ್ಲೇ ಲಿಖಿತ ದೂರು ಕೊಟ್ಟಿದ್ದಾರೆ. ಈಗ ಶೇಖರಪ್ಪ ಕೊಟ್ಟಿರುವ ದೂರು ಬೆಂಗಳೂರಿನ ಸಮಾಜ ಕಲ್ಯಾಣ ಇಲಾಖೆಯ ಕೇಂದ್ರ ಕಚೇರಿ ನ್ಯಾಯಾಲಯದಲ್ಲಿದೆ. ಏಪ್ರಿಲ್ 26 ರ ಶನಿವಾರ ಬೆಳಗ್ಗೆ ಈ ಪ್ರಕರಣ ವಿಚಾರಣೆಗೂ ಬಂದಿತ್ತು. ಆದರೆ ಮಧ್ಯಂತರ ತೀರ್ಪು ನೀಡಬೇಕಿದ್ದ ಕೆಎಎಸ್ ಅಧಿಕಾರಿ ಬಲದೇವಕೃಷ್ಣ 'ಈಗ ಬರ್ತೀನಿ ಕೂತಿರಿ' ಎಂದು ಹೇಳಿ ಕಚೇರಿಯಿಂದ ಮಾಯವಾದವರು ಸಾಯಂಕಾಲವಾದರೂ ವಾಪಸ್ ಬರಲಿಲ್ಲವಾದ್ದರಿಂದ ಪ್ರಕರಣ ಗಂಭೀರ ಸ್ವರೂಪ ಪಡೆದುಕೊಳ್ಳುವ ಸೂಚನೆಗಳಿವೆ.

ಶಿವಮೊಗ್ಗ ಗ್ರಾಮೀಣ ವಿಧಾನಸಭಾ ಕ್ಷೇತ್ರದಿಂದ ಕುಮಾರಸ್ವಾಮಿ ವಿರುದ್ಧವಾಗಿ ಜೆಡಿಎಸ್‌ನಿಂದ ಕರಿಯಣ್ಣ ಹಾಗೂ ಕಾಂಗ್ರೆಸ್‌ನಿಂದ ಶಾರದಾ ಪೂರ್‍ಯಾನಾಯಕ್ ಸೆಣೆಸುತ್ತಿದ್ದಾರೆ. ಬಿಎಸ್‌ಪಿಯಿಂದ ಗುರುಮೂರ್ತಿ ಸ್ಪರ್ಧಿಸುವ ಸಾಧ್ಯತೆಯಿದೆ. ಯಡ್ಡಿಯ ಪರಮಾಪ್ತ ಶಿಷ್ಯ ಕುಮಾರಸ್ವಾಮಿ ಬಿಜೆಪಿ ಮೈತ್ರಿ ಸರ್ಕಾರವಿದ್ದಾಗಲೇ ತಾಲ್ಲೂಕಾಫೀಸು, ಡಿಸಿ ಆಫೀಸುಗಳಲ್ಲಿ ತನ್ನ ಜಾತಿ ಬಗ್ಗೆ ಇದ್ದ ಅನುಮಾನಾಸ್ಪದ ದಾಖಲೆಗಳನ್ನೆಲ್ಲಾ ಸರಿಪಡಿಸಿಕೊಂಡಿದ್ದಾನೆಂಬ ರೂಮರ್‌ಗಳಿವೆ.

ಅಸಲಿ ವಿಚಾರವಿಷ್ಟೆ. ಒಂದು ವೇಳೆ ಕುಮಾರಸ್ವಾಮಿ ಒಕ್ಕಲಿಗನೇ ಆಗಿದ್ದು ಈಗ ಬೋವಿ ಎಂದು ಸುಳ್ಳು ಜಾತಿ ಪತ್ರ ನೀಡಿದ್ದರೆ ಈತನ ಉಮೇದುವಾರಿಕೆ ರದ್ದಾಗಿ ಸುಳ್ಳು ದಾಖಲೆ ನೀಡಿದ್ದಕ್ಕಾಗಿ ಶಿಕ್ಷಿಸಬೇಕು. ಇಲ್ಲಾ ಕುಮಾರಸ್ವಾಮಿ ಬೋವಿ ಎಂಬುದೇ ನಿಜ ಎಂದಾದಲ್ಲಿ ಅವನ ತಮ್ಮಂದಿರು ತಾವು 'ಒಕ್ಕಲಿಗ' ಎಂದು ಯಾಕೆ ದಾಖಲಿಸಿಕೊಂಡಿದ್ದಾರೆಂಬ ಬಗ್ಗೆ ತನಿಖೆಯಾದರೂ ಆಗಬೇಕಲ್ಲವೆ? ■

ಜೈಜಗದೀಶನ ನಾಟಕವೂ ಸಹೋದರಿಯ ಆಕಾಂಕ್ಷೆಯೂ




ಕೊಡಗು

ಮೂರು ಕ್ಷೇತ್ರಗಳಿದ್ದ ಕೊಡಗು ಜಿಲ್ಲೆ ಕ್ಷೇತ್ರ ಪುನರ್ವಿಂಗಡಣೆಯಿಂದ ಒಂದು ಕ್ಷೇತ್ರವನ್ನು ಕಳೆದುಕೊಂಡಿದೆ. ನಾಲ್ಕು ದಶಕಗಳ ಕಾಲ ವಿರಾಜಪೇಟೆ ಕ್ಷೇತ್ರವು ಗಿರಿಜನ ಮೀಸಲು ಕ್ಷೇತ್ರವಾಗಿತ್ತು. ಈಗ ಇದು ಸಾಮಾನ್ಯ ಕ್ಷೇತ್ರವಾಗಿದೆ. ಕೊಡವ ಜನಾಂಗದವರೇ ಹೆಚ್ಚಾಗಿರುವ ಈ ಕ್ಷೇತ್ರದಿಂದ ಕೊಡವರೊಬ್ಬರು ವಿಧಾನಸಭೆಗೆ ಆಯ್ಕೆಯಾಗಬಹುದೆಂಬ ನಿರೀಕ್ಷೆ ಹುಸಿಯಾಗುವ ಲಕ್ಷಣಗಳು ಕಂಡುಬರುತ್ತಿವೆ. ಇದಕ್ಕೆ ಪ್ರಮುಖ ಕಾರಣ ಜೆಡಿಎಸ್‌ನ ಅರುಣ್ ಮಾಚಯ್ಯನವರ ಸ್ವಾರ್ಥ ರಾಜಕಾರಣ ಹಾಗೂ ಕೊಡಗಿನಲ್ಲಿ ನೆಲಕಚ್ಚಿರುವ ಕಾಂಗ್ರೆಸ್ ಪಕ್ಷ. ಮೂರು ಕ್ಷೇತ್ರಗಳಾಗಿದ್ದಾಗ, ಒಮ್ಮೆ ಮೂರೂ ಕ್ಷೇತ್ರಗಳನ್ನು ಭಾಜಪ ತನ್ನದಾಗಿಸಿಕೊಂಡಿತ್ತು. ಆ ನಂತರ ಕಾಂಗ್ರೆಸ್ ಪಾಲಾಗಿತ್ತು. ಕಳೆದ ಬಾರಿ ಎರಡು ಕ್ಷೇತ್ರಗಳು ಬಿಜೆಪಿಯದ್ದಾಗಿದ್ದರೆ, ಸೋಮವಾರಪೇಟೆ ಕ್ಷೇತ್ರದಲ್ಲಿ ಮಾಜಿ ಸಚಿವ ಬಿ.ಎ.ಜೀವಿಜಯ ಆಯ್ಕೆಯಾಗಿದ್ದರು. ಈಗ ಈ ಕ್ಷೇತ್ರವೇ ಇಲ್ಲವಾಗಿದೆ.

ವಿರಾಜಪೇಟೆ ಕ್ಷೇತ್ರ

ಮಾಜಿ ಸಚಿವೆ ಶ್ರೀಮತಿ ಸುಮಾವಸಂತ್‌ರವರ ತೀರಾ ನಿರ್ಲಿಪ್ತ ಧೋರಣೆಯಿಂದಾಗಿ ಕಾಂಗ್ರೆಸ್ ಇಲ್ಲಿ ನೆಲಕಚ್ಚಿದೆ. ಗಿರಿಜನರೇ ಹೆಚ್ಚು



ಅರುಣ್ ಮಾಚಯ್ಯ



ಜೀವಿಜಯ



ಕೆ.ಜಿ. ಬೋಪಯ್ಯ

ಸಂಖ್ಯೆಯಲ್ಲಿದ್ದ ವಿರಾಜಪೇಟೆ ಕ್ಷೇತ್ರವನ್ನು ಮೂರು ಬಾರಿ ಪ್ರತಿನಿಧಿಸಿದ್ದ ಸುಮಾವಸಂತ್, ಸಾಮಾನ್ಯ ಕ್ಷೇತ್ರವಾದ ನಂತರವೂ ಟಿಕೆಟ್ ಆಕಾಂಕ್ಷಿಯಾಗಿದ್ದರು. ಅವರಿಗೆ ಟಿಕೆಟು ದೊರೆಯದ್ದರಿಂದ, ನಾಮಪತ್ರ ಸಲ್ಲಿಕೆಯ ವೇಳೆ ಗೈರುಹಾಜರಾಗುವ ಮೂಲಕ ತನ್ನ ಅಸಮಾಧಾನವನ್ನು ತೋಡಿಕೊಂಡರು. ಇಲ್ಲಿ ಇವರ ಇಂತಹ ಧೋರಣೆಯಿಂದಾಗಿ ಪ್ರಬಲವಾಗಿದ್ದ ಕಾಂಗ್ರೆಸ್ ಪಕ್ಷಕ್ಕೆ ಕಾರ್ಯಕರ್ತರೇ ಇಲ್ಲದಂತಹ ಪರಿಸ್ಥಿತಿ ಉಂಟಾಗಿದೆ.

ವೀಣಾ ಅಚ್ಚಯ್ಯ ಎಂಬ ಜಿಲ್ಲಾ ಕಾಂಗ್ರೆಸ್ಸಿನ ಅಧ್ಯಕ್ಷೆಗೆ, ವೀರಪ್ಪ ಮೊಯ್ಲಿ ಹಾಗೂ ಪೂಜಾರಿಯವರ ಕೃಪಾಕಟಾಕ್ಷದಿಂದ ಅವಕಾಶ ದೊರೆತಿದ್ದು, ಅಷ್ಟೊಂದು ಪ್ರಬಲವಾಗಿಲ್ಲದಿರುವ ಬಿಎಸ್‌ಪಿಗಿಂತ ಒಂದು ಕೈ ಮೇಲು ಎನ್ನುವ ಸ್ಥಿತಿ ಈ ಕ್ಷೇತ್ರದಲ್ಲಿದೆ. ಆದರೆ ಈ ಮಹಿಳೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷೆಯಾದ ನಂತರ, ಪಕ್ಷವನ್ನು ಬೆಳೆಸಲು ಯಾವುದೇ ಕಾರ್ಯಕ್ರಮವನ್ನು ಹಮ್ಮಿಕೊಂಡಿರಲಿಲ್ಲ. ಜಿಲ್ಲಾ ಪಂಚಾಯತ್ ಸದಸ್ಯರಾಗಿದ್ದ ವೇಳೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಪೈಪೋಟಿ ಮಾಡಿದ್ದೇ ಈಕೆಯ ಸಾಧನೆ. 41 ದಿನಗಳ ಕಾಲ ಈಕೆ ಜಿಲ್ಲಾ ಪಂಚಾಯತ್ ಅಧ್ಯಕ್ಷೆಯಾಗಿದ್ದರು. ಹಣ ಬಲವೂ, ಹೆಸರಿನ ಬಲವೂ ಇಲ್ಲದ ಈಕೆಗೆ ಟಿಕೆಟ್ ನೀಡುವ ಮೂಲಕ ಕಾಂಗ್ರೆಸ್ ಪಕ್ಷ ಸೋಲುವ ಎಲ್ಲಾ ಲಕ್ಷಣ ಗಳು ಇವೆ.

ವಿಧಾನ ಪರಿಷತ್ ಸದಸ್ಯರಾಗಿದ್ದ ಅರುಣ್ ಮಾಚಯ್ಯ ಜೆಡಿಎಸ್‌ನ ಅಭ್ಯರ್ಥಿಯಾಗಿದ್ದಾರೆ. ವಿಧಾನ ಪರಿಷತ್ ಮಾಜಿ ಸದಸ್ಯ ಎ.ಕೆ. ಸುಬ್ಬಯ್ಯ ಇವರ ವಿರುದ್ಧ ಜಾತ್ಯತೀತ ಜನತಾದಳ ಸೇರ್ಪಡೆಗೊಂಡಿದ್ದರ ಬಗ್ಗೆ ಸದಸ್ಯತ್ವ ವಜಾಕ್ಕೆ ವಿಧಾನ ಪರಿಷತ್ ಸಭಾಪತಿಗಳಿಗೆ ಅರ್ಜಿ ನೀಡಿದ್ದರ ಹಿನ್ನೆಲೆಯಲ್ಲಿ, ತಾನು ಯಾವುದೇ ಪಕ್ಷ ಸೇರಿಕೊಂಡಿಲ್ಲ ಎಂದು ಹೇಳುತ್ತಾ, ಜಾತ್ಯತೀತ ಜನತಾದಳವನ್ನು ಬೆಳೆಸಲು ಯಾವುದೇ ಪ್ರಯತ್ನವನ್ನು ಇವರು ನಡೆಸಲಿಲ್ಲ. ಇದು ಇವರಿಗೆ ಮುಳುವಾಗಲಿದೆ. ವೈಯಕ್ತಿಕ ವರ್ಚಸ್ಸಿದ್ದರೂ, ಕಾರ್ಯಕರ್ತರ ದಂಡು ಇಲ್ಲ. ಅಲ್ಲಲ್ಲಿ ಒಂದಷ್ಟು ಬೆಂಬಲಿಗರು ಇದ್ದಾರೆ. ಕೊಡವ ಜನಾಂಗದ ಓರ್ವ ಯುವಕ ಎಂಬ ಆಧಾರದಲ್ಲಿ ಕೊಡವರು ಮತ ನೀಡುತ್ತಾರೆ ಎಂಬ ಭ್ರಮೆ ಇವರಿಗೆ ಇದೆ. ಆದರೆ ಇನ್ನು 19 ತಿಂಗಳುಗಳ ಕಾಲ ವಿಧಾನ ಪರಿಷತ್ ಸದಸ್ಯತ್ವ ಇರುವಾಗ, ಇದಕ್ಕೆ ರಾಜೀನಾಮೆ ನೀಡುವುದರ ಮೂಲಕ, ಇಬ್ಬರು ಕೊಡವರು ವಿಧಾನ ಮಂಡಲದಲ್ಲಿ ಇರಲು ಸಾಧ್ಯವಾಗಬಹುದಾಗಿದ್ದ ಅವಕಾಶವನ್ನು ತಮ್ಮ ಸ್ವಾರ್ಥಕ್ಕಾಗಿ ಅರುಣ್ ಮಾಚಯ್ಯ ಇಲ್ಲವಾಗಿಸಿದರು ಎಂಬ ಆಕ್ರೋಶ ಕೊಡವ ಜನಾಂಗದವರಲ್ಲಿದೆ. ಹಾಗೆಯೇ ಕೊಡವರ ಬಗ್ಗೆ ವಿಶೇಷ ಆಸ್ಥೆಯನ್ನು ಅರುಣ್ ಮಾಚಯ್ಯ ತೋರಿಲ್ಲ ಎಂಬ ಆರೋಪಗಳೂ ಇವೆ. ವಿಧಾನ ಪರಿಷತ್ ಸದಸ್ಯರಾದ ಮೇಲೆ ಕ್ಷೇತ್ರಾಭಿವೃದ್ಧಿಯಾಗದಿದ್ದರೂ, ವೈಯಕ್ತಿಕ ಅಭಿವೃದ್ಧಿಯಂತೂ ಆಗಿದೆ ಎನ್ನುವ ಮಾತುಗಳು ಇವೆ. ಉದಾಹರಣೆಗೆ ನಾಲ್ಕು ವರ್ಷಗಳ ಹಿಂದೆ ವಿಧಾನ ಪರಿಷತ್‌ಗೆ ಸ್ವತಂತ್ರವಾಗಿ ಸ್ಪರ್ಧಿಸಿದ್ದಾಗ, ಅವರು ಅಧಿಕೃತವಾಗಿ ಘೋಷಿಸಿದ್ದ ಸಾಲ 5 ಕೋಟಿಯಾಗಿತ್ತು. ಈಗ ಅದು 56 ಲಕ್ಷಕ್ಕೆ ಇಳಿದಿದೆ.

ಹಿಂದುಳಿದ ಆಯೋಗದ ಅಧ್ಯಕ್ಷರಾಗಿರುವ ಡಾ.ಸಿ.ಎಸ್. ದ್ವಾರಕನಾಥ್‌ರವರಿಗೆ ಬಲವಂತವಾಗಿ ತೀರ್ಥ ಕುಡಿಸಿದ ಕುಖ್ಯಾತಿಯ ಮಾಜಿ ಶಾಸಕ ಕೆ.ಜಿ. ಬೋಪಯ್ಯ ಭಾಜಪ ಅಭ್ಯರ್ಥಿ. ಹಿಂದೆ ಶಾಸಕರಾಗಿದ್ದ ವೇಳೆಯಲ್ಲಿ, ಚೆಡ್ಡಿಗಳಿಂದ ದೂರವಿದ್ದ ಬೋಪಯ್ಯ, 'ತನಗೆ ಮತ್ತೊಮ್ಮೆ ಅವಕಾಶ ಸಿಗುವುದಿಲ್ಲ ಎಂಬುದನ್ನು ಅರಿತ ಕೂಡಲೇ, ತನ್ನ ಚೆಡ್ಡಿ ಪ್ರೇಮವನ್ನು ತೋರಿಸುವುದಕ್ಕಾಗಿಯೇ ದ್ವಾರಕನಾಥ್‌ರವರಿಗೆ ಬಲವಂತವಾಗಿ ತೀರ್ಥ ಕುಡಿಸಿದ್ದರು. ಕೊಡಗಿನ ಬಾಣೆ ಜಮೀನಿನ ಸಮಸ್ಯೆಗೆ ಮೂಲ ಕಾರಣ ಬೋಪಯ್ಯ. ಆದರೂ ಕಾಂಗ್ರೆಸ್ ಹಾಗೂ ದಳದ ನಿರ್ಜೀವತೆಯಿಂದಾಗಿ ಈ ಸ್ಥಾನವನ್ನು ಭಾಜಪಕ್ಕೆ ಚಿನ್ನದ ಚಿನ್ನದ ತಟ್ಟೆಯಲ್ಲಿಟ್ಟು ಕೊಡುವ ಕೆಲಸವಾಗುತ್ತಿದೆ.

ಇದಕ್ಕೆ ಮತ್ತಷ್ಟು ಕೊಡುಗೆ ನೀಡುತ್ತಿರುವವರು ಬಹುಜನ ಸಮಾಜ ಪಕ್ಷದ ಯುವ ವಕೀಲ ಕುಂಞ ಅಬ್ದುಲ್ಲ. ಕಳೆದ ಬಾರಿ ಸುಮಾರು 6,000 ಮತಗಳನ್ನು ಪಡೆದ ಇವರು ಭಾಜಪವನ್ನು ಗೆಲ್ಲಿಸಿದ್ದರು. ಈಗ ಆ ಪಕ್ಷ ಒಂದಷ್ಟು ಹೆಚ್ಚು ಬೆಳೆದಿದ್ದು, ಕನಿಷ್ಠ 10,000 ಮತಗಳನ್ನಾದರೂ ಪಡೆದು ಭಾಜಪ ಗೆಲ್ಲಿಸಲು ತಮ್ಮ ಕೊಡುಗೆಯನ್ನು ನೀಡಲಿದ್ದಾರೆ.

ಮಡಿಕೇರಿ ಕ್ಷೇತ್ರ

ಈ ಹಿಂದೆ ಇದ್ದ ಮಡಿಕೇರಿ ಕ್ಷೇತ್ರದ ಬಹುತೇಕ ಭಾಗವು ವಿರಾಜಪೇಟೆ ಕ್ಷೇತ್ರದೊಂದಿಗೆ ವಿಲೀನವಾಗಿದ್ದು, ಸೋಮವಾರಪೇಟೆ ಕ್ಷೇತ್ರದ ಪೂರ್ಣ ಪ್ರದೇಶ ಹಾಗೂ ಮಡಿಕೇರಿಯ ಕೆಲವು ಭಾಗಗಳು ಸೇರಿ ಮಡಿಕೇರಿ ಕ್ಷೇತ್ರವಾಗಿದೆ. ಇಲ್ಲಿ ಇರುವುದು ಭಾಜಪ ಹಾಗೂ ಕಾಂಗ್ರೆಸ್ ನಡುವಿನ ನೇರ ಪೈಪೋಟಿ. ಜಾತ್ಯತೀತ ಜನತಾದಳವನ್ನು ಕೊಡಗಿನಲ್ಲಿಯೇ ಕಟ್ಟಿ ಬೆಳೆಸಿದ ಕೀರ್ತಿ ಸೋಮವಾರಪೇಟೆ ತಾಲ್ಲೂಕು ಅಧ್ಯಕ್ಷರು ಹಾಗೂ ಜಿಲ್ಲಾ ಪಂಚಾಯತ್ ಸದಸ್ಯರೂ ಆಗಿದ್ದು ಕಳೆದ ಬಾರಿ ಈ ಕ್ಷೇತ್ರದಿಂದ ಸ್ಪರ್ಧಿಸಿದ್ದ ವಿ.ಪಿ. ಶಶಿಧರ್‌ರವರದು. ಈ ಬಾರಿ ಅವರನ್ನು ಗಣನೆಗೆ ತೆಗೆದುಕೊಳ್ಳದೆ, ಕ್ಷೇತ್ರವೇ ಅರಿಯದ, ರಾಜಕೀಯ ಗಂಧ ಗಾಳಿಯೇ ಇಲ್ಲದ ಕೆ.ಎನ್. ವಸಂತ್ ಎಂಬುವವರಿಗೆ ನೀಡಲಾಗಿದೆ. ಇದರಿಂದ ನಿರಾಶರಾಗಿರುವ ಶಶಿಧರ್ ಬಹುತೇಕ ರಾಜಕೀಯದಿಂದಲೇ ದೂರ ಉಳಿಯುವ ಲಕ್ಷಣಗಳು ಕಂಡುಬರುತ್ತಿವೆ. ಅರುಣ್ ಮಾಚಯ್ಯನವರ ಬಲಗೈಯಾಗಿದ್ದ ಶಶಿಧರ್, ಅರುಣ್ ಮಾಚಯ್ಯನವರನ್ನು ಈ ಹಂತಕ್ಕೆ ಬೆಳೆಸಲು ಕಾರಣಕರ್ತರು ಕೂಡ ಹೌದು. ಆದರೆ ತನ್ನ ಮಿತ್ರ ಶಶಿಧರ್‌ಗೆ ಟಿಕೆಟ್ ದೊರೆಯದಿದ್ದಾಗ ಈ ಬಗ್ಗೆ ಸೌಜನ್ಯಕ್ಕೂ, ದೇವೇಗೌಡರೊಂದಿಗಾಗಲಿ, ಕುಮಾರಸ್ವಾಮಿಯವರೊಂದಿಗಾಗಲಿ ಚರ್ಚಿಸಲಿಲ್ಲ ಎಂಬುದು ಗಮನಾರ್ಹ.



ಕುನ್ನಿ ಅಬ್ದುಲ್ಲಾ



ವೀಣಾ ಅಚ್ಚಯ್ಯ

ಹೇಗಾದರೂ ಮಾಡಿ ಜೀವಿಜಯರನ್ನು ಸೋಲಿಸಬೇಕು ಎಂಬುದು ಜಿಲ್ಲಾ ಪರಿಷತ್‌ನ ಮಾಜಿ ಅಧ್ಯಕ್ಷೆ ಕೆ.ಪಿ. ಚಂದ್ರಕಲಾರವರ ಆಕಾಂಕ್ಷೆ. ಏಕೆಂದರೆ ಜೀವಿಜಯ ಸೋಲದ ಹೊರತು, ತನಗೆ ಟಿಕೆಟು ದೊರೆಯು ವುದಿಲ್ಲ ಎಂಬುದು ಅವರ ಅಭಿಪ್ರಾಯ. ಹಾಗಾಗಿ ತನ್ನ ಸಹೋದರ ಜೈಜಗದೀಶ್‌ರವರನ್ನು ಬಿಎಸ್‌ಪಿಯಿಂದ ಸ್ಪರ್ಧಿಸಲು

ಚುನಾವಣಾ ಸಮೀಕ್ಷೆ

ಲಗೇಜ್ ರೆಡಿ ಮಾಡಿಟ್ಟಿರುವ ಜೀವರಾಜ್!

ಶೃಂಗೇರಿ

ಕಳೆದ ಚುನಾವಣೆಯಲ್ಲಿ ಶೃಂಗೇರಿಯಿಂದ ಗೆದ್ದುಬಂದಿದ್ದ ಚೆಡ್ಡಿ ಜೀವರಾಜ್ ಈ ಬಾರಿ ಮುಗ್ಗರಿಸಿ ಹಳ್ಳಕ್ಕೆ ಬೀಳುವ ಎಲ್ಲಾ ಲಕ್ಷಣಗಳೂ ಕಾಣುತ್ತಿವೆ. ತನ್ನ ಸೇವೆಗೆಂದು ಸಾಕಿಕೊಂಡಿದ್ದ ಪುಂಡ ಭಜರಂಗಿ ಶಿಷ್ಯಪಡೆ ಹಾಗೂ ಕ್ಷೇತ್ರದಲ್ಲಿ ನಿರ್ಣಾಯಕವಾಗಿರುವ ಬ್ರಾಹ್ಮಣ ಸಮುದಾಯ ಈತನ ವಿರುದ್ಧ ತಿರುಗಿಬಿದ್ದಿರುವುದೇ ಇದಕ್ಕೆ ಪ್ರಧಾನ ಕಾರಣ. ಅಲ್ಲದೇ, ಶಾಸಕನಾಗಿ ಕ್ಷೇತ್ರದ ಅಭಿವೃದ್ಧಿಗೆ ಕನಿಷ್ಠ ಕೆಲಸಗಳನ್ನೂ ಮಾಡದೆ ಕೇವಲ ಸ್ವ-ಅಭಿವೃದ್ಧಿ ಮಾಡಿಕೊಳ್ಳುವಲ್ಲಿಯೇ ಬರೋಬ್ಬರಿ ನಾಲ್ಕೂವರೆ ವರ್ಷಗಳನ್ನು ತಳ್ಳಿದ ಜೀವರಾಜ್‌ನ ವಿರುದ್ಧ ಕೇವಲ ಬ್ರಾಹ್ಮಣರು ಮಾತ್ರವಲ್ಲ, ಇಡೀ ಕ್ಷೇತ್ರದ ಜನ ಸಿಟ್ಟಿಗೆದ್ದಿದ್ದಾರೆ. ಆ ಸಿಟ್ಟನ್ನು ಅವರೀಗ ಚುನಾವಣೆಯಲ್ಲಿ ತೋರಿಸಲಿದ್ದಾರೆ.

ಈತ ಶಾಸಕನಾದ ಮೇಲೆ ಕ್ಷೇತ್ರದಲ್ಲಿದ್ದ ಚಿಕ್ಕಪುಟ್ಟ ಶ್ರೀಗಂಧಚೋರರು, ನಾಟಾ ಕಳ್ಳರು ಮತ್ತಿತ್ತರ ಸಮಾಜಘಾತುಕರು ನಿಶ್ಚಿಂತೆಯಿಂದ ಈತನ ಆಶ್ರಯ ಪಡೆದು ಬಲಿತಿದ್ದಾರೆ. ಇತ್ತ ಇವರು ಬಲಿತಿದ್ದಾರೆಂದರೆ ಅತ್ತ ಸಮೃದ್ಧ ಅರಣ್ಯ ಸೊರಗಿದೆಯೆಂದೇ ಅರ್ಥವಲ್ಲವೆ? ಅದಕ್ಕೆ ಜೀವರಾಜ್ ಎಂಬ ಮಹಾಶಯನೇ ಕಾರಣ. ಇನ್ನು ಓ.ಸಿ, ಜುಗಾರಿ, ಮಟ್ಕಾಗಳಂತೂ ಈತನ ಆಶ್ರಯದಲ್ಲಿ ಹುಲುಸಾಗಿ ಬೆಳೆದುನಿಂತಿವೆ. ಈ ಎಲ್ಲಾ ಅಕ್ರಮ ದಂಧೆಕೋರರಿಗೆ ಪೊಲೀಸರಿಂದ ರಕ್ಷಣೆ ಕೊಡುವುದು, ಅಕಸ್ಮಾತ್ ಇವರು ಅರೆಸ್ಟ್ ಆದರೆ ಅವರನ್ನು ಬಿಡಿಸಿಕೊಂಡು ಬರುವುದು, ಭಜರಂಗಿಗಳು ಕಿತಾಪತಿ ಮಾಡಿ ಪೊಲೀಸ್ ಸ್ಟೇಶನ್‌ಗೆ ಹೋದರೆ ಅವರನ್ನೂ ಬಿಡಿಸಿಕೊಂಡು ಬರುವುದು – ಇವೇ ಜೀವರಾಜನ ದಿನನಿತ್ಯದ ಡ್ಯೂಟಿಯಾಗಿಬಿಟ್ಟಿದೆ. ಈ ಎಲ್ಲಾ ಅಕ್ರಮ ದಂಧೆಗಳಿಂದ ದಿನನಿತ್ಯ ಬರುವ ಆಮದಾನಿಯನ್ನು ಮೇಯ್ದೇ ಜೀವರಾಜ್ ದಷ್ಟ ಪುಷ್ಟವಾಗಿ ಕೊಬ್ಬಿಬಿಟ್ಟಿದ್ದಾರೆ.



ಜೀವರಾಜ್

ಇನ್ನು ಈತನ ದಲಿತ ವಿರೋಧಿ, ಅಲ್ಪಸಂಖ್ಯಾತ ವಿರೋಧಿ ಕೃತ್ಯಗಳಿಗೇನೂ ಕೊರತೆಯಿಲ್ಲ. ಈಗ್ಗೆ ಒಂದು ತಿಂಗಳ ಹಿಂದೆಯಷ್ಟೇ ಬಾಳೆಹೊನ್ನೂರು ಸಮೀಪ ಶಾಂತಿಪುರ ಎಂಬಲ್ಲಿ ದನದ ಮಾಂಸವನ್ನು ಹೊಂದಿದ್ದರು ಎಂಬ ಆರೋಪದ ಮೇಲೆ ದಲಿತ ಸಮುದಾಯದ ಜಯರಾಮ್ ಮತ್ತು ಮುಸ್ಲಿಮ್ ಸಮುದಾಯದ ಕುಂಜಮ್ಮದು ಹಾಗೂ ಮೊಹಮ್ಮದ್ ಎಂಬುವವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದವರು ಬೇರಾರೂ ಅಲ್ಲ, ಜೀವರಾಜ್‌ನ ಕಟ್ಟಾ ಶಿಷ್ಯರೆ. ಈ ಪ್ರಕರಣದಲ್ಲಿ ದಲಿತ ದೌರ್ಜನ್ಯ ಕಾಯಿದೆಯನ್ವಯ ಕೇಸು ದಾಖಲಾಗದಂತೆ ಈತ ನೋಡಿಕೊಂಡಿದ್ದ.

ಇದಕ್ಕೂ ಮೊದಲು, ನೆರೆಯ ಕರಾವಳಿ ತೀರದಲ್ಲಿ ಕಂಬಳ ನಡೆಸುವುದಕ್ಕಾಗಿ ಅದರ ಆಯೋಜಕರು ಸುಮಾರು ನಲವತ್ತು ಸದೃಢ ಕೋಣಗಳನ್ನು ಶೃಂಗೇರಿ ಮೂಲಕ ಸಾಗಿಸುತ್ತಿದ್ದರು. ಇವುಗಳನ್ನು ಕಂಬಳಕ್ಕೆ ಕೊಂಡೊಯ್ಯುತ್ತಿದ್ದಾರೆಂದು ಜೀವರಾಜ್‌ಗೆ ಗೊತ್ತಿದ್ದರೂ ಬೇಕಂತಲೆ ಕಸಾಯಿಖಾನೆಗೆ ಸಾಗಿಸುತ್ತಿದ್ದಾರೆಂದು ಆರೋಪಿಸಿ ಚೆಡ್ಡಿ ಭಜರಂಗಿಗಳನ್ನು ಛೂಬಿಟ್ಟು ಆಯೋಜಕರನ್ನು ಹಿಂದು-ಮುಂದು ನೋಡದೆ ಹಿಗ್ಗಾಮುಗ್ಗಾ ಹೊಡೆಸಿದ್ದ. ಇನ್ನೊಂದು ಪ್ರಕರಣದಲ್ಲಿ ಬಾಳೆಹೊನ್ನೂರಿನ ಕ್ರಿಶ್ಚಿಯನ್ ಶಾಲೆಯೊಂದರಲ್ಲಿ ಮತಾಂತರ ಮಾಡಲಾಗುತ್ತಿದೆ ಎಂದು ಆರೋಪಿಸಿ ಭಜರಂಗಿಗಳ ಮೂಲಕ ದಾಂಧಲೆಯೆಬ್ಬಿಸಿದ್ದ. ವಾಸ್ತವದಲ್ಲಿ ಬಿಜೆಪಿ ಮತ್ತು ಸಂಘಪರಿವಾರದ ಪಾಳೆಯದಲ್ಲಿ ಕಳೆಗುಂದುತ್ತಿದ್ದ ತನ್ನ ವರ್ಚಸ್ಸನ್ನು ಮತ್ತೆ ಬೆಳೆಸಿಕೊಳ್ಳಲು ಆತ ಇಂತಹ ಕುಂಟು ನೆಪಗಳನ್ನು ಕಂಡುಕೊಂಡಿದ್ದ.

ಇನ್ನು ಅಭಿವೃದ್ಧಿಯ ವಿಷಯಗಳ ಕತೆಯೂ ಅಷ್ಟೆಯೆ. ಶಾಸಕನಾದ ಮೇಲೆ ತಾನು ಕಂಡಕಂಡಲ್ಲೆಲ್ಲಾ ಅಮೇಧ್ಯ ತಿಂದು ಜೀವರಾಜ್ ಕೊಬ್ಬಿ ಹೋದನೇ ಹೊರತು ತನ್ನನ್ನು ಆರಿಸಿ ಕಳಿಸಿದ ಜನರಿಗಾಗಿ, ಕ್ಷೇತ್ರಕ್ಕಾಗಿ ಒಂದಿಷ್ಟಾದರೂ ಅಭಿವೃದ್ಧಿ ಕೆಲಸ ಮಾಡಬೇಕೆನ್ನುವ ಕನಿಷ್ಠ ಕಾಳಜಿಯೂ ಈತನಿಗೆ ಇಲ್ಲ. ಇದು ತನ್ನನ್ನು ಗೆಲ್ಲಿಸಿದ ಮತದಾರರಿಗೆ ಮಾಡಿದ ಅನ್ಯಾಯವಲ್ಲದೆ ಮತ್ತೇನು? ಕ್ಷೇತ್ರದಲ್ಲಿರುವ ದುರ್ಗಮ ಪ್ರದೇಶಗಳಿಗೆ ಚಿಕ್ಕದೊಂದು ರಸ್ತೆಯೂ ಇಲ್ಲ, ಕುಡಿಯುವ ನೀರಿಗಾಗಿ ಜನ ಹಾಹಾಕಾರ ಪಡುತ್ತಿದ್ದಾರೆ, ಪ್ರಮುಖ ಪ್ರದೇಶಗಳಲ್ಲಿ ಸರಿಯಾದ ಆಸ್ಪತ್ರೆಗಳಿಲ್ಲ, ಶಾಲೆಗಳಿಲ್ಲ, ಬಡವರಿಗೆ ಚಿಕ್ಕದೊಂದು ಗುಡಿಸಲುಗಳಿಲ್ಲ.

ಸರ್ಕಾರದಿಂದ ಬಂದಿದ್ದ ಬೆರಳೆಣಿಕೆಯಷ್ಟು ಯೋಜನೆಗಳನ್ನು ಕೂಡ ಜೀವರಾಜನ ಎಡಗೈ ಮತ್ತು ಬಲಗೈಗಳು ಕಂಟ್ರಾಕ್ಟ್ ಪಡೆದು ಕಾಸುಮಾಡಿಕೊಂಡು ತಮ್ಮ ಗುರು ಜೀವರಾಜನ ಜೇಬನ್ನೂ ತುಂಬಿಸಿದರೆ ಹೊರತು ಕ್ಷೇತ್ರದ ಅಭಿವೃದ್ಧಿಯನ್ನಂತೂ ಮಾಡಲಿಲ್ಲ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಈತ ಶಾಸಕನಾಗುವ ಮೊದಲು ಕ್ಷೇತ್ರ ಹೇಗಿತ್ತೋ ಈಗಲೂ ಹೆಚ್ಚೂ ಕಡಿಮೆ ಹಾಗೆಯೇ ಇದೆ. ಅಷ್ಟೇ ಅಲ್ಲದೆ, ಈತ ಮತ್ತು ಈತನ ಪುಂಡರಿಂದಾಗಿ ಒಂದಿಷ್ಟು ಸಮೃದ್ಧ ಅರಣ್ಯ ಖಾಲಿಯಾಗಿದೆ ಎಂದರೂ ನಡೆಯುತ್ತದೆ.

ಶೃಂಗೇರಿಯ ಬಳಿ ಸರ್ಕಾರ ಘೋಷಿಸಿದ 'ಕುದುರೆಮುಖ ರಾಷ್ಟ್ರೀಯ ಉದ್ಯಾನ' ಯೋಜನೆಯನ್ನು ಆ ಭಾಗದ ಆದಿವಾಸಿ ಜನರೆಲ್ಲರೂ ಒಕ್ಕೊರಲಿನಿಂದ ವಿರೋಧಿಸಿದರು; ತಲೆ ತಲಾಂತರಗಳಿಂದ ಬಾಳಿ ಬದುಕಿದ ತಮ್ಮ ನೆಲದಿಂದ ಒಕ್ಕಲೆಬ್ಬಿಸುತ್ತಾರೆಂದು ಭಯಗೊಂಡು ಇಬ್ಬರು ಆದಿವಾಸಿಗಳು ಆತ್ಮಹತ್ಯೆಯನ್ನೂ ಮಾಡಿಕೊಂಡರು. ಹತ್ತು ಹಲವು ಸಂಘಟನೆಗಳು, ಪ್ರಗತಿಪರ ಬುದ್ಧಿಜೀವಿಗಳು, ಸಾಮಾಜಿಕ ಕಾರ್ಯಕರ್ತರು ಸೇರಿಕೊಂಡು ಇಂತಹದೊಂದು ಯೋಜನೆ ಯಾವ ಕಾರಣಕ್ಕೂ ಜಾರಿಯಾಗಬಾರದೆಂದು ಸರ್ಕಾರವನ್ನು ಒತ್ತಾಯಿಸುವುದಕ್ಕೆ ಹೋರಾಟ ನಡೆಸಿದರು. ಆದರೆ, ನಮ್ಮ ಮಹಾನ್ ಶ್ರೀ ಜೀವರಾಜ್ ಅವರು ಈ ಯೋಜನೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಅದಕ್ಕಾಗಿ ಒಳಗೊಳಗೇ ಅದೆಷ್ಟು ಮೇಯ್ದಿದ್ದರೋ ಆ ಜೀವರಾಜನೇ ಬಲ್ಲ. ಇಂತಹ ಮಹಾಶಯನನ್ನು ಶೃಂಗೇರಿಯ ಮತದಾರ ಪ್ರಭು ಮತ್ತೆ ಗೆಲ್ಲಿಸುವ ತಪ್ಪು ಮಾಡುತ್ತಾರೆಯೆ?

...ಯಿಸಿದ್ದರು. ಆದರೆ ಅವರಿಗೆ ಅದೃಷ್ಟವೇ ಕೈ ಕೊಟ್ಟಿತ್ತು, ಬಿ.ಫಾರಂ. ...ತಲುವಲ್ಲಿ ಅವರ ನಾಮಪತ್ರವೇ ತಿರಸ್ಕೃತಗೊಂಡಿತು. ಈ ರೀತಿ ...ನ್ನ ಅಪ್ಪಚ್ಚು ರಂಜನ್‌ಗೆ ಸಹಿಸಲು ಸಾಧ್ಯವಾಗದಂತಿತ್ತು, ಇದನ್ನು ...ಪತ. ಪರಿಶೀಲನೆಯ ವೇಳೆಯಲ್ಲಿ ಅವರ ಚಡಪಡಿಕೆಯ ಮೂಲಕ ...ಸಬಹುದಿತ್ತು. ಜೈಜಗದೀಶ್ ಸ್ಪರ್ಧಿಸಿದ್ದರೆ ಅನಾಯಾಸವಾಗಿ ...ತುದೆಂಬ ಅವರ ಅನಿಸಿಕೆಗೆ ತಣ್ಣೀರೆರಚಿದಂತೆ ಆಗಿತ್ತು. ಜೊತೆ ...ೀತ ಜನತಾದಳದ ಅಭ್ಯರ್ಥಿ ಲಿಂಗಾಯತ ಕೋಮಿಗೆ ಸೇರಿದ್ದರಿಂದ, ...ಪದ ಮತಗಳೇ ಅವರಿಗೆ ದೊರಕುವುದು ಅಪ್ಪಚ್ಚು ರಂಜನ್‌ರಿಗೆ ...ಯ ಹೊಡೆತವಾಗಿದೆ. ಬಿಎಸ್‌ಪಿಯ ಬಿ ಫಾರ್ಮ್ ಕೈಕೊಟ್ಟ ...ೀ ಜೈ ಜಗದೀಶ್ ಬಿಜೆಪಿ ಸೇರಿದ್ದು ಇತ್ತೀಚಿನ ಬೆಳವಣಿಗೆ.

...ಪ್ಪಚ್ಚು ರಂಜನ್ ಇಲ್ಲಿ ಶಾಸಕರಾಗಿದ್ದೇ ಒಂದು ವಿಶೇಷ. ಭಾಜಪ ...ಂದೆ ಸೋಮವಾರಪೇಟೆಯಲ್ಲಿರಲಿಲ್ಲ. ಚೆಡ್ಡಿಗಳ ಸೃಷ್ಟಿಯಾಗಿದ್ದ ...ನ ಧ್ವಜ ಪ್ರಕರಣದಿಂದ ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿ, ... ವಿಶೇಷ ಕೊಡುಗೆಯನ್ನು ನೀಡದಿದ್ದರೂ, ಭಾರತೀಯ ಜನತಾಪಕ್ಷವನ್ನು ...ಯುತವಾಗಿ ತನ್ನ ಕೈಯೊಳಗೆ ಇಟ್ಟುಕೊಳ್ಳುವಲ್ಲಿ ಸಫಲರಾಗಿದ್ದಾರೆ. ... ಭಾಜಪ. ಗುಂಪುಗಾರಿಕೆಗೆ ಇವರ ಕೊಡುಗೆಯೇ ಹೆಚ್ಚು, ಇವರ ...ದರ ಸುನಿಲ್ ಸುಬ್ರಹ್ಮಣಿಯನ್ನು ಜಿಲ್ಲಾ ಅಧ್ಯಕ್ಷರನ್ನಾಗಿಸುವ ಭರದಲ್ಲಿ ...ಸೋಲಾಗಿತ್ತು. ಇನ್ನೊಬ್ಬ ಸಹೋದರ ಸುಜಾ ಕುಶಾಲಪ್ಪ ನಡೆಸದಿರುವ ...ಗಳೇ ಇಲ್ಲ. ಆದರೆ ಪಕ್ಷವಾಗಲಿ, ರಂಜನ್ ಆಗಲಿ, ಈ ಬಗ್ಗೆ ...ವೆತ್ತುವುದಿಲ್ಲ.

...ವರಿಗೆ ಪ್ರತಿಸ್ಪರ್ಧಿಯಾಗಿರುವವರು ಮಾಜಿ ಸಚಿವ ಬಿ.ಎ.ಜೀವಿಜಯ. ...ತೇಕ ಇವರ ಕ್ಷೇತ್ರದಲ್ಲಿ ಭಾಜಪ ಬೆಳೆಯಲು ಇವರ ರಾಜಕೀಯವೇ ...ವೆಂದು ಹೇಳಬಹುದು. ಜಾತ್ಯತೀತ ಪಕ್ಷವಾದ ಕಾಂಗ್ರೆಸ್ ಪಕ್ಷದ ...ಧಿಯಾಗಿದ್ದರೂ, ಅಲ್ಪಸಂಖ್ಯಾತರ, ಹಿಂದುಳಿದ ವರ್ಗಗಳ ರಕ್ಷಣೆಗೆ ...ಾಗಲೂ ಧುಮುಕಿದವರಲ್ಲ. ಶಾಸಕನಾಗಿ ಏನು ಕೆಲಸ ಮಾಡಬೇಕೋ, ...ಿ ಬಿಟ್ಟು ಕಾಂಗ್ರೆಸ್ ಪಕ್ಷ ಬೆಳೆಸಲಾಗಲೀ, ಬೇರೆ ಯಾವುದೇ ...ರ್ಯಕ್ರಮಗಳಾಗಲೀ ಇವರ ಬಳಿ ಇಲ್ಲ. ಇವರದು ಕೂಡ ಕುಟುಂಬ ...ಾರಣವೇ. ಇವರ ಪುತ್ರ ರಾಜಕೀಯ ಗಂಧಗಾಳಿ ಅರಿಯದ ಸಂಜಯ್ ...ಜಯ, ಜಿಲ್ಲಾ ಪಂಚಾಯತ್ ಸದಸ್ಯ. ಆದರೆ ಈತನ ಕೊಡುಗೆ ... ಶೂನ್ಯ.

...ಲ್ಲಿ ಭಾಜಪವನ್ನು ಸೋಲಿಸಬೇಕು ಎಂಬ ಕಾರಣಕ್ಕಾಗಿ, ಜೀವಿಜಯ ...ಗೆ ಮತ ನೀಡಬೇಕೆ ವಿನಃ ಬೇರೆ ಯಾವುದೇ ನಿರ್ದಿಷ್ಟ ಕಾರಣಗಳು ...ಗೆ ಮತ ನೀಡಲು ಇಲ್ಲ. ನೇರ ಪೈಪೋಟಿ ಇರುವುದರಿಂದ, ...ಜಯ ಈ ಸಂದರ್ಭದಲ್ಲಿ ಒಂದು ಹೆಜ್ಜೆ ಮುಂದೆ ಇದ್ದಾರೆ ಎಂದು ...ಬಹುದು.

...ಮಾಜಿ ಸಚಿವ ಎಂ.ಸಿ. ನಾಣಯ್ಯ ದೂರದಲ್ಲಿ ಕುಳಿತು ಎಲ್ಲವನ್ನೂ ...ಸುತ್ತಿದ್ದಾರೆ. ಅರುಣ್ ಮಾಚಯ್ಯ ಸೋಲುವುದು ಖಚಿತ ಎಂದು ...ಯ ಕೆಳಗೆ ನಗುತ್ತಿದ್ದಾರೆ. ಆತ ಸೋತರೆ ಮತ್ತೆ ಕೊಡಗಿನ ದಳದಲ್ಲಿ ... ನಾಣಯ್ಯ ಅನಭಿಷಕ್ತ ದೊರೆ. ಗೆದ್ದಲ್ಲಿ ತನ್ನ ಪರಿಶ್ರಮದಿಂದ ...ಯ್ಯ ಗೆದ್ದ ಎಂದು ಹೇಳಬಹುದು. ಮತ್ತೋರ್ವ ರಾಜಕಾರಣಿ ...ಿ ಚಿಂತಕ ಎ.ಕೆ. ಸುಬ್ಬಯ್ಯ ವಿರಾಜಪೇಟೆ ಕ್ಷೇತ್ರದಲ್ಲಿ ಕಾಂಗ್ರೆಸ್ ...ನ್ನು ಗೆಲ್ಲಿಸಲೇಬೇಕು ಎಂದು ಮುಳುಗುವ ಹಡಗಿನ ತೂತು ಮುಚ್ಚುವ ...ರ್ಯವನ್ನು ಮಾಡುತ್ತಿದ್ದಾರೆ.

■ ವರದಿಗಾರ


ಬಿ. ಚಂದ್ರಗೌಡ

ಈ ಹಿಂದೆ ಕಾನೂನು ಮಂತ್ರಿಯಾಗಿದ್ದ ಕಾಂಗ್ರೆಸ್‌ನ ಡಿ.ಬಿ.ಚಂದ್ರೇಗೌಡರ ಡೋಲಾಯಮಾನ ಆಡಳಿತವನ್ನು ಕಂಡು ರೋಸಿಹೋಗಿದ್ದ ಜನ ಬದಲಾವಣೆ ಬಯಸಿ ಜೀವರಾಜ್‌ನನ್ನು ಆಯ್ಕೆ ಮಾಡಿದ್ದರು. ಈಗ ತಾವು ಅದೆಂಥ ತಪ್ಪು ಮಾಡಿದ್ದರೆಂಬುದು ಅವರಿಗೆ ಅರ್ಥವಾದಂತಿದೆ.

ಇವರಿಬ್ಬರ ವೀಕ್‌ನೆಸ್‌ಗಳನ್ನು ಚೆನ್ನಾಗಿ ಬಳಸಿಕೊಳ್ಳುತ್ತಿರುವವರು ಜೆಡಿಎಸ್‌ನಿಂದ ...ುತ್ತಿರುವ ಎಸ್.ಟಿ.ರಾಜೇಂದ್ರ. ತನ್ನ ವಿನಯಶೀಲ ವರ್ತನೆಯಿಂದ, ...ನ ಚಮತ್ಕಾರದಿಂದ ಕ್ಷೇತ್ರದ ಜನಮನ ಗೆಲ್ಲುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ...ಪ್ಪತ್ತು ಮೂವತ್ತೈದು ಸಾವಿರದಷ್ಟಿರುವ ಬ್ರಾಹ್ಮಣ ಮತಗಳಿಗೂ ಅವರೀಗ ...ಹಾಕಿದ್ದಾರೆ. ಸಾಕಷ್ಟು ಮೊದಲೇ ಚುರುಕಿನಿಂದ ಕ್ಷೇತ್ರದಾದ್ಯಂತ ...ುತ್ತಿರುವ ರಾಜೇಂದ್ರ ಅವರಿಗೆ ಸಾಕಷ್ಟು ಜನಬೆಂಬಲವೂ ದೊರೆಯುತ್ತಿದೆ. ...ನ್ನೊಂದೆಡೆಗೆ ಬಿಎಸ್‌ಪಿ ಕೂಡ ಉತ್ತರ ಪ್ರದೇಶದಲ್ಲಿ ಮಾಡಿದ ...ಯಲ್ ಇಂಜಿನಿಯರಿಂಗ್‌ನ್ನೇ ಇಲ್ಲೂ ಪ್ರಯೋಗಿಸುತ್ತಿದೆ. ಅದಕ್ಕಾಗಿಯೇ ...ರವಿಶಂಕರ್ ಎಂಬ ಬ್ರಾಹ್ಮಣ ಅಭ್ಯರ್ಥಿಗೆ ಟಿಕೆಟ್ ನೀಡಿದೆ. ಜೆಡಿಎಸ್‌ನ ...ೇಂದ್ರ ಮತ್ತು ಬಿಎಸ್‌ಪಿಯ ರವಿಶಂಕರ್ ...ೂ ಗಣನೀಯ ಪ್ರಮಾಣದ ಬ್ರಾಹ್ಮಣ ...ಗಳನ್ನು ಬಾಚಿಕೊಳ್ಳಲಿರುವುದ ರಿಂದ ...ಣ ಮತಗಳನ್ನೇ ನಂಬಿಕೊಂಡಿರುವ ...ಿ ಮತ್ತು ಜೀವರಾಜ್‌ಗೆ ಇದರಿಂದ ... ನಷ್ಟವುಂಟಾಗಲಿದೆ. ಅದರಲ್ಲೂ ...ಶ ರಾಜೇಂದ್ರ ಅವರಿಗೆ ಸಿಗುತ್ತಿರುವ ...ಬಲ ಜೀವರಾಜ್‌ಗೆ ನುಂಗಲಾರದ ...ದೆ.


ಎಸ್.ಟಿ.ರಾಜೇಂದ್ರ

...ದಂತೂ ಸತ್ಯ ಚಿಕ್ಕಮಗಳೂರಿನ ಸಿ.ಟಿ.ರವಿ ಮನೆಗೆ ಮರಳಲು ಈಗ ... ಮೂಟೆ ಕಟ್ಟುತ್ತಿದ್ದಾನೆ. ಆದರೆ ಜೀವರಾಜ್ ಈಗಾಗಲೇ ತನ್ನ ...ಅನ್ನು ರಿಟಿ ಮಾಡಿಟ್ಟುಕೊಂಡಿದ್ದಾನೆ!


■ ಅಜೀಜ್ ಕಿರಗುಂದ

ಮೆಗಾಸಿಟಿ V/s ಲಿಕ್ಕರ್

ಚನ್ನಪಟ್ಟಣ

ಕಾಂಗ್ರೆ ಪಾಳಯದಿಂದ ಸತತವಾಗಿ ಎರಡು ಬಾರಿ ಗೆದ್ದು ತನ್ನೆಲ್ಲಾ ಅಪರಾ-ತಪರಾಗಳಿಂದ ಖ್ಯಾತಿ-ಅಪಖ್ಯಾತಿಗಳೆರಡನ್ನೂ ಮೈವೆತ್ತಿಕೊಂಡಿರುವ ನಟಭಯಂಕರ ಯೋಗೀಶ್ವರ್ ಈ ಸಲವೂ ಶತಾಯಗತಾಯ ಗೆಲ್ಲಲೇಬೇಕೆಂಬ ಚಡಪಡಿಕೆಯಿಂದ ಧಾಂ-ಧೂಂ ಅನ್ನುತ್ತಿದ್ದರೆ, ಕಳೆದ ಸಲ ಸೋತು ಸುಣ್ಣವಾಗಿದ್ದ ಜೆಡಿಎಸ್‌ನ ಲಿಕ್ಕರ್ ಕುಳ ಎಂ.ಸಿ. ಅಶ್ವತ್ಥ್ ಉಘೋ-ಉಘೋ ಎನ್ನುತ್ತಿದ್ದಾರೆ. ತಾನೂ ಅಖಾಡಕ್ಕಿಳಿಯುತ್ತೇನೆಂದು ಮಾಜಿ ಸಚಿವ ವರದೇಗೌಡ ಸಿಡಿಸಿದ್ದ ಫಿರಂಗಿ ಠುಸ್ಸೆಂದು ಕೊನೆಗೆ ಕಾಂಗ್ರೆಸ್‌ಗೆ ಟಾಂಗು ಕೊಟ್ಟು ಮತ್ತೆ ಜೆಡಿಎಸ್‌ಗೆ ಪಟಾಂಗನೇ ನೆಗೆದಿದ್ದಾರಲ್ಲದೇ ಜೆಡಿಎಸ್ ಅನ್ನು ಗೆಲ್ಲಿಸಿಯೇ ತೀರುತ್ತೇನೆಂದು ಬಾಟಲಿ ಮೇಲೆ ಆಣೆ ಮಡಗಿದ್ದಾಗಿದೆ.

ಅಸಲಿಗೆ ಇದು ಸುಲಭವೂ ಅಲ್ಲ, ಈಗಿರುವ ಯೋಗೇಶಿಯ ವರ್ಚಸ್ಸು ನೋಡಿದರೆ ಅಶ್ವತ್ಥ್ ಗೆಲ್ಲುವುದು ಕಷ್ಟವೂ ಅಲ್ಲ ಎಂಬಂತಿದೆ. ಯಾಕೆಂದರೆ ಅನಾಮತ್ತು ಎರಡು ಸಾಲ ಶಾಸಕನಾಗಿ ಮೆರೆದ ಯೋಗೀಶ್ವರ್ ಗೆದ್ದು ಬಂದಿದ್ದೆಲ್ಲಾ ಗಿಮಿಕ್ಕುಗಳಿಂದಲೇ ಸರಿ. ಆಗಷ್ಟೇ ಕನ್ನಡ ಸಿನಿಮಾಗಳಲ್ಲಿ ಅಲ್ಲೋ ಇಲ್ಲೋ ಮುಖ ತೂರಿಸುತ್ತಿದ್ದವ, ಕ್ರಮೇಣ ಮೆಗಾಸಿಟಿ ದಗಾಕೋರತನದಿಂದ ಗುಂಜಿಕೊಂಡ ಹಣದ ಥೈಲಿ ಹಿಡಿದು ದುಮು-ದುಮು ಅಂತ ರಾಜಕೀಯ ಅಖಾಡಕ್ಕೆ ಧುಮುಕಿದವ, ಜನತೆಯ ಕಣ್ಣಿಗೆ ಹೀರೋವಾಗಿ ಕಂಡವನು, ನಂತರ ಮಾಡಿಕೊಂಡಿದ್ದೆಲ್ಲಾ ಬರೇ ಅವಘಡಗಳು, ಸಿನಿಮಾ ಖಯ್ಯಾಲಿ ಅಂಟಿಸಿಕೊಂಡು ಸೃಷ್ಟಿಸಿಕೊಂಡಿದ್ದು ಭಾನಗಡಿಗಳೇ. ಹಾಗಾಗಿ ಆತನ ಜನಪ್ರಿಯತೆಯ ಚುಂಗು ಸ್ವಲ್ಪ ಸ್ವಲ್ಪವೇ ಕಳಚಿದೆ.


ಯೋಗೀಶ್ವರ್

ಮೊದಲ ಸಲವೇ ಸ್ವತಂತ್ರ ಅಭ್ಯರ್ಥಿಯಾಗಿ ಫೀಲ್ಡಿಗಿಳಿದ ಯೋಗೀಶ್ವರ್ ಬರೇ ಐವತ್ತು ರೂಪಾಯಿಗೇ ಕೇಬಲ್ ಕೊಡ್ತೀನಿ, ಕಣ್ವ ಕ್ರಸ್ಟ್ ಗೇಟ್ ಅಳವಡಿಸ್ತೀನಿ. ಸ್ಟೇಡಿಯಂ-ಪಾರ್ಕು, ಗಾರ್ಮೆಂಟ್ಸು, ಆಸ್ಪತ್ರೆ ಕಟ್ಟಿಸ್ತೀನಿ, ಹೇಮಾವತಿ ನೀರನ್ನು ಝುಳುಝುಳು ಹರಿಸ್ತೀನಿ ಅಂತೆಲ್ಲಾ ಬೋಂಗು ಬಿಟ್ಟು ಗೆದ್ದು ಬಂದವ. ಕೊನೆಗೆ ಜನರ ಆಶಾಗೋಪುರದ ಮುಂದೆ ಖಾಲಿಯಾಗಿದ್ದು ಮಾತ್ರ ದಿಟ. ಆದರೂ ಎರಡನೇ ಸಲವೂ ಜಯದ ಬಾವುಟ ಹಾರಿಸಿದ ಯೋಗೀಶ್ವರ್‌ಗೆ ಈ ಸಲದ ಕಾಳಗದಲ್ಲಿ ಗೆಲ್ಲುವುದು ತುಸು ತ್ರಾಸದಾಯಕವೇ ಸರಿ.

ಯಾಕೆಂದರೆ ಕಾಂಗ್ರೆಸ್ಸಿನಲ್ಲೇ ಗುಂಪುಗಳಾಗಿವೆ. ಸ್ವತಃ ಆತನ ಅನುಯಾಯಿಗಳೇ 'ಬೇಡಾಪ್ಪ ಬಣ್ಣದೋನ ಸಾವಾಸ. ಎಲ್ರೂ ಬಣ್ಣ ಬಳ್ಕಂಡ್ ನಾಟ್ಕ ಮಾಡಿದ್ರೆ ಇಂವಯ್ಯ ಹಂಗೇ ತಕತಕ ಅಂತಾನೇ. ಅನ್ನೋ ಬೇಸರದಿಂದ ದೂರಾಗಿದ್ದಾರೆ. ಮೊದಲಿನ ಖದರ್ರೂ-ವೆದರ್ರೂ ಇಲ್ಲದ ಯೋಗೀಶ್ವರ್‌ಗೆ ಎಂ.ಪಿ. ತೇಜಮ್ಮ ಟಿಕೆಟ್ ತಪ್ಪಿಸಲು ಕೂಗುಮಾರಿಯಂತೆ ಓಡಾಡಿದರೂ, ಕಾಂಗ್ರೈನ ಸೀಟು ಹಿಡಿದು ಮೂರನೇ ಹಣಾಹಣಿಗೆ ಸಿದ್ಧವಾಗಿ ಹಪಾಹಪಿಸುತ್ತಿದ್ದಾನೆ.

ಹಾಗಂತ ಜೆಡಿಎಸ್‌ನಿಂದ ಕಾಳಗಕ್ಕಿಳಿದಿರುವ ಲಿಕ್ಕರ್ ದೊರೆ ಎಂ.ಸಿ. ಅಶ್ವತ್ಥ್ ಗೆಲುವಿಗೆ ಎಡರುತೊಡರಾಗಿರುವವರ ದಂಡು ಆ ಪಕ್ಷದಲ್ಲೇ ಇದೆ. ಅಲ್ಲೂ ಪುಟ್ಟಸ್ವಾಮಿಗೌಡ, ಹಾಲು ಒಕ್ಕೂಟದ ಲಿಂಗೇಶ್‌ಕುಮಾರ್, ನಗರಸಭೆ ಉಪಾಧ್ಯಕ್ಷ ವಾಸಿಲ್‌ರವರ ವಿರೋಧಿ ಗುಂಪುಗಳಿವೆ. ಜತೆಗೆ ಅಶ್ವತ್ಥ್‌ಗೆ ಲಿಕ್ಕರ್ ವ್ಯಾಪಾರಿ ಎಂಬುದೇ ಶಾಪಗ್ರಸ್ತದಂತಿದೆ. ಆದರೂ ಈಗಾಗಲೇ ಇಡೀ ಕ್ಷೇತ್ರದಲ್ಲಿ ಸುತ್ತಾಡುತ್ತಾ ಎಲೆಕ್ಷನ್ ರಣಾಂಗಣದಲ್ಲಿ ಬಿರುಸು ಹುಟ್ಟಿಸಿ ಈ ಸಲ ಏನೇ ಆದರೂ ಗೆಲ್ಲಲೇಬೇಕೆಂಬ ಉಮೇದಿಯಲ್ಲಿರುವ ಅಶ್ವತ್ಥ್‌ಗೆ ಮೊದಲಿಗಿಂತಲೂ ವಾತಾವರಣ ಪೂರಕವಾಗಿದೆ. ಕಳೆದ ಸಲವೇ ಹೊಸಬನಾದರೂ ಆ ಮಟ್ಟದ ಹೋರಾಟ ಕೊಟ್ಟಿದ್ದರಿಂದ ಈ ಸಲ ಮುಂಚೂಣಿಗೆ ಬಂದು ನಿಲ್ಲುವ ಅಂದಾಜಿದೆ. ಬಿಜೆಪಿಗೆ ಇಲ್ಲಿ ನೆಲೆಯೇ ಇಲ್ಲ.

ಈಗಾಗಲೇ ಒಂದು ರೌಂಡು ಸೀರೆ ಕುಪ್ಪಸ, ಪ್ಯಾಂಟು-ದಿರಿಸು ಹಂಚಿ ಹಣ ಹೇರಾಫೇರಿಗೆ ಸಿದ್ಧವಾಗಿರುವ ಯೋಗೀಶ್ವರ್-ಅಶ್ವತ್ಥ್‌ನ ಟ್ರಿಕ್ಕುಗಳು ವರದಾನವಾಗುವುದೇ ಕಾದುನೋಡಬೇಕಿದೆ.

ಒಟ್ನಾರೆ ಈ ಬಾರಿಯ ಚನ್ನಪಟ್ಟಣ ಚುನಾವಣಾ ಕಣ ಕಡು ಬೇಸಿಗೆಯ ಹವಾ ಎಬ್ಬಿಸಿದೆ. ಅದರಲ್ಲಿ ಅಶ್ವತ್ಥ್‌ನ ಹವಾ ಎದ್ದು ವರದೇಗೌಡನ ಜಪ ಈಡೇರುತ್ತದೋ, ಇಲ್ಲ ಯೋಗೇಶಿಯೇ ಗೆದ್ದು ಬರುತ್ತಾರೋ ಕಾದು ನೋಡಬೇಕು. ■

ಮಾಗಡಿಯ ಮಾಯಾಂಗಣ


ಬಾಲಕೃಷ್ಣ

ಮಾಗಡಿ ಜನತೆಯ ದುರ್ದೈವವೋ ಏನೋ ಆ ಕೆಂಪೇಗೌಡನೇ ಬಲ್ಲ. ಯಾಕೆಂದರೆ ಈ... ಅಲ್ಲಿ ಕಣಕ್ಕಿಳಿದಿರುವ ಅಭ್ಯರ್ಥಿಗಳನ್ನೇ ನೋಡಿ. ಬಿಜೆಪಿಯಿಂದ ಸೀತಾಫಲ ಗಿರಾಕಿ ಪಿ. ನಾಗರ... ಕಾಂಗ್ರೆಸ್‌ನಿಂದ ತೇಜಮ್ಮನ ಕ್ಯಾಂಡಿಡೇಟು ಕಲ್ಪನಾ ಶಿವಣ್ಣ, ಜೆಡಿಎಸ್‌ನಿಂದ ಮತ್ತದೇ ಭೂ ವಾ... ಎಚ್.ಸಿ. ಬಾಲಕೃಷ್ಣ ಅಂದಮೇಲೆ ಜನತೆಗೆ ಯಾರಿಗೆ ಓಟು ಕೊಡಬೇಕೆಂಬ ಗೊಂದಲ ಸದ್ಯಕ್ಕೆ...

ಅಸಲು ಬಿಜೆಪಿಯ ನಾಗರಾಜು ರಾಮನಗರದ ಮಾಯಗಾನ ಹಳ್ಳಿಯವ. ಮೊದಲೆಲ್ಲಾ ರಸ್ತೆಬದಿ... ನಿಂತು ಬುಟ್ಟಿಗಳಲ್ಲಿ ಸೀತಾಫಲ ಹಣ್ಣು ಮಾರುತ್ತಿದ್ದವ ಇಂದು ಕೋಟಿ ಕುಬೇರ. ಮಾಜಿ ಶಾಸಕ ... ಲಿಂಗಪ್ಪನ ಕೃಪಾಕಟಾಕ್ಷದಿಂದ ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಮೆಂಬರೂ ಆಗಿದ್ದವ. ಆ... ಅಧಿಕಾರಿಗಳನ್ನು ಮೈಸೂರಿನ ಗೆಸ್ಟ್‌ಹೌಸಿಗೆ ಕರೆದೊಯ್ದು 'ಸೇವೆ'ಮಾಡುತ್ತಲೇ ಬುಟ್ಟಿಗಾಕಿಕೊಂ... ಕಾಸು ಗೆಬರಿಕೊಂಡ ನಾಗರಾಜು. ನಂತರ ಕುಮಾರಣ್ಣ ಮುಖ್ಯಮಂತ್ರಿಯಾಗುತ್ತಿದ್ದಂತೆಯೇ ಚಂಗನೇ ಜೆಡಿಎಸ್‌ಗೆ ನೆಗೆದ ಪರಿಣಾಮ ಹಾ... ಒಕ್ಕೂಟವೆಂಬ ಪೊಗದಸ್ತಾದ ಕೆಚ್ಚಲು ಕೈಗೆ ದಕ್ಕಿತ್ತು. ಬಡವರ, ದಲಿತರ ಜಮೀನುಗಳಿಗೆ ಬೇಲಿ ಸುತ್ತಿ, ಚಿಕ್ಕಪುಟ್ಟ ಅಮೌಂಟ್ ಅಡ್ವಾನ್ಸಾಗಿ ಮಡಗಿ. ಅದನ್ನೆಲ್ಲಾ ದೊಡ್ಡ ಅಮೌಂಟಿಗೆ ಮಾರಿಕೊಂಡು ದಿಢೀರ್ ಶ್ರೀಮಂತನಾದ ನಾಗರಾಜು ಇವತ್ತೇನಿಲ್ಲದಿದ್ದರೂ ಅನಾಮತ್ತು ನೂರು ಕೋಟಿಗಳಿಗೆ ತೂಗುತ್ತಾರೆ.

ಯಾವಾಗ ಎಲೆಕ್ಷನ್ ಅನೌನ್ಸ್ ಆಯಿತೋ ಆವತ್ತಿನಿಂದಲೇ ಮಾಜಿ ಸಚಿವ ಆರ್. ಅಶೋಕ್ ಹಿಂದೆ ಬಿದ್ದು 'ಸಾ ಎರಡು ಕೋಟಿ ಕೊಡ್ತೀನಿ, ಎಂಗಾದ್ರೂ ಬಿಜೆಪಿ ಟಿಕೆಟ್ ಕೊಡ್ಸಿ' ಅಂತ ಬೇಡುತ್ತಿದ್ದ ನಾಗರಾಜ ಕೊನೆಗೂ ಮಾಗಡಿಯ ಅಭ್ಯರ್ಥಿಯಾಗಿದ್ದಾರೆ.

ಇದು ಬಿಜೆಪಿಯ ಪ್ರಾರಬ್ಧವಾದರೆ, ಕಾಂಗ್ರೆಸ್‌ನಿಂದ ಟಿಕೆಟ್‌ಗಾಗಿ ಹಾಕ್ಯಾಟ-ಕಾದಾಟ ನಡೆದು ಕೊನೆಗೆ ಮಾಜಿ ಪುರಸಭಾ ಅಧ್ಯಕ್ಷೆ ಕಲ್ಪನಾ ಶಿವಣ್ಣನಿಗೆ ಚಾನ್ಸು ದಕ್ಕಿದೆ. ಅದೂ ತೇಜಮ್ಮನ ಹಕೀಕತ್ತಿನಿಂದಾಗಿ. ಇತ್ತೀಚೆಗೆ ಕಾಂಗ್ರೆಸ್ ಪಡಸಾಲೆಗೆ ಬಂದುಕುಂತಿದ್ದ ಜೇಡರಹಳ್ಳಿ ಕೃಷ್ಣಪ್ಪನಿಗೆ ಟಾಂಗು ಕೊಟ್ಟಿರುವ ಕಾಂಗ್ರೆಸ್ ನಾಯಕರ ವಿರುದ್ಧ ಅಸಮಾಧಾನದ ಕಿಡಿ ಹೊತ್ತಿಕೊಂಡಿದೆ. ಇನ್ನು ಜೆಡಿಎಸ್ ಯಥಾವತ್ತಾಗಿ ಮತ್ತದೇ ಬಾಲಕೃಷ್ಣರನ್ನು ಕ್ಯಾಂಡಿಡೇಟಾಗಿಸಿದೆ. ಈ ಹಿಂದೆ ಶಾಸಕನಾಗಿದ್ದಾಗಲೇ ತನ್ನ ಪುಂಡಪಡೆ ಕಟ್ಟಿಕೊಂಡು ಸುತ್ತಮುತ್ತಲಿನ ಕ್ವಾರಿಗಳಲೆಲ್ಲಾ ಸಾಕಷ್ಟು ಇನಾಮು ಮಾಡಿಕೊಂಡಿದ್ದಲ್ಲದೇ, ಭೂ ವ್ಯಾಪಾರದಿಂದಲೂ ಬೇಕಾದಷ್ಟು ಗೆಬರಿಕೊಂಡಿರುವ ಬಾಲಕೃಷ್ಣ ಗೆಲ್ಲುವ ಉಮೇದಿಯಿಂದ ಹಣದ ಹೊಳೆಯನ್ನೇ ಹರಿಸಲು ಮುಂದಾಗಿದ್ದಾರೆ. ಇದಕ್ಕೇನು ಕಮ್ಮಿಯಿಲ್ಲದಂತೆ ಬಿಜೆಪಿಯ ಪಿ. ನಾಗರಾಜ ತನ್ನ ಭೂ ಖದೀಮತನದ ಹಣದ ಮೂಟೆಯನ್ನು ಸುರಿದು ಎಮ್ಮೆಲ್ಲೆಯಾಗುವ ತವಕದಲ್ಲಿದ್ದಾರೆ.

ಒಟ್ನಾರೆ ಈ ಬಾರಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿರುವ ಮಾಗಡಿಯ ಮಾಯಾಂಗಣ ನೆಲದಲ್ಲಿ ಕಾದಾಟ ಗ್ಯಾರಂಟಿಯಾಗಿದೆ. ಹರಿಯಲಿರುವ ಹಣವೂ ಕಡಿಮೆಯೇನಲ್ಲ. ಹಾಗಾಗಿ ಬಾಲಕೃಷ್ಣ ಮತ್ತೆ ಗೆಲ್ಲುತ್ತಾರೋ, ಇಲ್ಲ ಮಹಿಳಾ ಅಭ್ಯರ್ಥಿಯಾಗಿ ಕಾಂಗ್ರೆಸ್ ಬಾವುಟ ಹಿಡಿದಿರುವ ಕಲ್ಪನಾ ಶಿವಣ್ಣ ಅದ್ಯಾವ ಪರಿ ಬಾವುಟ ಹಾರಿಸುತ್ತಾರೋ, ಯಾಕೆಂದರೆ ಮಗ್ಗುಲಲ್ಲೇ ಮುಳ್ಳಿವೆ. ಆಕೆಯ ವಿರುದ್ಧ ... ಜಟಾಪಟ ಶುರುವಾಗಿದೆಯಷ್ಟೇ! ಆದರೆ ಸೀತಾಫಲ ಗಿರಾಕಿ ಬಿಜೆಪಿಯ ನಾಗರಾಜು ಊರಿಗೆ ಮೊದಲೇ ಭೂಮಾಧೀನನಾದಂತೆ 'ನಾನೇ ಎಮ್ಮೆಲ್ಲೇ ನಾನೇ ಎಮ್ಮೆಲ್ಲೇ' ಅಂತ ಕಂಡ ಕಂಡಲ್ಲಿ ಕನವರಿಸತೊಡಗಿದ್ದಾನೆ. ಮಾಗಡಿ ಮತದಾರ ನಾಗರಾಜನನ್ನು ನೋಡಿ ನಗಾಡುತ್ತಿದ್ದಾನೆ. ■

ಗಂಡು ಅಂದ್ರೆ ಬಂಗಾರಪ್ಪ ಕಂಡ್ರ ಉಗ್ರಿ

ಯಾರ‍್ಯಾರು ಎಲ್ಲೆಲ್ಲಿ ನಿಂತಿದ್ದಾರೆ ಎಂಬ ಕುತೂಹಲ ಕಾಳಮಾವನಲ್ಲಿ ಉದ್ಭವಿಸಿತು. ಆದ್ದರಿಂದ ಉಗ್ರಿ ಬಂದ ಕೂಡಲೇ,

"ಲೇ ಉಗ್ರಿ, ಯಾರ‍್ಯಾರು ಎಲ್ಲೆಲ್ಲಿ ನಿಂತಗಂಡ್ರುಲಾ?" ಎಂದ. ಈ ಪ್ರಶ್ನೆ ಬೆಳೆಸುವ ಪಟ್ಟಿ ನೆನೆದ ಉಗ್ರಿ.

"ಹೆಚ್ಚುಕಮ್ಮಿ ಯಲ್ಲ ಅಲ್ಲಲ್ಲೆ ನಿಂತುಗಂಡ್ರು ಕಣಮಾವ. ಆದ್ರೆ ಬಂಗಾರಪ್ಪ ಮಾತ್ರ ಹೋಗಿ ಶಿಕಾರಿಪುರದಲ್ಲಿ ನಿಂತಗಂಡವುನೆ."

"ಶಿಕಾರಿಪುರಕೋಗಿ ನಿಂತಿದ್ದನೆ?"

"ಊ, ಯಡೂರಪ್ಪನ ಶಿಕಾರಿ ಮಾಡನ ಅಂತ ಹೋಗ್ಯವುನೆ. ಶಿಕಾರಿ ಮಾಡ್ತನೊ ಅಥವಾ ಇವುನೆ ಶಿಕಾರಿಯಾದನೊ ಅನ್ನಂಗಾಗ್ಯದೆ."

"ಅದ್ಯಾಕಲ್ಲಿಗೋಗಿ ನಿಂತಗಂಡಾ?" ಎಂದಳು ಜುಮ್ಮಿ.

ಬಂತಲ್ಲ ಸಿಟಿಯಿಂದ ಕಟ್ಟೆಪುರಾಣ

■ ಬಿ. ಚಂದ್ರೇಗೌಡ

"ಸ್ವರಬದಲ್ಲಿ ಮಗ ನಿಂತವುನೆ. ಅವುನೆದ್ರಿಗೆ ನಿಂತಗಳಕ್ಕಾದತೆ? ಅದ್ಕೆ ಆ ಮಗನೆದ್ರಿಗೆ ಇನ್ನಬ್ಬ ಮಗನ್ನ ನಿಲ್ಲಿಸಿ, ಸಾಗ್ರ, ಶಿಕಾರಿಪುರ ಯರಡು ಕಡೆಲೂ ನಿಂತಗಳಕ್ಕೆ ಅಂತ ಹೋಗಿದ್ದ. ಅಲ್ಲಿ ನಿಂತಿದ್ದ ಕಾಗೋಡು ತಿಮ್ಮಪ್ಪ ಯಾರ‍್ಯಾರಿಗೋ ಹೇಳಿ ಫೋನು ಮಾಡಿಸಿದ ಮ್ಯಾಲೆ ಈಗೋಗಿ ಶಿಕಾರಿಪುರದಲ್ಲಿ ಯಡೂರಪ್ಪನಿಗೇ ಶೆಡ್ಡು ಹೊಡದವುನೆ."

"ಅವುನು ಕಂಡ್ರ ಗಂಡು ಮಗ ಅಂದ್ರೆ" ಎಂದ ಸೀರ.

"ಅದೇನಂಗಂತಿಯಲ್ಲೋ? ಅವುನು ಮದಿವಾದಾಗ್ಳೆ ಗಂಡುಮಗ ಅನ್ನದು ಗೊತ್ತಾಯ್ತು, ಅದರಲ್ಲೂ ನಾಕೈದು ಮಕ್ಕಳಾದಾಗ ಇನ್ನೂ ಸಾಬೀತಾಯ್ತು, ಅದಲ್ಲ ಈಗಿನ ಪ್ರಶ್ನೆ. ಹೋಗಿ ಹೋಗಿ ಶಿಕಾರಿಪುರ ಆರಿಸಿಗಂಡು ಎಡೂರಪ್ಪನ ಬಿ.ಪಿ. ಏರಿಸ್ಯವುನಲ್ಲ, ಹೇಳು?"

"ಶಿಕಾರಿಪುರದಲ್ಲಿ ಕುರುಬ್ರು, ಸಾಬ್ರು, ಲಂಬಾಣ್ಯರು ಓಟಾಕ್ತರೆ. ಆದ್ರೆ ಲಿಂಗಾಯಿತ್ರು ಮಾತ್ರ ಒಂದೇ ಒಂದೋಟನೂ ಮಾಡಂಗೆ ಕಾಣ್ತಾಯಿಲ್ಲ."

"ಅದ್ಯಾಕ್ಲ?"

"ಇವುನು ವಿರೇಂದ್ರ ಪಾಟೀಲ್ರು ಮುಖ್ಯಮಂತ್ರಿಯಾಗಿದ್ದಾಗ ಅವುರ ಕ್ಯಳಿ ಕಿಳಿಸಿ ಇವುನೆ ಮುಖ್ಯಮಂತ್ರಿಯಾಗಿದ್ನಂತೆ. ಈ ತಿರಗ ಎಡೂರಪ್ಪ ಮುಖ್ಯಮಂತ್ರಿಯಾಗದಂಗೆ ತಡಿಯಕ್ಕೆ ಬಂದವುನೆ ಅಂತ ಸಿಟ್ಟಾಗಿದ್ದರಂತೆ. ಅದ್ಕೆ ಓಟಾಕೆದಿಲವಂತೆ."

"ಅದು ನ್ಯಾಯವೆ ಬುಡು. ಪಾಪ ಲಿಂಗಾಯಿತ್ರ ತಮ್ಮ ಜಾತಿ ಬುಟ್ಟು ಇವುನಿಗೋ ಟಾಕ್ತರೆ?"

"ಆದ್ರು ಎಡೂರಪ್ಪನೆಡ್ತಿ ಕಡಿಯೋರು, ಎಡೂರಪ್ಪನ ಮಕ್ಕಳು, ಮರಿ, ಬೀಗೂ, ಬಜ್ಜರನ್ಯಲ್ಲ ಕಟಗಂಡು ಮಾಡ್ತಯಿರೊ ರಾಜಕಾರಣ ನೋಡಿ ಬೇಜಾರಾಗಿರೊ ಕೆಲುವು ಲಿಂಗಾಯಿತ್ರ ಬಂಗಾರಿ ಕೈ ಹಿಡಿದರಂತೆ."

"ಅವೆಲ್ಲಾ ಇದ್ದದ್ದೆ ಬುಡು. ಇದೇ ದ್ಯಾವೇಗೌಡ ಅವುನ ತಮ್ಮನ ಮನೆ ಓಟು ತಗಳಕ್ಕಾಗಲಿಲ್ಲ" ಎಂದ ಕಾಳಮಾವ. ಆಗ ಜುಮ್ಮಿ ಏನೊ ನೆನೆಸಿಕೊಂಡು,

"ಅಲ್ಲಿಗಂಟ ಯಾಕೋದಿ ಮಾವ. ನಾನು ಪಂಚಾತಿ ಯಲಕ್ಷನ್ ಮಾಡಿದಾಗ ನನ್ನ ವಾರಗಿತ್ತಿ ವೋಟಾಕಿದ್ಲೆ? ಅವುನು ಆ ಪುಡಸಮ್ಮಿ ಅನ್ನೊ ಪಾಪ್ರ ಬಾಯಿಲಿ ಯಕ್ಕಯಕ್ಕ ಅನ್ನೋನು. ಯಾರಿಗೂ ಕಾಣದಂಗೋಗಿ ಜುಮ್ಮಿಗೆ ಓಟುಕೊಡಬ್ಯಾಡಿ, ಈಗ್ಲೆ ಅವುಳ ಹಿಡಿಯಕ್ಕಾಗದಿಲ್ಲ ಇನ್ನ ಗೆದ್ದು ಬಂದ್ರೆ ಅವುಳ ಬಗ್ಗಸೋರ‍್ಯಾರು ಅಂತ ಹೇಳಿಕೊಂಡು ಬಂದನಂತೆ. ಅಂತ ವಟ್ಟೆಕಿಚ್ಚಿನ ಜನ" ಎಂದು ತನ್ನ ಚುನಾವಣಾ ಪ್ರಲಾಪ ತೆಗೆದಳು.

"ಅದಿರ್ಲಿ, ಈ ಶಿವುರಾಮೆಗೌಡನಿಗ್ಯಾಕೆ ಟಿಕೇಟ್ ಸಿಗಲಿಲ್ಲಾ?" ಎಂದ ಸೀರ.

"ಅವುನು ಯರಡಸತಿ ಸೋತಿದ್ನಂತೆ. ಅಮ್ಯಾಲೆ ಕಳದ್ಯಲಕ್ಷನ್ನಲಿ ಕ್ಯಾಬರೆ ಡ್ಯಾನ್ಸ್ ಮಾಡಿಸಿದ್ನಂತೆ. ಅದ ಸೋನಿಯಾಗಾಂಧಿನೆ ನೋಡಿದ್ಲಂತೆ. ಅದ್ಕೆ ತಿಕೇಟ್ ಕೊಡಲಿಲ್ಲವಂತೆ."

"ಮತ್ತೆ ತಿಕೇಟ್ ಮಾರಿಕಂಡ್ರು, ಅದ್ಕೆ ನನಿಗೆ ಸಿಗಲಿಲ್ಲ ಅಂದನಲ್ಲಾ?"



"ತಿಕೀಟ ಮಾರಿಕಂಡಿದ್ರೆ ತಗುಡರಿಗಿಂತ ಜಾಸ್ತಿ ದುಡ್ಡು ಕೊಟ್ಟು ಇವುನೆ ತಗಬೇಕಾಗಿತ್ತಲ್ಲೊ ಮಾವ?"

"ಏನಪ್ಪ ಅಂಗಂದ, ನಾನು ನಿಜ ಅನ್ನಕಂಡು ಸುಮ್ಮನಾದೆ. ತಿಕೀಟು ಸಿಗಲಿಲ್ಲ ಅಂತ ಪಾರ್ಟಿನ ಬುಟ್ಟು ಹೋದನಂತೆ."

"ಎಲ್ಲಿಗೋದನೊ ಮಾವ? ಕೊತ್ತಿ ಮುನಿಸಿಗಂಡು ಇತ್ಲುಕಡಿಕೋಗಿ, ಕತ್ಲಾದ ಮ್ಯಾಲೆ ಮನಿಗೆ ಬತ್ತಂತೆ. ನೋ...
ಯಸ್ಟೊ ಕಿಸ್ನ ಅವುನ ತಲೆ ಸವುರಿ ಸುಮ್ಮನೆ ಮಾಡಿದ್ದ...

"ಯಸ್ಟೊ ಕಿಸ್ನನೂ, ಶಿವುರಾಮೇಗೌಡನ ಆ... ಕ್ಲೋಸ್ ಫ್ರೆಂಡು ಕಣೊ ಉಗ್ರಿ. ಅದೂ ಅಲ್ದೆ... ಶಿವರಾಮೇಗೌಡ ಹೇಳಿದ ಕ್ಯಲಸನ್ಯಲ್ಲ ಮಾಡಿಕೊ... ಅದೇ ದ್ಯಾವೇಗೌಡನತ್ರಕೋದ್ರೆ ರೇವಣ್ಣ ಕುಮಾ... ಚಾಕ್ರಿ ಮಾಡಬೇಕು. ಅದ್ಕೆ ಶಿವುರಾಮು ಯ... ಕೃಷ್ಣನತ್ರಕೋದ" ಎಂದು ಹೇಳಿಕೊಂಡು ವಾಟಿಸ್ಕೆ ಬ...
ಅವನನ್ನು ನೋಡಿದ ಕೂಡಲೇ ಜು...

"ಸಿಕಾರಿಪುರಕ್ಯಾವಾಗೋದೀ...
ಎಂದಳು.

"ಹೋಗದಿಲ್ಲ ಕಣಕ್ಕ. ನಂ ಗು... ಹೊರಗಿನ ಕಾರ್ಯಕರ್ತರ ನೆಸೆಸಿಟಿನೆ... ಅವುನು ಕರಸದೂ ಇಲ್ಲ, ಎದು... ಕಡೆಯಿಂದ ಏನಾದ್ರು ತೋಳು... ತೋರಸೋರಿದ್ರೆ ಒಂದಿಷ್ಟು ಜನ ರ... ಕರುಂಷ್ಟನಪ್ಪೆಯಣಾ. ... ಹೋಗಬೇಕಾಯ್ತದೆ."

"ನೀನ್ಯಾವ ರೌಡಿ ಹೋಗಕ್ಕೆ?"

"ರೌಡಿಗಳು ಇರೋ ಜಾಗಕ್ಕೆ ಕೆ... ವೆಪನ್ಸ್ ಸಪ್ಲೆ ಮಾಡಬೇಕಾಯ್ತದೆ ಕ... ಪರೇಸ್‌ಜಾಪಲ್, ಡ್ರಿಂಕ್ಸು, ಮಟ... ಚಿಕನ್ನು, ಸಿಗರೇಟ್, ಕೂಲ್ ಡ್ರಿಂಕ್ಸ್ ಇವುನ್ನಲ್ಲ... ಮಾಡುವಾಗ ನಮ್ಮಂಥೋರ ಹೆಲ್ಪು ಬೇಕಾಯ್ತದೆ. ... ನಮ್ಮಂಥೋರ ನೆಸೆಸಿಟ ಮುಖ್ಯ."

"ಅಂಗೆ ಡ್ರಿಂಕ್ಸು, ಪಂಕ್ಸು ಸಪ್ಲೈ ಮಾಡಕೊ... ಸಿಗಾಯ್ಕಂಡಿಯ ಕಣೊ. ಹಿಡುದು ವಳಿಕಾಕ್ತರೆ."

ದೇವವಂಶಕ್ಕೆ ಮಹಿಳೆಯರ ಕಾಟ!

ರಾಜಕೀಯ ಪಕ್ಷಗಳು ಪ್ರಣಾಳಿಕೆ ಬಿಡುಗಡೆ ಮಾಡಿವೆ.

ಏನು ಅದರ ಉದ್ದೇಶ?

ಪ್ರಣಾಳಿಕೆಗೂ ಉದ್ದೇಶ ಅಂತ ಇರುತ್ತಾ, ಏನೋ ಸಂಪ್ರದಾಯ, ಮಾಡಬೇಕಲ್ಲ ಅಂತ ಮಾಡಿದಾರೆ ಅಂತಾರೆ ಕೆಲವು ಪಕ್ಷದ ನಿಷ್ಠಾವಂತ ಕಾರ್ಯಕರ್ತರು. ಇರಬಹುದೋ ಏನೋ. ಬಿಡುಗಡೆಯವರೆವಿಗೆ ಮಾತ್ರ ಅದಕ್ಕೆ ಬೆಲೆ. ಆಮೇಲೆ? ಆಮೇಲೂ ಇರುತ್ತೆ ರದ್ದಿ ಕಾಗದದ ಬೆಲೆ!

ಬೇರೆ ಸಮಯಗಳಲ್ಲಿ ಮತದಾರ ಮಹಾಪ್ರಭು ರಾಜಕಾರಣಿಗಳಿಗೆ ನೀಚ ಜಂತುಗಳಂತೆ ಕಾಣಿಸಿರಬಹುದು. ಚುನಾವಣೆ ಸಮಯ ಅಲ್ಲವ. ಆ ಜಂತುವಿಗೂ ಒಂದು ಓಟು ಅಂತ ಇರುತ್ತದಲ್ಲಾ, ಅದಕ್ಕೇ ಅವನ್ನ ಆಸೆ ಆಮಿಷಗಳೆಂಬ ಬಲೂನಿನಲ್ಲಿ ಹಾರಿಸಿ ಆಕಾಶ ಒಂದೇ ಗೇಣು ಅನ್ನುವ ಭ್ರಮೆ ಮೂಡಿಸುವುದು ಅನಿವಾರ್ಯವಾಗುತ್ತೆ. ಕಲರ್ ಟಿವಿ ಕೊಡ್ತೀವಿ, ಕೆಜಿ ಅಕ್ಕೀನ ಎರಡು ರೂಪಾಯಿಗೇ ಮನೆ ಬಾಗಿಲಿಗೇ ಒದಗುಸ್ತೀವಿ, ಗಂಡ ಸತ್ತಾಗ ಮಾತ್ರ ಅಲ್ಲ, ಅವನು ಬದುಕೇ ಇದ್ರೂ ವಿಚ್ಛೇದನ ಅಂತ ಒಂದು ಆದರೆ ನಾಲ್ಕು ನೂರು ರೂಪಾಯಿ ಮಾಸಾಶನ ಕೊಡ್ತೀವಿ ಹಾಗೆ ಹೀಗೆ ಅಂತ ಬುರುಡೆ ಬಿಡ್ತವೆ. ಇತ್ತೀಚೆಗೆ ಗಂಡಂದಿರಿಗೆ ಹೆಂಡತಿಯರ ಕಾಟಾ ತಾರಾಮಾರಾ ಹೆಚ್ಚಾಗಿದೆಯಂತೆ. ಇಂತಹ ಹೆಂಡತಿ ಪೀಡಿತ ಗಂಡಂದಿರಿಗೂ ಸೌಲಭ್ಯ ವಿಸ್ತರಿಸಲಾಗುತ್ತದೆಯೋ ಎಂಬುದು ತಿಳಿದು ಬಂದಿಲ್ಲ. ಒಂದು ವೇಳೆ ಈ ಪ್ರಣಾಳಿಕೆಯಲ್ಲಿ ಅದನ್ನು ಸೇರಿಸದೇ ಇದ್ದರೂ ಮುಂದಿನ ಚುನಾವಣಾ ಪ್ರಣಾಳಿಕೆಯಲ್ಲಿ ಅದು ಬರುವುದೆಂದು ಆಶಿಸೋಣ. ಪ್ರಣಾಳಿಕೆ ಆಶ್ವಾಸನೆಗಳೆಲ್ಲ ಜಾರಿಗೆ ಬಂದೇಬಿಟ್ಟರೆ, ಒಂದೊಂದು ಖಾತರಿ. ಹೆಸರಿಗೆ ಮಾತ್ರ ವಿಚ್ಛೇದನ ಪಡೆದು, ನಗುನಗುತಾ ಸಂಸಾರ ಮಾಡುವ ಗಂಡ-ಹೆಂಡತಿಯರ ಸಂಖ್ಯೆ ಸುಮಾರಷ್ಟಿರುವುದನ್ನು ಕಾಣುವ ಭಾಗ್ಯ ನಮ್ಮದಾಗಿರುತ್ತದೆ!

ಕಳೆದ ಚುನಾವಣೆಯಲ್ಲಿ ಎಸ್.ಎಂ. ಕೃಷ್ಣ ಅವರು ನಿರುದ್ಯೋಗಿ ಯುವಕ ಯುವತಿಯರಿಗೆ ಐದುನೂರು ಮಾಸಾಶನ ನೀಡ್ತೀವಿ ಅಂತ ಸಾರಿದ್ದರು. ಆದು ನಿರುದ್ಯೋಗಿ ಯುವಜನತೆಯನ್ನು ಮುಟ್ಟಲೇ ಇಲ್ಲವೋ ಅಥವಾ ಈ ದೇಶದಲ್ಲಿ ನಿರುದ್ಯೋಗ ಅನ್ನೋದೇ ಇಲ್ಲವೋ, ಆ ಪಕ್ಷ ಅಧಿಕಾರದ ಅಂಚಿಗೆ ಬರಲೂ ಸಾಧ್ಯವಿಲ್ಲವಾಯಿತು.

ಈ ವರ್ಷ ಭಾರತೀಯ ಜನತಾ ಪಕ್ಷ ಅವರಿಗಿಂತ ಒಂದು ಹೆಜ್ಜೆ ಮುಂದೆಹೋಗಿದೆ. ಇಂತಹ ಯುವಕ ಯುವತಿಯರಿಗೆ ಒಂದು ಸಾವಿರದ ಐದುನೂರು ರೂಪಾಯಿ ಕೊಡ್ತೀವಿ ಅಂತ ಪ್ರಣಾಳಿಕೆಯಲ್ಲಿ ಹೇಳಿದೆ. ಕಳೆದ ಸಲದ ಫಲಿತಾಂಶವೇ ಮರುಕಳಿಸಿದರೆ ಭಾಜಪ ಅನ್ನೋದು ಕಾಂಗ್ರೆಸ್ ಆಗುತ್ತಾ ಅಂತ.....

ಚುನಾವಣಾ ಪ್ರಣಾಳಿಕೆ ಪರಾಂಭರಿಸಿದರೆ....

ವಾಸಕ್ಕೆ ಮನೆ

ಊಟಕ್ಕೆ ಅಕ್ಕಿ


ಮನರಂಜನೆಗೆ ಕಲರ್ ಟಿವಿ

ಖರ್ಚಿಗೆ ಒಂದು ಸಾವಿರದ ಐದುನೂರು ರೂಪಾಯಿ

......

....

....



ಹೀಗೆಲ್ಲ ದೊರೆತರೆ..... ಚುನಾವಣೆಗಳು ಸೋಮಾರಿಗಳನ್ನ ಸೃಷ್ಟಿ ಮಾಡುತ್ತಿದಾವಾ ಅನ್ನುವ ಅನುಮಾನ ಬರುವುದಿಲ್ಲವಾ....

ಈ ಭಯ ಬೇಕಿಲ್ಲ, ಯಾಕೆಂದರೆ ಇವು ಯಾವವೂ ಕಾರ್ಯಗತ ಆಗಲ್ಲ ಅಂತ ಸಮಾಧಾನದಿಂದ ಇರೋಣ ಅಂದರೆ ಅರುಣ್ ಜೈಟ್ಲಿ ಸಾಹೇಬರು 'ಇದು ಪ್ರಣಾಳಿಕೆ ಯಲ್ಲ, ನಮ್ಮ ಕಾರ್ಯಸೂಚಿ' ಅಂತ ಬೆದರಿಕೆ ಹಾಕ್ತಿವಾರೆ!

ರಾಜಕೀಯ ಪಕ್ಷಗಳು ಹೀಗೆಲ್ಲ ಮಾಡುವುದರ ಬದಲು ಸ್ವಾಭಿಮಾನಿ ಬದುಕನ್ನ ಕಟ್ಟಿಕೊಳ್ಳುವುದಕ್ಕೆ, ಗೌರವ ಘನತೆಯಿಂದ ಜೀವನ ನಡೆಸುವುದಕ್ಕೆ ಮಾರ್ಗೋಪಾಯಗಳನ್ನು ಸೂಚಿಸಬಾರದೆ, ಯೋಚಿಸಬಾರದೆ ಅಂದರೆ.... ಹಾಗೇನಾದರೂ ಮಾಡಿದರೆ, ಮತದಾರ ಕೊಬ್ಬಿ ರಾಜಕಾರಣಿಗಳಿಗೆ ಕ್ಯಾರೇ ಅನ್ನುವುದಿಲ್ಲ ಅನ್ನುವುದು ಅವರ ಅನುಭವದ ಕಥನ ಅಂತೆ! ಅವರ ಮಾತನ್ನ ಕೇಳಿಕೊಂಡು ಬದ್ದಿರಬೇಕಾದರೆ ಜನರು ಬಡತನದಲ್ಲಿಯೇ ಇರಬೇಕು, ಬಡವರು ಹೆಚ್ಚಿದಷ್ಟೂ ಚುನಾವಣೆ ಸಲೀಸು ಎಂಬುದು ಅವರ ಖಚಿತ ಅಭಿಪ್ರಾಯ ಅಂತೆ! ಕೆಲವು ರಾಷ್ಟ್ರ, ರಾಜ್ಯಮಟ್ಟದ ರಾಜಕೀಯ ಮುಖಂಡರು ತಮ್ಮ ಕ್ಷೇತ್ರ ಅಭಿವೃದ್ಧಿಗಾಗಿ ಯಾವ ಕಾರ್ಯಕ್ರಮ ಹಮ್ಮಿಕೊಳ್ಳದಿದ್ದರೂ, ಮದುವೆಗೆ ತಿಥಿಗೆ ಸೋಬನಕ್ಕೆ ಅಂತಹವಕ್ಕೆ ಇಂತಹವಕ್ಕೆ ಎಂದು ಬಂದವರಿಗೆ ಕೊಡುಗೈ ದೊರೆಯಂತೆ ಒಂದಿಷ್ಟು ಹಣ ಬಿಸಾಕಿ, ಚುನಾವಣೆಯಲ್ಲಿ ಗೆಲ್ಲುತ್ತಲೇ ಬಂದಿರುವುದನ್ನು ಉದಾಹರಣೆಯಾಗಿ ನೀಡುತ್ತಾರೆ.

ಬಡತನ ಒಂದು ಶಾಪ. ಸಾಯುವವರೆವಿಗೂ ಬಡವನಾಗಿಯೇ ಇರುವುದು ಮೂರ್ಖತನ. ಹೀಗೆ ಮುಂದುವರೆಯುತ್ತಿರುವ ವ್ಯವಸ್ಥೆಯನ್ನು ಬದಲಾಯಿಸಲು ಇರುವ ಒಂದು ಪ್ರಬಲ ಅಸ್ತ್ರ-ಚುನಾವಣೆ. ಅದನ್ನು ಸಮರ್ಪಕವಾಗಿ ನಿರ್ವಹಿಸೋಣ ಅಂದರೆ ದೇವರುಗಳ ಅಡ್ಡಿ! ಅಧಿಕಾರಕ್ಕೆ ಬಂದು ಈ ದೇಶವನ್ನು ಈಗಿನಂತೆಯೇ ಇಡಲು ದೇವೇಗೌಡರು ಕಂಡಕಂಡ ದೇವರಿಗೆಲ್ಲ 'ಚಂಡಿಕಾ ಹೋಮ' ಮಾಡ್ತಾ ಇವಾರೆ. ಜನರ ಹಿಂದುವರಿಕೆಗಾಗಿ ಬಿ.ಎಸ್. ಯಡಿಯೂರಪ್ಪ ಅವರು ಶ್ರೀರಂಗಪಟ್ಟಣದ ಚಂದ್ರವನದಲ್ಲಿ ಹೋಮ ಮಾಡಿಸಿದರು. ಬೆಂಕಿ ಮಹಾದೇವು ಯಡಿಯೂರಪ್ಪನವರನ್ನು ಮುಖ್ಯಮಂತ್ರಿ ಮಾಡಲೇಬೇಕೆಂದು ದೇವರಿಗೆ ಹೋಮ ಮಾಡಿದಾರೆ. ಬಿಎಸ್‌ಪಿಯವರೇನೂ ಹಿಂದೆ ಬಿದ್ದಿಲ್ಲ, 'ಉತ್ತಮ ಆಡಳಿತ ಕೋರಿ' ಪಿ.ಜಿ.ಆರ್. ಸಿಂಧ್ಯಾ ಅವರು ಅದೇ ಚಂದ್ರವನದಲ್ಲಿ ಹೋಮ ಮಾಡಿಸಿದ್ದಾರೆ. ಈ ಹೋಮದ ಹೊಗೆ ರಾಜ್ಯವನ್ನೆಲ್ಲ ಆವರಿಸಿದೆ! ದೇವರುಗಳಿಗೇ ಗೊಂದಲ ಉಂಟಾಗಿದೆ. ಹಣದ ರೂಪದಲ್ಲಿ ಬಂದು ಒಂದು ಸಲ ಅವರಿಗೆ ಮತ ಚಲಾಯಿಸಿ ಅಂತಾನೆ, ಇನ್ನೊಂದ್ಸಲ ಇವರಿಗೆ ಮತ ಕೊಡಿ ಅಂತಾನೆ. ಮತ್ತೊಂದ್ಸಲ ಇವರ‍್ಯಾರಿಗೂ ಬ್ಯಾಡ ಬೇರೆಯವರಿಗೆ ಕೊಡಿ ಅಂತಾನೆ. ಹೀಗಾಗಿ ಮತದಾರನೂ ಈ ಹಾಳು ಹಣದ ರೂಪದ ದೇವರಿಂದಾಗಿ ಗೊಂದಲದ ಗೂಡಾಗಿದ್ದಾನೆ.

ಮಹಿಳಾ ಮತದಾರರದ್ದೇ ಒಂದು ವೈಶಿಷ್ಟ್ಯ...

ಮೊಳಕಾಲು ಕೆಳಗೆ ಬುದ್ಧಿ ಇರುವ ಈ ಹೆಂಗಸರ... ನಿರ್ನಾಮ ಮಾಡಬೇಕು ಅಂತ ಪ್ರಬುದ್ಧ ಜನತೆ ಏನೇನ... ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು.

ಹೆಣ್ಣುಭ್ರೂಣ ಹತ್ಯೆ ಮಾಡಿತು.

ವರದಕ್ಷಿಣೆ ಸಾವು ತಂದಿತು.

ಕಿರುಕುಳ ನೀಡಿ ಸಾಯಿಸಿತು.

ಇಂತಹ ಎಷ್ಟೋ ಪ್ರಯೋಗಗಳನ್ನು ಯಶಸ್ವಿಯ... ಮಾಡಿ, ಈಗಲೂ ಮುಂದುವರೆಸಿದ್ದರೂ ಅವರ ಸ... ಬಹಳವಾಗಿ ಪುರುಷ ಸಮಾನವಾಗಿಯೇ ಉಳಿದಿ... ಮಹಿಳಾ ಪಿಂಡ ಅಷ್ಟೊಂದು ಗಟ್ಟಿ! ಹಾಳಾಗ... ಮುಂದೇವು, ಹೆಂಗೋ ತಿಂದುಕೊಂಡು ಬದ್ದಿರಲಿ, ಅ... ಸಹವಾಸವೇ ಬೇಡ ಅಂತ ಇದ್ದು ಬಿಡೋಣ ಅಂ... ಹಾಳಾದ ಚುನಾವಣೆಗಳಲ್ಲಿ-ಧೀರೋದಾತ್ತ ಪುರುಷನಿ... ಒಂದೇ ಮತ! ಇವಕ್ಕೂ ಒಂದು ಮತ! ಮಂಡಿ ಕೆಳ... ಬುದ್ಧಿಯ ಇವರನ್ನು ಒಲಿಸಿಕೊಳ್ಳಲು ಅನಿವಾರ್ಯ. ಆ...

ಅಣಕ

■ ಎಚ್.ಎಲ್. ಕೇಶವಮೂ...

'ನೀತಿ ಸಂಹಿತೆ' ಹಿಂಸೆ!

ಚಿಕ್ಕಮಗಳೂರಿನ ಪ್ರಚಂಡ ನಾಯಕ ಸಿ.ಟಿ. ... ಹೂಡಿದರು ಒಂದು ಹೂಟ!

'ಮಾತೃ ಸಂಗಮ'

ಅದ್ದೂರಿಯ ಕಾರ್ಯಕ್ರಮ.

ಚುನಾವಣೆ ಸಮಯದಲ್ಲೇ ಆಗಬೇಕಿತ್ತೆ ಈ ಸಂಗ... ಮಾತ್ರ ಎಂದರೆ ಯಾರು? ಅವರು ಎಲ್ಲರಿಗೂ ತಾಯಿ... ಸಮಾನರೆ? ಸಂಗಮಕ್ಕೆ ಬಂದಿದ್ದ ಅವರ ಗಂಡಂದಿರ... ಅವರು ಮಾತೃವೆ? ಚಿಕ್ಕ ಹುಡುಗಿಯರೂ ತಾಯಂದಿ... ಇಂತಹ ಪ್ರಶ್ನೆಗಳು ಅಪ್ರಸ್ತುತ.

ಯಾಕೆ ಬಂದರು ಈ ತಾಯಂದಿರು ಈ ಸಂಗಮ...

ಅರಿಶಿನ, ಕುಂಕುಮ, ಬಳೆ, ರವಿಕೆ ಕಣ ಪಡೆಯಲ...

ಇದು 'ನೀತಿ ಸಂಹಿತೆ' ಉಲ್ಲಂಘನೆಯೆ?

ಅಲ್ಲ! ಇದು ಹಿಂದೂ ಸಂಪ್ರದಾಯ!

ಮುಶ್ತಲ್ ಉಗ್ರಿ, ಯಲಕ್ಷನ್ನಲಿ ಹಿಡಿಯೋ ಸಾಮಗ್ರಿ ಕೇಸುಗಳು ಏನಾಯ್ತದೆ ನನಗೂ ಗೊತ್ತು ಕಣೊ. ಇಲ್ಲಿವರಿಗೂ ನೃಡದಿರೋ ಚುನಾವಣೆಲಿ ಸ್‌ನೋರು ಎಷ್ಟು ಲಾರಿ ಸಾಮಗ್ರಿ ಹಿಡಿದವುರೆ ಗೊತ್ತ? ಸೀರೆ, ಕ್ಯಾಶು ಹಿಡಿದ್ರು. ಕಳಿಸಿದ್ರೋನು. ತಗಂಡೋಗ್ತ ಮಾಲ್ ಸಮೇತ ನು ಯಾರ ಮ್ಯಾಲೂ ಕೇಸಾಗಿಲ್ಲ, ಫನಿಶ್‌ಮೆಂಟ್ ಆಗಿಲ್ಲ, ಅದೆಲ್ಲ ಷ್ಟು ರೀಸೆಂಟಾಗಿ ಚಾಮುಂಡೇಶ್ವರಿ ಎಲೆಕ್ಷನ್‌ನಲ್ಲಿ ಖರ್ಗೆ ಕ್ಯಾಶ್ ತ ಸಿಕ್ಕಿದ. ಏನಾಯ್ತು? ಕುಮಾರಸ್ವಾಮಿ ಟಿಫನ್ ಬಾಕ್ಸ್ ಸಮೇತ ಏನಾಯ್ತಪ್ಪ?"

ಟಿಫನ್ ಬಾಕ್ಸಲ್ಲಿ ಏನಿತ್ತ?"

ಉಪ್ಪಿಟ್ಟು ಇತ್ತು ಕಣ್ಲಾ!"

ಣಕ ಹೊಡೀಬ್ಯಾಡ! ಸರಿಯಾಗಿ ಹೇಳ್ಲ!"

ಇನ್ನೇನೇಳನಕ್ಕ ಮತ್ತೆ? ಟಿಫನ್ ಬಾಕ್ಸಲ್ಲಿ ಕ್ಯಾಶ್ ಕೊಡುತ್ತಿದ್ದ ಕುಮಾರಣ್ಣ ಮಾಲ್ ಸಮೇತ ಸಿಗಾಕಂಡ. ಏನ್ ಮಾಡ್‌ಕೊಂಡರು ಚುನಾವಣೆ ೋರು! ಏನೂ ಮಾಡಕಳ್ಳಲಿಲ್ಲ. ಆ ಕಾರಣಕ್ಕೆ ಚುನಾವಣೆ ಅಕ್ರಮ ಲೇ ಅವೆ. ಕ್ಯಾಂಡಿಡೇಟು ಯ್ಯಾರಿಗೂ ಕೇರ್ ಮಾಡ್ತಾ ಇಲ್ಲ" ಎಂದ

ನಿಜ ಕಣ್ಲಾ ವಾಟಿಸ್ಸೆ. ನೋಡು ಆ ಬಳ್ಳಾರೀಲಿ ಯಾವನೋ ರೆಡ್ಡಿ ಪತ್ರ ಕೊಡಕ್ಕೆ ಹೋದಾಗ ನೂರಾರು ಟ್ರ್ಯಾಕ್ಟರು ತರಿಸಿದ್ದನಂತೆ. ಟ್ರ್ಯಾಕ್ಟರಿಗೆ ವರೆ ಸಾವಿರ ಬಾಡಿಗೆ ಕೊಟ್ಟಿದ್ದನಂತೆ. ಆದರಲ್ಲಿ ತುಂಬಿಕೊಂಡು ಬಂದ ತಲಾ 2 ಸಾವಿರ ಕೊಟ್ಟನಂತೆ. ವೆಜಿಟೇರಿಯನ್ ತಿನ್ನೋರಿಗೆ ಬಾತು, ್ ಊಟ ಮಾಡೋರಿಗೆ ಬಿರಿಯಾನಿ, ಪ್ರತಿ ಟ್ರ್ಯಾಕ್ಟರಿಗೆ 1 ಕೇಸ್ ಕೊಟ್ನಂತೆ. ಈ ಚುನಾವಣೆ ಉಸ್ತುವಾರಿ ಅಧಿಕಾರಿಗಳು ಏನು ತ್ತಿದ್ದರು ಅಂತ?"

ಬಳ್ಳಾರಿ ರೆಡ್ಡಿಗಳಿಗೆ ಚುನಾವಣೆ ನಡೆಸೋರ ಕೊಂಡುಕೊಳ್ಳೋ ತಾಕತ್ತು ಕಣೋ! ಅದಕ್ಕೆ ಆ ನನ್ನಮಕ್ಕಳು ಕಂಡ್ರು ಕಾಣದಂಗೆ ಇದಾರೇನೋ!"

ಅದೇನಾರ ಹಾಳು ಬಿದ್ದೋಗಲಿ. ಶಿಕಾರಿಪುರದಲ್ಲಿ ನಂ ಬಂಗಾರಿ ಬಂದು ತಿರುಗಾ ಶರಾಪು ಜಾರಿಯಾದರೆ ನಂ ವ್ಯವಹಾರ ವರ್ಕ್‌ಔಟ್ . ಇಲ್ಲಾಂದ್ರೆ ದುಡ್ಡಿದ್ದೆಲ್ಲ ಈ ಬಾಟ್ಲಿ ಡ್ರಿಂಕ್ಸ್‌ಗೆ ಹಾಕಿಹಾಕೀ ನಾವೆಲ್ಲಾ ಕಂಡೀಶನ್‌ಗೆ ಬತ್ತೀವಿ" ಎಂದ ವಾಟಿಸ್ಸೆ.

ಆಗ ಉಗ್ರಿ "ನೋಡೇ ಜುಮ್ಮಿ ಇವನ ಸಮಸ್ಯೆ ಹೆಂಗದೆ?" ಅಂದ.

ಅಯ್ಯೋ ನಿನ್ನ ಸುಳಿ ಹಾಳಾಗ, ಹೋಗು" ಎಂದಳು ಜುಮ್ಮಿ.

ವಿ ಕಾಣದ್ದನ್ನು ಈ ರವಿ ಕಂಡ! ಉಲ್ಲಂಘನೆಯಾಗದಿರುವುದನ್ನು ಕಂಡ ಕಲಿ ರವಿ!

ಚುನಾವಣೆ ವೀಕ್ಷಕರಿಗೆ ಇದು ಬೇರೆ ರೀತಿ ಕಂಡಿತು.

ಮಾತೃ ಸಂಗಮ' ನಡೆದುಹೋಗಿತ್ತು. ಅಲ್ಲಿಂದ ಆಗಲೇ ಬಹಳಷ್ಟು ೃ'ಗಳು ಖಾಲಿಯಾಗಿದ್ದರು. ಸಿಕ್ಕಿಬಿದ್ದವರು ಹತ್ತು ಹನ್ನೆರಡು ಮಂದಿ. ಬಳಿಯಿದ್ದ ಕಣಗಳ ಜಪ್ತಿ! ಆ 'ಮಾತೃ' ಹೃದಯಿಗಳು ಹಿಡಿಶಾಪ ಬೇಕು!

ರಲಿ. ನೀತಿ ಸಂಹಿತೆ ಉಲ್ಲಂಘನೆ ಆಯಿತು. ಒಂದು ಕೇಸೂ ಲಾಯಿತು. ಮತ್ತೆ ಉಲ್ಲಂಘನೆ ನಡೆಯುತ್ತೆ. ಮತ್ತೆ ಕೇಸು ದಾಖಲು: ದರ ಪ್ರಯೋಜನ ಏನು?

ವರಿಗೆ ಶಿಕ್ಷೆಯೇ ಇಲ್ಲವೆ?

ಂದರೆ ಏನಾಯಿತು ನೀನು ಹೊಡೆದ ಹಾಗೆ ಮಾಡು, ನಾನು ಅತ್ತ ಮಾಡ್ತೀನಿ ಅಂದ ಹಾಗಾಯಿತು!

ರಲಿ. ಈಗ ಮಹಿಳೆಯರು ಸುದ್ದಿಯಲ್ಲಿದ್ದಾರೆ. ವದಂತಿ ಕಾರ್ಖಾನೆಗಳು ದನಾ ಕಾರ್ಯಭಾರದಿಂದ ಸಾಗುತ್ತದೆ.

ರಂಗಪಟ್ಟಣದಿಂದ ಅಂಬರೀಷ್ ಕಾಂಗ್ರೆಸ್ ಅಭ್ಯರ್ಥಿ. ಆದರೆ ಇದು ಪತ್ನಿ ಸುಮಲತಾಗೆ ಇಷ್ಟ ಇರಲಿಲ್ಲವಂತೆ!

ಯಾಕೆ ಇಷ್ಟ ಇರಲಿಲ್ಲ?

ಲ್ಲಿ ಸ್ಪರ್ಧಿಸಿದವರ ಹೆಂಡತಿ 'ಮುಂಡೆ' ಆಗುವರಂತೆ!

ಅಂಬರೀಷ್ ನೂರ್ಕಾಲ ಬಾಳಲಿ ಎಂದು ಆಶಿಸೋಣ.

ದೇವವಂಶಕ್ಕೂ ಮಹಿಳೆಯರ ಕಾಟ.

ಳೆದ ಲೋಕಸಭಾ ಚುನಾವಣೆಯಲ್ಲಿ ದೇವೇಗೌಡರನ್ನು ಕನಕಪುರ ಲ್ಲಿ ಪರಾಜಯಗೊಳಿಸಿದ್ದು ಯಾರು? ತೇಜಸ್ವಿನಿ! ಅಂದರೆ ಹೆಂಗಸು!

ಯಾವ ಹೆಂಗಸಾಗಿದ್ದರೂ ಇದೇ ಫಲಿತಾಂಶ ಬರುತ್ತಿತ್ತೊ?

.ಕೆ. ಶಿವಕುಮಾರು ಹನ್ನೆರಡು ಮಹಿಳಾ ಅಭ್ಯರ್ಥಿಗಳ ಜಾತಕವನ್ನು ಷಿಗಳ ಹತ್ತಿರ ಜಾಲಾಡಿಸಿದ್ದರಂತೆ. ಅದರಲ್ಲಿ ಹನ್ನೊಂದು ಜೊಳ್ಳು ಒಂದು ಗಟ್ಟಿ ನಿಂತಿತಂತೆ!

ಕುಮಾರಸ್ವಾಮಿ ಸೋಲಿಸುವವರು ಯಾರು?

ರ್ವ ಹೆಂಗಸು!

ಅಣ್ಣಾ ಸೋಲಿಗೆ ಏನು ಮಾಡಬೇಕು?

ಮಹಿಳಾ ಅಭ್ಯರ್ಥಿ ನಿಲ್ಲಿಸಿ!

ಯಾರ ಸಲಹೆ ಇದು?

ಜ್ಯೋತಿಷಿಗಳದ್ದು!

ದೇವವಂಶಜರು ಜಯಗಳಿಸಿದರೆ?

ಯಾಕೆ ಸೋಲುಂಟಾಯಿತು ಎಂಬುದಕ್ಕೆ ಜ್ಯೋತಿಷಿಗಳನ್ನೇ ಕೇಳಿ!

ಜ್ಯೋತಿಷಿ ಪ್ರಭುತ್ವ!

ಮರೆಯುವ ಮುನ್ನ



■ ಪಿ. ಲಂಕೇಶ್

ಜುಲೈ 29, 1990

ಆ ತಬರ

ಒಂದೇ ಪುಸ್ತಕ ಓದುತ್ತಿರುವ ಬದಲು ಹಲವು ಪುಸ್ತಕಗಳಲ್ಲಿ ತಲೆ ಅದ್ದಿ ಚಿಂತಿಸುತ್ತಿರುವುದು ನನ್ನ ಅಭ್ಯಾಸ. ಮಾರ್ಕ್ವೆಸ್‌ನ 'ಕರ್ನಲ್‌ಗೆ ಯಾರೂ ಕಾಗದ ಬರೆಯುವುದಿಲ್ಲ' (**No one writes to the colonel**) ಎಂಬ ಪುಸ್ತಕವನ್ನು ತಿಂಗಳುಗಳ ಹಿಂದೆಯೇ ಕೊಂಡಿದ್ದರೂ ಓದಲಾಗಿರಲಿಲ್ಲ, ಮೊನ್ನೆ ಕಡಿದಾಳ ಮಂಜಪ್ಪನವರ ಪುಸ್ತಕ ಓದುತ್ತಿದ್ದಾಗಲೇ ಇದನ್ನು ಓದಿದೆ. ನನ್ನ ಅಳಿಯ ಚಿದಾನಂದ ರಾಜಘಟ್ಟ ಬಹಳ ಹಿಂದೆಯೇ ಇದನ್ನು ಓದಲು ಹೇಳಿದ್ದ; ತೇಜಸ್ವಿಯವರ 'ತಬರನ ಕತೆ' ಯಂತೆಯೇ ಇದೆ ಎಂದು ಹೇಳಿದ್ದ. ಓದಿದಾಗ ಎರಡಕ್ಕೂ ಇರುವ ಸಾಮ್ಯ ನೋಡಿ ಆಶ್ಚರ್ಯವಾಯಿತು. ಇದು ತೇಜಸ್ವಿ ಮಾರ್ಕ್ವೆಸ್‌ನಿಂದ ಕದ್ದಿದ್ದಾರೆಂದು ಸೂಚಿಸುವುದಿಲ್ಲ; ಇಬ್ಬರು ಲೇಖಕರು ಒಂದೇ ರೀತಿಯಲ್ಲಿ ಸಂವೇದಿಸುವುದು ಸಾಧ್ಯವಿದೆ. ನನ್ನ 'ವಾಮನ' ಎನ್ನುವ ಕತೆ ಬರೆದ ಎರಡು ವರ್ಷದಲ್ಲಿ ಜಪಾನೀಯನೊಬ್ಬ ಅದೇ ರೀತಿಯ ಕತೆ ಬರೆದ.

ತಬರ ತನ್ನ ಪಿಂಚಣಿಗಾಗಿ ಪ್ರಯತ್ನಿಸಿ ಸರ್ಕಾರದ ನಿರ್ಜೀವ ಫೈಲುಗಳು, ತರಲೆಗಳು, ಪ್ರೊಸಿಜರ್‌ಗಳಲ್ಲಿ ಅಪ್ಪಚ್ಚಿಯಾಗುವುದನ್ನು ಬಲ್ಲಿರಿ. ಕರ್ನಲ್ ಕೂಡ ಹಾಗೆ. ಅವನ ಹೆಂಡತಿಗೂ ಕಾಯಿಲೆ. ಈ ಕರ್ನಲ್ ತನ್ನ ದೇಶದ ಸೈನ್ಯಕ್ಕೆ ಸೇರಿ ಕೆಲವು ವರ್ಷ ಹೋರಾಡಿ ನಿವೃತ್ತನಾದವನು. ಈತ ನಿವೃತ್ತನಾದ ಮೇಲೆ ಸೈನ್ಯದಲ್ಲಿದ್ದ ಬಗ್ಗೆ ಸರ್ಟಿಫಿಕೇಟ್ ಪಡೆಯುವುದಕ್ಕೇ ಪರದಾಡಬೇಕಾಗುತ್ತದೆ. ಇದಕ್ಕೆ ಹಲವು ವರ್ಷ ವ್ಯಯವಾಗುತ್ತವೆ. ಆಮೇಲೆ ಪೆನ್‌ಶನ್ ಬರುತ್ತದೆಂದು ಹೇಳುತ್ತಾರೆ; ಸರ್ಕಾರಗಳು ಬದಲಾಗುತ್ತವೆ, ಸೈನ್ಯದ ದಂಗೆ, ರಕ್ತಪಾತ, ಲಷ್ಕರಿ ಆಡಳಿತ ಇವೆಲ್ಲ ಆಗುತ್ತವೆ. ಕರ್ನಲ್ ತನ್ನ ಪೆನ್‌ಶನ್‌ಗಾಗಿ ಕಾಯುತ್ತ ಹೋಗುತ್ತಾನೆ. ಹೆಂಡತಿಗೆ ಅಸ್ತಮಾ; ಕೈಯಲ್ಲಿ ದುಡ್ಡಿಲ್ಲ, ಆತ ನಿರೀಕ್ಷಿಸಿದ ಕಾಗದ, ಹಣ ಬರುವುದೇ ಇಲ್ಲ, ಪರಿಚಿತರಿದ್ದಾರೆ. ಅವರನ್ನು ಬೇಡಲು ನಾಚಿಕೆ. ಕೋಳಿ ಅಂಕದ ಕೋಳಿಯೊಂದನ್ನು ಸಾಕಿದ್ದಾನೆ. ಮಾರಲು ಇಷ್ಟವಿಲ್ಲ, ಉಪವಾಸ ಮಲಗುತ್ತಾರೆ. ದಿನಾ ಪೋಸ್ಟಾಫೀಸಿಗೆ ಹೋಗಿ ಕಾಗದಕ್ಕಾಗಿ ವಿಚಾರಿಸುತ್ತಾನೆ. ಕಾಗದವಿಲ್ಲ, ಹಣವಿಲ್ಲ.



'ತಬರನ ಕತೆ' ಘಟನೆ, ನಿರೀಕ್ಷಿತ ಆಘಾತಗಳಿಂದ ತುಂಬಿದ್ದರೆ, ಕರುಣೆಯನ್ನು ಉಕ್ಕಿಸುತ್ತಿದ್ದರೆ ಮಾರ್ಕ್ವೆಸ್ ಕತೆಯಲ್ಲಿ ಆತ್ಮಗೌರವಕ್ಕೆ, ಸಹನೆಗೆ, ಘನತೆಗೆ ಒತ್ತುಕೊಡಲಾಗಿದೆ. ಭಿಕ್ಷೆ ಬೇಡಲಾರದ, ಮಾನ ಕಳೆದುಕೊಳ್ಳಲಾಗದ ಕರ್ನಲ್ ಮತ್ತು ಅವನ ಹೆಂಡತಿ ಸಾವಿನ ಎದುರೂ ಬಗ್ಗದೆ ಸಾಯಲು ಸಿದ್ಧರಾಗುತ್ತಾರೆ.

ಜೀವ್ಸ್!



ಅದು ತೀರಾ ಸೀರಿಯಸ್ ಆದ್ದರಿಂದ ಜೊತೆಯಲ್ಲೇ ಎಂದೋ ಓದಿದ್ದ 'ಇನಿಮಿಟ ಬಲ್ ಜೀವ್ಸ್' ತಂದು ಮತ್ತೆ ಓದಿದೆ. ಪಿ.ಜಿ. ಓಡ್‌ಹೌಸ್ ಎಷ್ಟು ಚೆನ್ನಾಗಿ ಬರೆಯುತ್ತಾನೆಂಬುದು ಅನೇಕರಿಗೆ ಗೊತ್ತಿಲ್ಲ. 'ರಿಮೆಯನ್ಸ್ ಆಫ್ ದಿ ಡೇ'ಯ ಬಟ್ಲರ್ ಜೀವನವನ್ನು ಕುರಿತು ಓದಿದ ಮೇಲೆ ಈ ಬಟ್ಲರ್‌ಗಳ ನಿಗೂಢತೆಯನ್ನು ಇನ್ನಷ್ಟು ಕೆದಕುವುದು ಸಹಜ ಅನ್ನಿಸಿತು. ಜೀವ್ಸ್ ಬಟ್ಲರ್, ಬರ್ಟಿ ಯಜಮಾನ. ಬರ್ಟಿ ಇಂಗ್ಲಿಷ್ ಜಂಟಲ್‌ಮನ್ ಆದರೆ ಈತನ ಸೇವಕನೂ ಇವನ ಜಂಟಲ್‌ಮನ್. ಬರ್ಟಿ ತನ್ನ ಒಳ್ಳೆಯತನ, ಹುಡುಗಾಟದಿಂದಾಗಿ ಅನೇಕ ಕಷ್ಟಗಳಲ್ಲಿ ಸಿಕ್ಕಿಹಾಕಿಕೊಳ್ಳುತ್ತಾನೆ; ಆದರೆ ಬರ್ಟಿಗೆ ಗೊತ್ತಿಲ್ಲದಂತೆಯೇ ಜೀವ್ಸ್ ಆತನ ಕಷ್ಟಗಳ ಪರಿಹಾರಕ್ಕೆ ವ್ಯವಸ್ಥೆ ಮಾಡಿರುತ್ತಾನೆ.

ಹದ್ದಿನ ಮೊಗಿನ, ಜಬರ್‌ದಸ್ತ್ ಮುದುಕಿ ಚಿಕ್ಕಮ್ಮ ಮಾರ್ಥಾ ಇದ್ದಕ್ಕಿದ್ದಂತೆ ಬರ್ಟಿಗೆ ಟೆಲಿಗ್ರಾಂ ಕಳಿಸಿ "ಕೂಡಲೆ ಬಾ, ನಿನಗಾಗಿ ಒಂದು ಹೆಣ್ಣನ್ನು ಆರಿಸಿದ್ದೇನೆ!" ಎಂದು ತಿಳಿಸುತ್ತಾಳೆ. ಬರ್ಟಿ ನೆಲಕ್ಕೆ ಕುಸಿದುಹೋಗುತ್ತಾನೆ. ಮದುವೆಯ ದುರಂತಕ್ಕೆ ಅವನು ಸಿದ್ಧನಿಲ್ಲ, ಆದರೂ ಚಿಕ್ಕಮ್ಮನ ಮಾತು ಮೀರುವಂತಿಲ್ಲ, ಹೆದರುತ್ತಲೇ ಜೊತೆಗೆ ಜೀವ್ಸ್‌ನನ್ನ ಕರೆದೊಯ್ಯುತ್ತಾನೆ. ಅಲ್ಲೊಬ್ಬಳು ಹುಡುಗಿ ಮತ್ತು ಅವಳ ಅಣ್ಣ. ಹುಡುಗಿಯನ್ನು ನೋಡಿದ ಬರ್ಟಿ ಕಂಪಿಸುತ್ತಾನೆ; ಚಿಕ್ಕಮ್ಮ ಅವಳ ಕಲ್ಯಾಣ ಗುಣಗಳ ಬಗ್ಗೆ ಲೆಕ್ಚರ್ ಕೊಡುತ್ತಾಳೆ. ಗಲ್ಲುಕಂಬಕ್ಕೆ ಹೋಗಲು ಬರ್ಟಿ ಸಿದ್ಧನಾಗುತ್ತಿದ್ದಾಗಲೇ ಆ ಹುಡುಗಿ ಮತ್ತು ಅವಳ ಅಣ್ಣ ಕಿಸೆಗಳ್ಳರೆಂಬುದನ್ನು ಜೀವ್ಸ್ ತೋರಿಸಿ ಬರ್ಟಿಯನ್ನು ಪಾರು ಮಾಡುತ್ತಾನೆ!

ನೆರಳಿನಂತೆ, ಬೆಳಕಿನಂತೆ, ಬರ್ಟಿಯ ದೇಹದ ಬುದ್ಧಿಯಂತೆ ಕೆಲಸ ಮಾಡುವ ಜೀವ್ಸ್ ಆಧುನಿಕ ಸಾಲೋಮನ್ ಎಂದು ಬರ್ಟಿ ಮತ್ತು ಅವನ ಗೆಳೆಯ ಕೊಂಡಾಡುತ್ತಾರೆ!

ನಮ್ಮ ಕಾನಲ್ಲಿ ಅಮೆರಿಕದ ಹುಲಿ!

■ ಕಲ್ಕುಳಿ ವಿಠಲ ಹೆಗ್ಡೆ



ನಮ್ಮ ಕಾನಿಗೆ ಬಂದು ಸೇರಿದೆ
ಅಮೆರಿಕದ ಹುಲಿ
ಆರ್ಭಟಿಸಿ ನಿಂತಿದೆ: ಆಕಾಶ-ಭೂಮಿ ಒಂದು ಮಾಡಿ
ಇದು ರಾಷ್ಟ್ರೀಯ ಉದ್ಯಾನ
ಅಂತರರಾಷ್ಟ್ರೀಯ ಅಪಶಕುನ

ಹುಲಿ ಮೊರೆತ ಕಾಡಿಗೆ ಒಡನಾಡಿಗೆ
ಅದುರುತಿದೆ ಗೂಡು ನಾಡಿಯ ಬಡಿತಕೆ

ಹುಲಿ ಎಂದರೆ ಹುಲಿ
ನರಭಕ್ಷಕ ಹುಲಿ, ಪಟ್ಟೆ ಚುಕ್ಕಿ ಇಲ್ಲಾ
ಎದೆ ಮೇಲೆ ಪದಕ ಹೆಗಲಲ್ಲಿ ನಕ್ಷತ್ರ
ಬಿಳಿಮೊಗದ ಬಿಲ್‌ಕೊರೆ
ನಳಿಕೆಯಲ್ಲಿ ಉಸಿರಾಟ; ಬಾಯಿಬಿಟ್ಟರೆ ಬಾಂಬು
ಇರಾಕಿನಲ್ಲಿ ಶಾಂತಿ ಸ್ಥಾಪನೆಯಂತೆ,
ರಕ್ತಹೀರುವ ಇಂಬಳ ಔಷಧಿಗೆ ಬೇಕಂತೆ

ಅಮೆರಿಕದ ಬೆಂಕಿ ಹೊಗೆಯ ನುಂಗೀತೆ ನಮ್ಮ ಭಾನು
ಹುಲಿ ಹಾವು ನಾವು ಬದುಕಿದ್ದು
ನಮ್ಮನಮ್ಮ ಪಾಡಿಗೆ ಹಕ್ಕಿಯ ಹಾಡಿಗೆ
ಸಹಬಾಳ್ವೆ

ರಾಶಿರಾಶಿ ಜನರೇ ಒಂದುಗೂಡಲಿಲ್ಲ
ಕಾಡನೀತಿ ಸಾಧುವಲ್ಲ ನರಿಯ ತರ್ಕ
ಎರಡು ಕಾಲಿನವರಿಗಿಲ್ಲ ಜಾಗ, ಹೊರಡಿರೆಲ್ಲ!
ಎಲ್ಲಿಗೆ?

ಆಕಾಶದ ನೀಲ ನಂಬಿ ಅಕೇಶಿಯಾ ಕಾಡಿಗೆ
ನಿತ್ಯಹರಿವ ಝರಿಯ ತೊರೆದು ಹಳಸಿಟ್ಟ ನೀರಿಗೆ
ಕಾಕಿಲಕರಗೀತು ಎಚ್ಚರ
ಹುಲಿಯ ದರ್ಪಕೆ ನರಿಯ ತರ್ಕಕ್ಕೆ ಸೊಪ್ಪು ಹಾಕಿವ

ನಾವು ಬಿಸಾಕ-ಮುಂಡಾನ ಕಡೆಯುವರು
ಟಿಪ್ಪುವಿನ ಪೀಳಿಗೆ

‘ಯಡ್ಡಿ ಬಚ್ಚಿಟ್ಟ ಸತ್ಯಗಳು’ ವರದಿಯನ್ನು ಓದಿ ಆಚ್ಚರಿಯಾಯಿತು. ಐವರು ಮಕ್ಕಳ ತಂದೆಯಾದ, 70 ವರ್ಷ ವಯಸ್ಸಾಗಿರುವ ಈ ಯಡಿಯೂರಪ್ಪನಿಗೆ ಯಾಕೆ ಇಂತಹ ದುರ್ಬುದ್ಧಿ? ಪಾಪ, ತನ್ನ ತಂದೆ, ತಂಗಿ, ಸಹೋದರರನ್ನು ಕಳೆದುಕೊಂಡ ಮೈತ್ರಾದೇವಿ ಕೊನೆಗೆ ಇಂತಹ ಪಾಪಿಷ್ಠನಿಂದಾಗಿ ತನ್ನ ಜೀವವನ್ನೇ ಕಳೆದುಕೊಂಡಿದ್ದು ಒಂದು ದುರಂತವೇ ಸರಿ.



ಮೈತ್ರಾದೇವಿಯವರ ದುರಂತಮಯ ಬದುಕಿನ ಬಗ್ಗೆ ಅಕ್ಟೋಬರ್ 2004 ರಲ್ಲಿ ಓದಿದಾಗಲೇ ನನಗೊಂದು ಪ್ರಶ್ನೆ ಕಾಡಿತ್ತು, ಅದೇನೆಂದರೆ ಲಿಂಗಾಯತರು ಮೃತರನ್ನು ಮಣ್ಣು ಮಾಡುತ್ತಾರೆಯೇ ಹೊರತು, ಅಗ್ನಿಗೆ ಒಡ್ಡುವುದಿಲ್ಲ. ಆದರೆ ತಾನು ಪರಮ ಲಿಂಗಾಯತ ಎಂಬಂತೆ ಬಿಂಬಿಸಿಕೊಳ್ಳುವ ಯಡಿಯೂರಪ್ಪ ಅಂದು ತನ್ನ ಮೃತ ಮಡದಿ ಮೈತ್ರಾದೇವಿಯವರನ್ನು ಅಗ್ನಿಗೆ ಒಡ್ಡಿದರೇ ಹೊರತು ಮಣ್ಣು ಮಾಡಲಿಲ್ಲ, ಯಾಕೆ?



ಮೈತ್ರಾದೇವಿಯವರದ್ದು ಸಹಜ ಸಾವಲ್ಲ, ಬದಲಾಗಿ ಕೊಲೆ ಎಂಬುದು ಮುಂದೊಂದು ದಿನ ಬಹಿರಂಗವಾಗಬಹುದೆಂಬ ಭಯ ಯಡ್ಡಿಗಿತ್ತೇ?

ಯಡ್ಡಿಯಂತೆಯೇ ಇತರೆ ಚೆಡ್ಡಿಗಳೂ ಎಂಥ ಮೋಸಗಾರರು ಎಂಬುದಕ್ಕೆ ಹಲವಾರು ಉದಾಹರಣೆಗಳು ಸಿಗುತ್ತವೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಾಜಪೇಯಿ ಭಾಗವಹಿಸಿದ್ದರು ಎಂದು ಹೇಳುವುದು, ಬಾಬ್ರಿ ಮಸೀದಿಯನ್ನು ರಕ್ಷಿಸುತ್ತೇವೆ ಎಂದು ಸುಪ್ರೀಂಕೋರ್ಟಿಗೆ ಮುಚ್ಚಳಿಕೆ ಬರೆದು ಕೊಟ್ಟಿದ್ದರೂ ಅದನ್ನು ಕೆಡವಿದ್ದು, ಗುಜರಾತಿನಲ್ಲಿ ಅಲ್ಪಸಂಖ್ಯಾತರ ಮಾರಣಹೋಮ ನಡೆಸಿದ್ದು...

ಇವೆಲ್ಲ ದೇವರು, ಧರ್ಮ, ನೀತಿ, ಮಾನವೀಯತೆ. ಸಭ್ಯತೆಯನ್ನು ಹೊಂದಿರುವವರ ವರ್ತನೆಯೇ?

ಇಂತಹ ಜನರು ಯಾವುದೇ ಕಾರಣಕ್ಕೂ ರಾಜ್ಯದಲ್ಲಿ ಅಧಿಕಾರಕ್ಕೆ ಬಾರದಂತೆ ತಡೆಯುವುದು ಇವತ್ತು ಸಮಸ್ತ ಕನ್ನಡಿಗರ ಜವಾಬ್ದಾರಿಯಾಗಿದೆ.

-ಡಿ.ಎಲ್. ನಾಗರಾಜ್, ಹರಪನಹಳ್ಳಿ

‘ಹಿಂಸೆಗೆ ಒಂದು ಮಾನವೀಯ ಉತ್ತರ’ ಎಂಬ ಶೀರ್ಷಿಕೆಯಲ್ಲಿ 30.4.08 ರ ‘ಲಂಕೇಶ್’ನಲ್ಲಿ ಮೂಡಿಬಂದ ನಿಮ್ಮ ಸಂಪಾದಕೀಯ, ಇತ್ತೀಚೆಗೆ ನೀವು ಬರೆದ ಸಂಪಾದಕೀಯಗಳಲ್ಲಿ ಅತಿ ಉತ್ತಮವಾದುದೆಂದು ನಾನು ಭಾವಿಸುತ್ತೇನೆ. ಮಾನವೀಯ ದೃಷ್ಟಿಯಿಂದ ಹಿಂಸೆ ಮತ್ತು ದ್ವೇಷಗಳನ್ನು ದೂರವಿಡಲು ಪ್ರಿಯಾಂಕ ವಾದ್ರರವರು ಮಾಡಿದ ಈ ಪ್ರಯತ್ನವನ್ನು ಶಾಂತಿಪ್ರಿಯರೆಲ್ಲರೂ ಮೆಚ್ಚಲೇಬೇಕು. ಅದನ್ನು ಕುರಿತು ಬರೆದ ನೀವು ನಿಜಕ್ಕೂ ಅಭಿನಂದನೆಗಳಿಗೆ ಅರ್ಹರು.

‘ಗೇಲಿ ಮಾಡಲಾಗದ ಕಾಳಜಿಗಳ ರವಿಕೃಷ್ಣ ರೆಡ್ಡಿ’ ಎನ್ನುವ ಬರವಣಿಗೆ ಕೂಡಾ ಉತ್ತಮವಾಗಿ ಮೂಡಿಬಂದಿದೆ.

-ಪ್ರೊ. ಎಸ್. ಜೇಕಬ್, ಬೆಂಗಳೂರು



“ಹಿಂದೂ ನಾಯಕರ ಬಗ್ಗೆ ಕೀಳಾಗಿ ಬರೆದ್ರೆ ಕೊಲ್ತೇನೆ. ಜೊತೆಗೆ ಕಾರ್ನಾಡ್, ಅನಂತಮೂರ್ತಿಯವರನ್ನು ಕೂಡ” ಎಂದ ಮುಖೇಡಿಯಾಗಲೀ, ಶ್ರೀರಾಮ ದಿವಾಣರ ಮೇಲೆ ‘ತೆಗೆದು ಬಿಡಿ’ ಎಂದು ‘ಫತ್ವಾ’ ಹೊರಡಿಸಿದವರಾಗಲೀ, ಇವರೆಲ್ಲ ಹಿಂದೂತ್ವದ ಕೊಳಕು ಮುಖಗಳೇ ವಿನಃ ನೈಜ ಹಿಂದೂಗಳ ಪ್ರತಿನಿಧಿಗಳೆನಿಸಲಾರರು.

ಹಿಂದೂತ್ವ ಕೇವಲ ಹೊಡಿ ಬಡಿ ಕೊಲ್ಲು ಎನ್ನುವವರಿಂದ ಉಳಿದು ಬೆಳೆಯಿತು ಎಂದುಕೊಂಡರೆ ಅದೊಂದು ಭ್ರಮೆಯಷ್ಟೇ. ಇಡೀ ಜಗತ್ತೇ ಹಿಂದೂತ್ವದ ಕಡೆಗೆ ನೋಡುವಂತೆ ಮಾಡಿದ ಸ್ವಾಮಿ ವಿವೇಕಾನಂದರು ಚೂರಿ, ಚಾಕು, ತ್ರಿಶೂಲ ಹಿಡಿದು ತಿರುಗಿದರೆ? ಹೊಡಿ ಬಡಿ ಕೊಲ್ಲು ಎಂದರೇ? ವಿದೇಶಿಯರಿಗೆ ಹಾಗು ದೇಶದ ಬಹುಸಂಖ್ಯಾತರಿಗೆ ಮುತಾಲಿಕ್, ತೊಗಾಡಿಯಾ, ಠಾಕ್ರೆ, ಮೋದಿಯಂತ so called ಹಿಂದೂ ನಾಯಕರುಗಳೆಲ್ಲ ಹಿಟ್ಲರ್, ಇದಿ ಅಮೀನ್ ನಂಥವರ ಪಟ್ಟಿಯಲ್ಲಿ ಸೇರಲು ಲಾಯಕ್ಕಾಗುವವರಂತೆ ತೋರುತ್ತಾರೆಯೇ ವಿನಃ ಆದರ್ಶ ನಾಯಕರಾಗಿ ಅಲ್ಲ.



ಬಹುಶಃ ಗೌರಿ ಲಂಕೇಶ್, ಕಾರ್ನಾಡ್, ಅನಂತಮೂರ್ತಿ, ಶ್ರೀರಾಮ ದಿವಾಣರಂಥವರು ನಮ್ಮ ಕುತರ್ಕ ವಿಶಾರದ ಚಿದಾನಂದಮೂರ್ತಿಯವರಂತೆ ಇವರ ಅಸಂಬದ್ಧಗಳಿಗೆಲ್ಲ ತಮ್ಮ ವಿತಂಡ ವಾದಗಳಿಂದ ಬೆಂಬಲ ನೀಡುವಂತವರಾಗುತ್ತಿದ್ದರೆ ಈ ಕೊಲೆಗಾರರ ಪಡೆಗೆ ಇವರೆಲ್ಲ ಗ್ರೇಟ್ ಆಗಿ ತೋರುತ್ತಿದ್ದರು. ಆದರೆ ಇಂತಹವರಿಂದ ಹೊಗಳಿಸಿಕೊಳ್ಳಬೇಕಾದ ದೌರ್ಭಾಗ್ಯ ಬಾರದಿರುವುದು ನಮ್ಮೆಲ್ಲ ಪ್ರಜ್ಞಾವಂತರ ಸೌಭಾಗ್ಯ.

ಏ. 23 ರ ಸಂಚಿಕೆಯಲ್ಲಿ ಕೇಶವಮೂರ್ತಿಯವರು ತಮ್ಮ ‘ಅಣಕ’ದಲ್ಲಿ ಬರೆದಂತೆ ಶಕುಂತಲಾ ಶೆಟ್ಟಿ ಬಿಜೆಪಿಯಿಂದ ನಿಲ್ಲದಂತಾಗಲು ಅವರು ಪಕ್ಷಾಧ್ಯಕ್ಷ ಸದಾನಂದಗೌಡರ ಆಜ್ಞಾನುವರ್ತಿಯಾಗದಿರುವುದೇ ಕಾರಣ. ಯಾಕೋ ಸದಾನಂದ ಗೌಡರ ಇತ್ತೀಚಿನ ನಿಲುವುಗಳು ಅವರ ಊರಿನಲ್ಲೇ ಹಲವರ ಅಸಮಾಧಾನಕ್ಕೆ ಕಾರಣವಾಗಿದೆ. ಉದಾ: ಪುತ್ತೂರಿನ ಇತಿಹಾಸದಲ್ಲೇ ಅತ್ಯಂತ ದಿಟ್ಟ ನಿಲುವಿನ ಜನಾನುರಾಗಿ ಸಹಾಯಕ ಕಮಿಷನರ್ ಬಗ್ಗೆ ಸಾರ್ವಜನಿಕವಾಗಿ ಹೀನಾಯವಾಗಿ ಹೇಳಿಕೆ ನೀಡಿದ ಬಗ್ಗೆಯಾಗಲೀ, ಮಲ್ಲಿಕಾ ಪ್ರಸಾದ್‌ಗೆ ಇಷ್ಟವಿಲ್ಲದಿದ್ದರೂ ಬಲವಂತವಾಗಿ ಶಕುಂತಲಾರ ಬದಲಿಯಾಗಿ ಅವರನ್ನು ನಿಲ್ಲಿಸಿ ಶಕುಂತಲಾರನ್ನ ಮೂಲೆಗುಂಪು ಮಾಡುವ ಹುನ್ನಾರವಾಗಲೀ, ತೀವ್ರ ಆಕ್ಷೇಪಕ್ಕೆ ಕಾರಣವಾಗಿದೆ. ಪುತ್ತೂರಿನ ಕಂಬಳಕ್ಕೆ ಶಕುಂತಲಾ ಹೋಗಿದ್ದೇ ತಪ್ಪೆನ್ನುವುದು ಹೌದಾದರೆ ಕಳೆದ ಸಲ ಇದೇ ಕಂಬಳಕ್ಕೆ ಬಂದಿದ್ದ ಯುವ ಮೋರ್ಛಾದ ಗಿರೀಶ್ ಮಟ್ಟಣ್ಣನನ್ನು ಪಕ್ಷಾಧ್ಯಕ್ಷ ಗೌಡರು ಮುಟ್ಟಲಿಲ್ಲ ಯಾಕೆ? ಎನ್ನುವುದು ಇಲ್ಲಿನವರ ಪ್ರಶ್ನೆಯಾಗಿದೆ.

ಅದೇರೀತಿ ತಾವು ಹೇಳಿದ ‘ಕರ್ನಾಟಕದ ಜಯಲಲಿತಾ’ ಶೋಭಾ ಕರ್ನಾಟಕದ ಲಕ್ಷ್ಮೀ ಪಾರ್ವತಿಯಂತಾಗುವ ಸೂಚನೆಗಳೂ ಕೂಡ ಇರುವುದನ್ನು ಅಲ್ಲಗಳೆಯಲಾಗದಲ್ಲವೇ? ಎನ್‌ಟಿಆರ್ ಸಾಥಿ ಲಕ್ಷ್ಮಿ ಪಾರ್ವತಿಯ ಬದುಕಿನ ಗ್ರಾಫ್‌ನ ಏರಿಕೆ-ಇಳಿಕೆ ಇವರುಗಳ ಕಣ್ಮುಂದಿದ್ದರೆ ಯಾವುದಕ್ಕೂ ಒಳ್ಳೆಯದು.

-ಶಶಿ ಪುತ್ತೂರು, ದಕ್ಷಿಣ ಕನ್ನಡ

ತೆಗಳಿಕೆ ಹೊಗಳಿಕೆ

ಭರಣಿಗೆ ದಲಿತ ಸಮುದಾಯದ ಕಷ್ಟ ಗೊತ್ತೆ?



ಕಾಂಗ್ರೆಸ್ ಪಕ್ಷವು ತಾನು ಬಯಸಿದ್ದ ಕ್ಷೇತ್ರಕ್ಕೆ ಟಿಕೆಟ್ ನೀಡಲಿಲ್ಲ ಎಂಬ ಕಾರಣಕ್ಕೆ ‘ಅಂಬೇಡ್ಕರ್ ವಾದಿ’ ಸುಭಾಷ್ ಭರಣಿಯವರು ದಲಿತ ವಿರೋಧಿ ಬಿಜೆಪಿಯನ್ನು ಕ್ಷಣಾರ್ಧದಲ್ಲಿ ಸೇರಿದ್ದು ನಿಜವಾಗಲೂ ದಲಿತ ದ್ರೋಹವೇ ಸರಿ.

ಇಂತಹ ಪಕ್ಷಾಂತರ ಹಕ್ಕಿ ಭರಣಿಯವರಿಗೆ ಇಲ್ಲಿ ಹಲವು ಪ್ರಶ್ನೆಗಳನ್ನು ಕೇಳಬೇಕಿದೆ:

1. ದಲಿತ ಸಮುದಾಯಕ್ಕೆ ಎಸಗಲ್ಪಟ್ಟ ಐತಿಹಾಸಿಕ ಅನ್ಯಾಯಗಳ ಬಗ್ಗೆ ತಮಗೆ ಅರಿವಿದೆಯೇ? ಅದು ಯಾರಿಂದ ಮತ್ತು ಯಾವ ಉದ್ದೇಶಕ್ಕಾಗಿ?
2. ಸದರಿ ಸಂದರ್ಭಗಳಲ್ಲಿ ದಲಿತರನ್ನು ಸಾಂಸ್ಕೃತಿಕವಾಗಿ ಶೋಷಣೆಗೆ ವ್ಯವಸ್ಥಿತವಾಗಿ ಒಳಪಡಿಸಲಾಗುತ್ತಿದೆ. ಆ ಶೋಷಣೆಯ ಆಂತರ್ಯ ನಿಮಗೆ ತಿಳಿದಿದೆಯೇ?
3. ದಲಿತರನ್ನು ದಲಿತರೇ lead ಮಾಡಬಲ್ಲರು ಎಂದು ಅಂಬೇಡ್ಕರ್‌ರವರು ಬಲವಾಗಿ ನಂಬಿದ್ದರು. ಅವರ ದೂರದೃಷ್ಟಿಯ ಸೂಕ್ಷ್ಮತೆ ನಿಮಗೆ ಅರಿವಿದೆಯೇ?
4. ಆತ್ಮವಿಶ್ವಾಸ, ಆತ್ಮಘನತೆ ಮತ್ತು ಆತ್ಮಗೌರವ ಉಳಿಸಿಕೊಳ್ಳಲು ದಲಿತ ಸಮುದಾಯ ಏಕತೆಯಿಂದ ಹೋರಾಡಬೇಕು ಎಂಬ ಧ್ಯೇಯ ಸಾಮುದಾಯಿಕ ಭಾವನೆಯಿಂದ (community feeling) ಕೂಡಿದೆ. ನೀವು ತೆಗೆದುಕೊಂಡ ನಿಲುವು ಸಾಮುದಾಯಿಕ ಭಾವನೆಗೆ ಪೂರಕವೇ? ಮಾರಕವೇ? ಯೋಚಿಸಿದ್ದೀರಾ?
5. ಯಾವುದೇ ಸಮಾಜ ಭವಿಷ್ಯದಲ್ಲಿ ಸಮುದಾಯದ ಪ್ರಗತಿಯನ್ನು ಬಯಸುತ್ತದೆಯೋ ಅದು ಗತ (past)ವನ್ನು ವಿರೋಧಿಸಬೇಕು. ಆದರೆ ಹಿಂದೂತ್ವ ರಾಜಕೀಯ ಹಿಂದಕ್ಕೆ ನೋಡುವ ‘ಗುಣ’ವನ್ನು ಹೊಂದಿದೆ. ಅಂದರೆ ಮನುಪ್ರಣೀತ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯ ಸ್ಥಿರೀಕರಣ. ದಲಿತ ರಾಜಕೀಯದ ಮೇಲೆ ಅದರ ಪ್ರಭಾವ ಯಾವ ರೀತಿ ಬೀರುತ್ತದೆ ಎಂಬುದಕ್ಕೆ ನಿಮ್ಮಲ್ಲಿ ಉತ್ತರಗಳಿವೆಯೇ? ಇದ್ದರೂ ಆ ಉತ್ತರಗಳ ಹಿಂದಿನ ಉದ್ದೇಶದ ಆಳ ಗೊತ್ತಿದೆಯೇ?
6. ಬಿಜೆಪಿಯ cultural nationalism ದಲಿತ ಸಮುದಾಯದ ವಿರುದ್ಧವಿರುವ ಅತ್ಯಂತ ಪ್ರಬಲವಾದ ಸವಾಲು. ಈ ಸವಾಲಿಗೆ ನೀವು ಹೀಗೆ ಉತ್ತರ ನೀಡುತ್ತೀರಿ?

ಭರಣಿಯವರೇ ನೀವು ಬಿಜೆಪಿಯನ್ನು ಸೇರಿರುವುದು ನಿಮ್ಮ ವೈಯಕ್ತಿಕ ಆಯ್ಕೆಯಾಗಿರಬಹುದು. ಆದರೆ you are in the wrong direction. ನಿಮ್ಮ ಆಯ್ಕೆ ಇಡೀ ದಲಿತ ಸಮುದಾಯಕ್ಕೆ ಕೆಟ್ಟ ಸಂದೇಶ ಮತ್ತು ಮಾರ್ಗವನ್ನು ಸೃಷ್ಟಿಸಿದೆ. ಏಕೆಂದರೆ ಈ ನೆಲದ secular fabric ಅನ್ನು ತನ್ನ ಕೋಮುವಾದಿ, ಜೀವ ವಿರೋಧಿ ನೀತಿಗಳಿಂದ ನಾಶಗೊಳಿಸುತ್ತಿರುವ ಹಿಂದೂತ್ವದ ಶಕ್ತಿಯೊಂದಿಗೆ ನೀವು ಕೈಜೋಡಿಸಿದ್ದರಿಂದ. ನಿಮ್ಮ ಪ್ರಭಾವಿ ವ್ಯಕ್ತಿತ್ವ (ಅದರ ಹಿನ್ನೆಲೆಯ ಚರ್ಚೆಯನ್ನು ಬದಿಗಿರಿಸಿ)ವನ್ನೂ ಹಿಂದೂತ್ವ ವಿರೋಧಿ ಶಕ್ತಿಯಾಗಿ ರೂಪಿಸಿಕೊಂಡಿದ್ದರೆ ಆ ವ್ಯಕ್ತಿತ್ವಕ್ಕೆ ಒಂದು ಘನತೆ ಗೌರವಗಳಿರುತ್ತಿತ್ತು. ಬದ್ಧತೆ ಅಂತರಾಳದಿಂದ ಮೂಡಬೇಕೇ ಹೊರತು ಖರೀದಿಸಲಿಕ್ಕೆ ಸಾಧ್ಯವಿಲ್ಲ.


ಬಳಿದಾಳೆ ಪಾರ್ವತೀಶರ ವಿಶ್ಲೇಷಣೆ ಅಕ್ಷರಶಃ ಸತ್ಯ. ಪತ್ರಿಕೆ ತನ್ನ ಸಾಮಾಜಿಕ ಬದ್ಧತೆಯನ್ನು ಪ್ರಬಲವಾಗಿ ವ್ಯಕ್ತಪಡಿಸಿದೆ.

-ಎಂ.ಆರ್. ವಿದ್ಯಾಧರ, ಮಡಿಕೇರಿ



ಈ ವರ್ಷ ಕೇರಳದಲ್ಲಿ ದೊಡ್ಡ ಹಿಟ್ ಆಗಿರುವ ಚಿತ್ರ 'ಕಥಾ ಪರಿಯೊಂಬೊಳ್' (ಕಥೆ ಹೇಳುವಾಗ). ಈ ಚಿತ್ರ ನಾಲ್ಕು ತಿಂಗಳುಗಳ ಹಿಂದೆ ಬಿಡುಗಡೆಯಾಗಿದ್ದರೂ ಇವತ್ತಿಗೂ ಅಲ್ಲಿನ ಚಿತ್ರಮಂದಿರಗಳಲ್ಲಿ ಯಶಸ್ವಿಯಾಗಿ ಪ್ರದರ್ಶನಗೊಳ್ಳುತ್ತಿದೆ. ಇದರ ಯಶಸ್ಸನ್ನು ಕಂಡು ಈಗಾಗಲೇ ಅದನ್ನು ಇತರೆ ಭಾಷೆಗಳಿಗೆ ರೀಮೇಕ್ ಮಾಡಲು ತಾ ಮುಂದು ನಾ ಮುಂದು ಎಂದು ಜನ ನೂಕಾಡುತ್ತಿದ್ದಾರೆ. ಅವರಲ್ಲಿ ಮೊದಲು ರೀಮೇಕ್ ಬಸ್ ಹತ್ತಿದವರು ತಮಿಳಿನ ಸೂಪರ್ ಸ್ಟಾರ್ ರಜನೀಕಾಂತ್. ಈ ಚಿತ್ರವನ್ನು ನೋಡಿದ ರಜನಿಗೆ ಅದು ಎಷ್ಟು ಇಷ್ಟವಾಯಿತೆಂದರೆ ಅವರು 'ರೋಬೋಟ್' ಚಿತ್ರವನ್ನೇ ಮುಂದೂಡಿ ಅದಕ್ಕಿಂತ ಮೊದಲು ಇದನ್ನು ಮಾಡಿ ಮುಗಿಸಲು ನಿರ್ಧರಿಸಿ ಆಗಲೇ ಅರ್ಧ ಚಿತ್ರೀಕರಣವನ್ನೂ ಮುಗಿಸಿದ್ದಾರೆ.

ಅಂದಹಾಗೆ, ಮಲೆಯಾಳಂ ಚಿತ್ರದ ಕತೆ ಹೊಸತೇನಲ್ಲ. ಅದು ಎಲ್ಲಾ ಪುಟ್ಟ ಮಕ್ಕಳಿಗೂ ಗೊತ್ತಿರುವ ಕೃಷ್ಣ ಮತ್ತು ಆತನ ಬಾಲ್ಯ ಸ್ನೇಹಿತ ಕುಚೇಲನ ಕತೆ. ಆದರೆ ಅದನ್ನು ಆಧುನಿಕಗೊಳಿಸಿ ಕೃಷ್ಣನ ಪಾತ್ರಧಾರಿಯು ಸಿನಿಮಾ ನಟನಾಗಿದ್ದು, ಕುಚೇಲನನ್ನು ಕ್ಷೌರಿಕನನ್ನಾಗಿಸಲಾಗಿದೆ. ಆದರೆ ಚಿತ್ರದಲ್ಲಿ ಕ್ಷೌರಿಕನದ್ದೇ ಮುಖ್ಯಪಾತ್ರವಾಗಿದ್ದು ಕೃಷ್ಣನ ಪಾತ್ರಧಾರಿ ಅತಿಥಿ ಪಾತ್ರದಂತೆ ಬಂದು ಹೋಗುತ್ತದೆ. ಮೂಲ ಚಿತ್ರದಲ್ಲಿ ಮಮ್ಮುಟಿ ಕೃಷ್ಣನ ಪಾತ್ರ ನಿರ್ವಹಿಸಿದ್ದರೆ, ಖ್ಯಾತ ಪೋಷಕ ನಟ ಶ್ರೀನಿವಾಸನ್ ಕುಚೇಲನ ಪಾತ್ರದಲ್ಲಿ ಕಾಣಿಸಿಕೊಂಡು ಜನಮನ ಗೆದ್ದಿದ್ದಾರೆ.



ಶಾರೂಖ್ ಬಿಲ್ಲೂ ಬಾರ್ಬರ್

ಈಗ ತಮಿಳಿನಲ್ಲಿ ಕೃಷ್ಣನ ಪಾತ್ರದಲ್ಲಿ ರಜನಿ ಇರಲಿದ್ದು, ಕುಚೇಲನ ಪಾತ್ರದಲ್ಲಿ ಪಶುಪತಿ ಇರುತ್ತಾರೆ ಮಾತ್ರವಲ್ಲ ಚಿತ್ರಕ್ಕೆ 'ಕುಸೇಲ' ಎಂದೇ ಮರುನಾಮಕರಣ ಮಾಡಲಾಗಿದೆ.

ಇನ್ನು ದಕ್ಷಿಣ ರಾಜ್ಯಗಳಿಂದ ಹಿಟ್ ಸಿನಿಮಾಗಳನ್ನು ಹಿಂದಿಯಲ್ಲಿ ಮಾಡಿಯೇ ಬಾಲಿವುಡ್‌ನಲ್ಲಿ ಖ್ಯಾತಿ ಗಳಿಸಿರುವ ಪ್ರಿಯದರ್ಶನ್ ಎಂಬ ನಿರ್ದೇಶಕ ಸುಮ್ಮನಿರುತ್ತಾರೆಯೇ. ಆತ ಕೂಡ 'ಕಥಾ ಪರಿಯೊಂಬೊಳ್'ಚಿತ್ರದ ಕತೆ ಹಿಡಿದು ರೀಮೇಕ್ ಮಾಡಲು ಸಜ್ಜಾಗಿದ್ದಾರೆ. ಆದರೆ ಅವರು ಮೊದಲು ಸಂಪರ್ಕಿಸಿದ ನಟ ಅಕ್ಷಯ್ ಕುಮಾರ್‌ಗೆ ಅದ್ಯಾಕೋ ಕತೆ ಇಷ್ಟವಾಗಿಲ್ಲ. ಆಗ ಪ್ರಿಯದರ್ಶನ್ ಬಾಲಿವುಡ್ ಬಾದ್‌ಶಾ ಶಾರುಖ್‌ಖಾನ್‌ನನ್ನೇ ಸಂಪರ್ಕಿಸಿದ್ದಾರೆ. ಕತೆಯನ್ನು ಕೇಳಿ ಶಾರುಖ್‌ಖಾನ್‌ಗೆ ಎಷ್ಟು ಮೆಚ್ಚಿಗೆಯಾಗಿದೆ ಎಂದರೆ ತನ್ನ ಚಿತ್ರನಿರ್ಮಾಣದ ಸಂಸ್ಥೆ 'ರೆಡ್ ಚಿಲ್ಲೀಸ್' ಇದನ್ನು ನಿರ್ಮಿಸುವುದಿದ್ದರೆ ಮಾತ್ರ ಅದರಲ್ಲಿ ತಾನು ನಟಿಸುವುದಾಗಿ ಷರತ್ತು ಹಾಕಿದ್ದಾನೆ.

ಅದಕ್ಕೆ ಪ್ರಿಯದರ್ಶನ್ ಒಪ್ಪಿದ್ದರಿಂದ ಶಾರುಖ್ ಖಾನ್ ಈಗಾಗಲೇ ನಿರ್ಮಾಣದ ಕೆಲಸವನ್ನು ಪ್ರಾರಂಭಿಸಿ ಚಿತ್ರದಲ್ಲಿ ತನ್ನೊಂದಿಗೆ ನಟಿಸುವಂತೆ ಕರೀನಾ ಕಪೂರ್ ಮತ್ತು ಪ್ರಿಯಾಂಕಾ ಚೋಪ್ರಾ ಎಂಬ ಬೆಡಗಿಯರನ್ನು ಒಪ್ಪಿಸಿದ್ದಾನಲ್ಲದೆ ದೀಪಿಕಾ ಪಡುಕೋಣೆ ಕೂಡ ನಟಿಸಬೇಕೆಂದು ಆಕೆಯನ್ನು ಕೇಳಿದ್ದಾನೆ. ಈ ಮಧ್ಯೆ, ಚಿತ್ರದ ಪ್ರಮುಖ ಪಾತ್ರವಾದ ಕುಚೇಲನ ರೋಲಿಗೆ ಪ್ರಬುದ್ಧ ನಟ ಇರ್ಫಾನ್ ಖಾನ್‌ರನ್ನು ಒಪ್ಪಿಸಿದ್ದಾನೆ. ಹಾಗೆಯೇ ಹಿಂದಿ ಸಿನಿಮಾ ನೋಡುಗರಿಗೆ ಇಷ್ಟವಾಗುವಂತೆ ಚಿತ್ರಕ್ಕೆ 'ಬಿಲ್ಲೂ ಬಾರ್ಬರ್' ಎಂದು ಹೆಸರಿಡಲಾಗಿದೆ.

ಆದರೆ ಸಮಸ್ಯೆ ಎದುರಾಗಿರುವುದು ಎಲ್ಲಿ ಅಂದರೆ ಕುಚೇಲನ ಹೆಂಡತಿಯ, ಇಬ್ಬರು ತೋಳೆತ್ತರದ ಮಕ್ಕಳ ತಾಯಿಯ ಪಾತ್ರಕ್ಕೆ ಯಾವ ನಟಿಯೂ ಇಲ್ಲಿಯವರೆಗೂ ಒಪ್ಪದಿರುವುದು. ಈಗಾಗಲೇ ಟಬು, ರಾಣಿ ಮುಖರ್ಜಿ, ಅಮಿಷಾ ಪಟೇಲ್, ಊರ್ಮಿಳ.... ಹೀಗೆ ಎಲ್ಲ ನಾಯಕಿಯರೂ ಅಡ್ಡಡ್ಡ ತಲೆಯಾಡಿಸಿದ್ದಾರೆ. ಆದರೂ ಎದೆಗುಂದದ ಶಾರುಖ್ ಸದ್ಯಕ್ಕೆ ಆ ಪಾತ್ರಕ್ಕಾಗಿ ಲಾರಾ ದತ್ತಾಳನ್ನು ಒಪ್ಪಿಸಿದ್ದಾರಂತೆ.

"ಈ ಸಿನಿಮಾದ ಪಾತ್ರಗಳು ಚಿಕ್ಕವಿದ್ದರೂ ನೆನಪಿನಲ್ಲಿ ಉಳಿಯುವಂತ ಅದ್ಭುತ ಪಾತ್ರಗಳು" ಎಂಬುದು ಶಾರುಖ್‌ನ ಒಕ್ಕಣೆ. ಎಷ್ಟೇ ಆದರೂ ಅದು ಕೃಷ್ಣ ಮತ್ತು ಕುಚೇಲನ ಕತೆಯಲ್ಲವೇ?!



ಮೋಹನ್‌ಲಾಲ್‌ನ ಮಾಂತ್ರಿಕ ವಿದ್ಯೆ!




ಕೇರಳದ ಸೂಪರ್ ಸ್ಟಾರ್ ಮೋಹನ್‌ಲಾಲ್‌ಗೆ ಚಿತ್ರರಂಗದ ಹೊರತಾಗಿಯೂ ಹಲವಾರು ಆಸಕ್ತಿಗಳಿವೆ. ಉದಾಹರಣೆಗೆ ಅವರಿಗೆ ಅಡುಗೆ ಮಾಡುವುದೆಂದರೆ ಎಷ್ಟಿಷ್ಟ ಅಂದರೆ ಅವರು ಈಗಾಗಲೇ ಬೆಂಗಳೂರು ಸೇರಿದಂತೆ ದುಬಾಯ್ ತನಕ ಹಲವಾರು ಹೋಟೆಲ್‌ಗಳನ್ನು ಸ್ಥಾಪಿಸಿದ್ದಾರಲ್ಲದೆ ತಮ್ಮ ಹೋಟೆಲ್‌ಗಳಲ್ಲಿನ ಅಡುಗೆ ಹೇಗಿದೆ, ಅದನ್ನು ಹೇಗೆ ಇನ್ನೂ ಉತ್ತಮಗೊಳಿಸಬಹುದೆಂದು ಸಲಹೆ ನೀಡುತ್ತಿರುತ್ತಾರೆ. ಹಾಗೆಯೇ ಮೋಹನ್‌ಲಾಲ್‌ರಿಗೆ ಮ್ಯಾಜಿಕ್ ಮಾಡುವುದೆಂದರೂ ಬಹಳ ಇಷ್ಟ. ಈಗಾಗಲೇ ಅವರು ಹಲವು ಮ್ಯಾಜಿಕ್ ಟ್ರಿಕ್‌ಗಳನ್ನು ಕಲಿತಿದ್ದು, ಬಿಡುವು ಸಿಕ್ಕಾಗಲೆಲ್ಲ ಮ್ಯಾಜಿಕ್ ಶೋಗಳನ್ನು ನೀಡುತ್ತಾರೆ.

ಅವರ ಈ ಆಸಕ್ತಿಯಿಂದಾಗಿಯೇ ಕಳೆದ ವರ್ಷ ಗೋಪಿನಾಥ್ ಮುತ್ತುಕಾಡ್ ಎಂಬ ಜಾದೂಗಾರ ಮೋಹನ್‌ಲಾಲ್‌ರನ್ನು ಸಂಪರ್ಕಿಸಿ "ಅಂತರರಾಷ್ಟ್ರೀಯ ಖ್ಯಾತಿಯ ಜಾದೂಗಾರ ಹೌದಿನಿಯವರು ಮಾಡುತ್ತಿದ್ದ ಡೇರ್ ಡೆವಿಲ್ ಮ್ಯಾಜಿಕ್ ಟ್ರಿಕ್ ಒಂದನ್ನು ಮಾಡುತ್ತೀರಾ, ಅದನ್ನು ನಾನು ನಿಮಗೆ ಕಲಿಸಬಲ್ಲೆ" ಎಂದರಂತೆ. ಇದಕ್ಕೆ ಉತ್ಸಾಹದಿಂದಲೇ ಒಪ್ಪಿದ ಮೋಹನ್‌ಲಾಲ್‌ರವರು ಕಳೆದ 18 ತಿಂಗಳಿಂದ ಅದನ್ನು ಕಲಿಯುತ್ತಿದ್ದರು.

ಇದೇ ಸೋಮವಾರ ಕೇರಳದ ರಾಜಧಾನಿ ಟ್ರಿವಾಂಡ್ರಮ್‌ನಲ್ಲಿ ಪ್ರಾರಂಭವಾಗಲಿದ್ದ ಜಾದೂಗಾರರ ಅಂತರರಾಷ್ಟ್ರೀಯ ಸಮಾವೇಶವಾದ 'ವಿಸ್ಮಯ 2008' ಅಂಗ ಉದ್ಘಾಟನೆಯ ಸಮಾರಂಭದಲ್ಲಿ ಆ ಮ್ಯಾಜಿಕ್ ಟ್ರಿಕ್‌ಅನ್ನು ಮೋಹನ್‌ಲಾಲ್ ಪ್ರದರ್ಶಿಸಲಿದ್ದರು. ಆದರೆ ಯಾವಾಗ ಅವರ ಅಪಾರ ಸಂಖ್ಯೆಯ ಅಭಿಮಾನಿಗಳಿಗೆ ಮತ್ತು ಮಲಯಾಳಂ ಚಿತ್ರರಂಗದವರಿಗೆ ಆ ಟ್ರಿಕ್ಕಿನ ರೂಪರೇಷೆಗಳು ಗೊತ್ತಾದವೋ ಅವರೆಲ್ಲ ಹೌಹಾರಿದರು. ಯಾಕೆಂದರೆ ಆ ಮ್ಯಾಜಿಕ್ ಟ್ರಿಕ್ಕಿನಲ್ಲಿ ಮೋಹನ್‌ಲಾಲ್‌ರನ್ನು ಸರಪಳಿಗಳಲ್ಲಿ ಕಟ್ಟಲಾಗುತ್ತಿತ್ತಲ್ಲದೆ, ಅವರ ಮೇಲೆ ನಲವತ್ತು ಅಡಿಯಷ್ಟು ಎತ್ತರದ ಹುಲ್ಲಿನ ರಾಶಿಯನ್ನು ಪೇರಿಸಿಡಬೇಕಿತ್ತು, ಆ ಹುಲ್ಲಿನ ರಾಶಿಗೆ ಬೆಂಕಿ ಹಚ್ಚಿದ ಹಲವೇ ಕ್ಷಣಗಳಲ್ಲಿ ಮೋಹನ್‌ಲಾಲ್ ತಮ್ಮ ಸರಪಳಿಗಳಿಂದ ಬಿಡುಗಡೆಗೊಂಡು ಹೊರಬರಬೇಕಿತ್ತು.

ಇಂತಹ ಟ್ರಿಕ್‌ನಿಂದಾಗಿ ಮೋಹನ್‌ಲಾಲ್‌ರವರ ಜೀವಕ್ಕೇ ಅಪಾಯ ಇದ್ದು ಅವರು ಯಾವುದೇ ಕಾರಣಕ್ಕೂ ಅದರಲ್ಲಿ ಭಾಗವಹಿಸಬಾರದೆಂದು ಎಲ್ಲರೂ ಅವರ ಮೇಲೆ ಒತ್ತಡ ತರಲಾರಂಭಿಸಿದರು. ಹಾಗೆಯೇ ಹಲವಾರು ಜಾದೂಗಾರರೂ "ಇಂತಹ ಟ್ರಿಕ್ ಮಾಡಲು ಹಲವು ವರ್ಷಗಳ ಕಾಲ ತರಬೇತಿ ಪಡೆಯಬೇಕು. ಅಂತಹ ತರಬೇತಿ ಪಡೆಯದೆ ನೀವು ಹೀಗೆ ಮಾಡುವುದರಿಂದ ಬೆಂಕಿಯಲ್ಲಿ ಸುಡುವ ಅಪಾಯವೂ ಇದೆ" ಎಂದು ಎಚ್ಚರಿಸಿದರು. ಚಿತ್ರರಂಗದವರಂತೂ "ಮೋಹನ್‌ಲಾಲ್ ಓರ್ವ ವ್ಯಕ್ತಿ ಮಾತ್ರವಲ್ಲ, ಅವರು ನಮ್ಮ ರಾಜ್ಯದ ಚಿತ್ರರಂಗದ ಜೀವಾಳ. ಅವರು ಇಂತಹ ಅಪಾಯಕಾರಿ ಕ್ರಿಯೆಗೆ ನಮ್ಮ ಸಮ್ಮತಿ ಇಲ್ಲ" ಎಂದು ತಕರಾರೆತ್ತಿದರು.

ಹೇಳಿ ಕೇಳಿ, ಮೋಹನ್‌ಲಾಲ್ ಕೇರಳದ ಸೂಪರ್‌ಸ್ಟಾರ್ ಮಾತ್ರವಲ್ಲ, ಈಗಾಗಲೇ ಹಲವಾರು ರಾಷ್ಟ್ರ ಮತ್ತು ರಾಜ್ಯ ಮಟ್ಟದ ಪ್ರಶಸ್ತಿಗಳನ್ನು ಪಡೆದಿರುವ ನಟ. ಅಂತಹದ್ದರಲ್ಲಿ ಅವರ ಇಂತಹ ಅಪಾಯಕಾರಿ ಟ್ರಿಕ್ಕಿಗೆ ಅಲ್ಲಿನ ಜನ ಸಮ್ಮತಿಸುವುದಾದರೂ ಹೇಗೆ. ಆದರೆ ಅವರೆಲ್ಲರ ಅಭ್ಯಂತರದ ನಡುವೆಯೂ ತಾನು ಆ ಮ್ಯಾಜಿಕ್ ಟ್ರಿಕ್‌ನಲ್ಲಿ ಭಾಗವಹಿಸುತ್ತೇನೆ ಎನ್ನುತ್ತಿದ್ದ ಮೋಹನ್‌ಲಾಲ್‌ರವರ ಮನಸ್ಸನ್ನು ಕೊನೆಗೂ ಬದಲಾಯಿಸಿದ್ದು ಅವರ ತಾಯಿ. ತಮ್ಮ 47 ವರ್ಷದ ಮಗ ಇಂತಹ ಟ್ರಿಕ್‌ನಲ್ಲಿ ಭಾಗವಹಿಸಬಾರದೆಂದು ಅವರು ಪಟ್ಟು ಹಿಡಿದರು.



ಇವರೆಲ್ಲರ ಒತ್ತಡಕ್ಕೆ ಕೊನೆಗೂ ಮಣಿದ ಮೋಹನ್‌ಲಾಲ್ ತಾವು ಆ ಮ್ಯಾಜಿಕ್ ಟ್ರಿಕ್‌ನಲ್ಲಿ ಭಾಗವಹಿಸುವುದಿಲ್ಲ ಎಂದು ಒಲ್ಲದ ಮನಸ್ಸಿನಿಂದಲೇ ಕೊನೆಕ್ಷಣದಲ್ಲಿ ಘೋಷಿಸಿದ್ದಾರೆ. ಈಗ ಮೋಹನ್‌ಲಾಲ್ ತಮ್ಮ ಹೊಸ ಸಿನಿಮಾದ ಚಿತ್ರೀಕರಣದಲ್ಲಿ ತಲ್ಲೀನರಾಗಿದ್ದರೆ, ಅವರ ಅಭಿಮಾನಿಗಳು ಮತ್ತು ಮಲಯಾಳಂ ಚಿತ್ರರಂಗ ನಿಟ್ಟುಸಿರು ಬಿಟ್ಟಿದೆ.

ಕನ್ನಡದ ಪ್ರತಿಭಾವಂತ ತಾರಾ ದಂಪತಿಗಳಾದ ಲೋಕೇಶ್ ಮತ್ತು ಗಿರಿಜಾ ಲೋಕೇಶರ ಸುಪುತ್ರ ಸೃಜನ್ ಲೋಕೇಶ್ ಮತ್ತೆ ಸೃಜನಶೀಲರಾಗಿದ್ದಾರೆ.

ಐದು ವರ್ಷಗಳ ಹಿಂದೆ ಈತ ಭಾರೀ ಸುದ್ದಿಯೊಂದಿಗೆ 'ನೀಲ ಮೇಘ ಶ್ಯಾಮ' ಎಂಬ ಚಿತ್ರದಲ್ಲಿ ನಾಯಕನಟನಾಗಿ ಚಿತ್ರರಂಗವನ್ನು ಪ್ರವೇಶಿಸಿದ್ದರು. ಆದರೆ ಅದೇ ಚಿತ್ರದ ಮೂಲಕ ಗಾಂಧಿನಗರವನ್ನು ಪ್ರವೇಶಿಸಿದ ನಟಿ ರಾಧಿಕಾಳಿಗೆ ಯಶಸ್ಸು ಸಿಕ್ಕಿತೇ ಹೊರತು ಸೃಜನ್ ಬಗ್ಗೆ ಯಾರೂ ಅಷ್ಟೇನು ಗಮನಹರಿಸಲಿಲ್ಲ. ಹೀಗಾಗಿ ಆತ ಹೆಚ್ಚು ಕಮ್ಮಿ ಚಿತ್ರರಂಗಕ್ಕೆ ಗುಡ್‌ಬೈ ಹೇಳಿ ಸುಮ್ಮನಾಗಿದ್ದರು.

'ನೀಲ ಮೇಘ ಶ್ಯಾಮ' ಸೆಟ್ಟೇರಿದಾಗ ಸೃಜನ್‌ಗೆ ನೈತಿಕ ಮಾರ್ಗದರ್ಶನ ನೀಡಲು ಆತನ ತಂದೆ ಲೋಕೇಶ್ ಇದ್ದರು. ಈಗ ಅವರಿಲ್ಲ, ಹಾಗೆಯೇ ಆ ಚಿತ್ರದ ನಿರ್ದೇಶಕ ರಾಜ್‌ಕಿಶೋರ್ ಕೂಡ ಮೊನ್ನೆ ಮೊನ್ನೆಯಷ್ಟೇ ನಿಧನ ಹೊಂದಿದರು. ಈ ಮಧ್ಯೆ ಸೃಜನ್ ಲೋಕೇಶ್ ನಟಿ ವಿಜಯಲಕ್ಷ್ಮಿಯೊಂದಿಗೆ ನಿಶ್ಚಿತಾರ್ಥ ಮಾಡಿಕೊಂಡನಾದರೂ, ಮದುವೆಗೆ ಮುನ್ನವೇ ಅವರಿಬ್ಬರು ಬೇರೆ ಬೇರೆಯಾದರು. ಈಗ ನೋಡಿದರೆ ಸೃಜನ್ ಲೋಕೇಶ್ ಮತ್ತೊಮ್ಮೆ ತಮ್ಮ ಅದೃಷ್ಟವನ್ನು ಪರೀಕ್ಷಿಸಲು ಚಿತ್ರರಂಗವನ್ನು ಪ್ರವೇಶಿಸಿದ್ದಾರೆ. ಅವರು ನಟಿಸುತ್ತಿರುವ 'ವಸುಂಧರೆ' ಎಂಬ ಚಿತ್ರ ಮೊನ್ನೆ ಸೆಟ್ಟೇರಿದೆ.



ತನ್ನ ಕೌಟುಂಬಿಕ ನೋವು ದುಮ್ಮಾನಗಳನ್ನು ಬದಿಗಿಟ್ಟು ಎರಡನೆ ಇನ್ನಿಂಗ್ಸ್‌ಅನ್ನು ಪ್ರಾರಂಭಿಸಿರುವ ಸೃಜನ್‌ಗೆ ಈಗಲಾದರೂ ಗೆಲುವು ಸಿಗುವಂತಾಗಲಿ.

ಎಲ್ಲೆಲ್ಲೂ ರಾಜ್ ನೆನಪು

ಡಾ. ರಾಜ್‌ಕುಮಾರ್‌ರವರು ಎಲ್ಲರನ್ನೂ ಅಗಲಿ ಎರಡು ವರ್ಷಗಳಾಗಿದ್ದರೂ ಕಳೆದ ವಾರ ಚಿತ್ರರಂಗದ ಎಲ್ಲೆಡೆ ಅವರೇ ಪ್ರಮುಖರಾಗಿ ಮಿಂಚಿದರು. ಅವರ ಜನ್ಮದಿನವಾದ ಏಪ್ರಿಲ್ 24ರಂದು ಬೆಳಗ್ಗಿನಿಂದ ರಾತ್ರಿಯ ತನಕ ಅನೇಕ ಸಮಾರಂಭಗಳು ನಡೆದವು. ಅಂದು ಅವರ ಪುತ್ರರಾದ ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್ ಮತ್ತು ಪುನೀತ್ ರಾಜ್‌ಕುಮಾರ್ ಇತರೆ ಅಭಿಮಾನಿಗಳೊಂದಿಗೆ ರಕ್ತ ದಾನ ಮಾಡಿದರಲ್ಲದೆ, 'ಜನ್ಮ' ಚಿತ್ರದ ತಂಡ ರಾಜ್‌ಕುಮಾರರಂತೆ ನೇತ್ರದಾನ ಮಾಡುವ ಪ್ರತಿಜ್ಞೆಯನ್ನು ಕೈಗೊಂಡಿತು. ಅಷ್ಟೇ ಅಲ್ಲ, ಅಂದು ರಾಜ್ಯದೆಲ್ಲೆಡೆ ನಾಲ್ಕೈದು ರಾಜ್ ಪ್ರತಿಮೆಗಳೂ ಅನಾವರಣಗೊಂಡವು.



ಹಾಗೆಯೇ ಬರುವ ಮೇ ಒಂದರಂದು ನಗರದ ಚಿತ್ರಕಲಾ ಪರಿಷತ್ತಿನಲ್ಲಿ ಕರ್ನಾಟಕದ ಖ್ಯಾತ ಮೂವತ್ತು ಕಲಾವಿದರ ಕುಂಚದಿಂದ ಮೂಡಿಬಂದಿರುವ ರಾಜ್ ಚಿತ್ರಗಳ ಪ್ರದರ್ಶನ ಉದ್ಘಾಟನೆಯಾಗಲಿದೆ. ಇದೂ ಕೂಡ ಕಲಾವಿದರು ರಾಜ್‌ಗೆ ನೀಡುತ್ತಿರುವ ಒಂದು ಅಪರೂಪದ ಶ್ರದ್ಧಾಂಜಲಿ.

ಹೀಗೆ ನಾಡಿನ ಜನ ಅಂದು ರಾಜ್‌ರನ್ನು ಅರ್ಥಪೂರ್ಣವಾಗಿ ಸ್ಮರಿಸಿಕೊಂಡರು.

ನಗಿಸುವಾತನ ನೋವು...

ತನ್ನ ಚಿತ್ರವಿಚಿತ್ರ ಮ್ಯಾನರಿಸಂ ಮತ್ತು ಡೈಲಾಗ್ ಡೆಲಿವರಿಯಿಂದ ಚಿಕ್ಕಪುಟ್ಟ ಪಾತ್ರದಲ್ಲೂ ಪ್ರೇಕ್ಷಕರ ಗಮನ ಸೆಳೆಯುವ ಹಾಸ್ಯ ನಟ ಉಮೇಶ್ ಎಲ್ಲರಿಗೂ ಪರಿಚಿತ. ಆದರೆ ಅವರ ಬಗ್ಗೆ ಬಹಳಷ್ಟು ಜನಕ್ಕೆ ಗೊತ್ತಿಲ್ಲದ ಒಂದೆರಡು ವಿಷಯ ಇಲ್ಲಿದೆ.



ಅವರಿಗಿನ್ನೂ ನಾಲ್ಕು ವರ್ಷ ವಯಸ್ಸಾಗಿದ್ದಾಗಲೇ ಅವರು ರಂಗಭೂಮಿಗೆ ಎಂಟ್ರಿ ಪಡೆದಿದ್ದರು. ಆನಂತರ, ಅವರಿಗೆ ಹದಿನಾಲ್ಕು ವರ್ಷ ವಯಸ್ಸಾಗಿದ್ದಾಗ 'ಮಕ್ಕಳ ಭಾಗ್ಯ' ಎಂಬ ಚಿತ್ರದ ಮೂಲಕ ಬೆಳ್ಳಿತೆರೆಯ ಮೇಲೆ ಕಾಣಿಸಿಕೊಂಡರು. ಆ ಚಿತ್ರ ಬಿಡುಗಡೆಗೊಂಡು ಈಗ ಐದು ದಶಕಗಳಾಗಿರುವುದರಿಂದ ಉಮೇಶ್ ರಂಗಭೂಮಿಗೆ ಬಂದು ಅರವತ್ತು ವರ್ಷ, ಚಿತ್ರರಂಗಕ್ಕೆ ಬಂದು ಐವತ್ತು ವರ್ಷವಾಯಿತೆಂದು ಹೇಳಬಹುದು.

ಆದರೆ ಈ ಹಿರಿಯ ಕಲಾವಿದನ ವೃತ್ತಿಬದುಕಿನ ಈ ಮೈಲಿಗಲ್ಲುಗಳನ್ನು ಆಚರಿಸಲು ಯಾರೂ ಮುಂದೆಬಂದಿಲ್ಲ. ಹಾಗೆಯೇ ತಿಂಗಳಿಗೆ ಹತ್ತೋ, ಹದಿನೈದೋ ಸಾವಿರ ರೂಪಾಯಿಗಳನ್ನು ಗಳಿಸುವ ಉಮೇಶ್ ಅದನ್ನೆಲ್ಲ ತಮ್ಮ ಆರೋಗ್ಯ ಸುಧಾರಣೆಗೆ ವ್ಯಯ ಮಾಡಬೇಕಿರುವುದರಿಂದ ಸ್ವತಃ ತಾವೇ ಆಚರಿಸಿಕೊಳ್ಳುವ ಶಕ್ತಿಯಂತೂ ಇಲ್ಲವೇ ಇಲ್ಲ.

ಜನರನ್ನು ನಕ್ಕು ನಗಿಸುವ ನಟನೊಬ್ಬನ ನಿಜ ಬದುಕಿನ ದುರಂತವಿದು. ಅವರನ್ನು ನಕ್ಕು ನಗಿಸುವವರು ಯಾರು?

R B P LANKESH, Kannada Weekly Price Rs. 12/- 7-5-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4.



ಅಂದದ ಅರಮನೆ

'ಅರಮನೆ' ಚಿತ್ರದ ಬಗ್ಗೆ ಹತ್ತು ಹಲವು ಕುತೂಹಲಗಳು ಇದ್ದವು. 'ಮಾತಾಡ್ ಮಾತಾಡು ಮಲ್ಲಿಗೆ'ಯಿಂದ ಅನುಭವಿಸಿದ ನಷ್ಟವನ್ನು ನಿರ್ಮಾಪಕ ಮಂಜು ಈ ಚಿತ್ರದ ಮೂಲಕ ವಾಪಾಸು ಪಡೆಯುತ್ತಾರೆಯೇ? ವಿವಾದಾತ್ಮಕ ಮದುವೆಯ ನಂತರ ಗಣೇಶ್ ಕ್ರೇಜ್ ಕಡಿಮೆಯಾಗಿದೆಯೇ? ಚೊಚ್ಚಲ ನಿರ್ದೇಶಕ ನಾಗ್‌ಶೇಖರ್ ಗಟ್ಟಿಯಾಗಿ ತಳವೂರುತ್ತಾರೆಯೇ? ಇಂತಹ ಪ್ರಶ್ನೆಗಳು ಗಾಂಧಿನಗರಿಗಳ ಚರ್ಚೆಯ ಕೇಂದ್ರವಾಗಿದ್ದವು.

ಚಿತ್ರ ನೋಡಿದ ನಂತರ ಅನಿಸಿದ್ದೇನೆಂದರೆ ಮಂಜು 'ಮಲ್ಲಿಗೆ'ಯಲ್ಲಿ ಕಳೆದುಕೊಂಡಿದ್ದನ್ನು 'ಅರಮನೆ'ಯಲ್ಲಿ ಪಡೆಯಲಿದ್ದಾರೆ. ಥಿಯೇಟರಿನಲ್ಲಿ ಮಹಿಳಾ ಪ್ರೇಕ್ಷಕರಿಗೆ ಕೊರತೆ ಇಲ್ಲವಾದ್ದರಿಂದ ಗಣೇಶನ ಬಗೆಗಿನ ಕ್ರೇಜ್ ಕಡಿಮೆಯಾಗಿಲ್ಲ. ನಿರ್ದೇಶಕ ನಾಗ್‌ಶೇಖರ್ ಕೂಡ ಇನ್ನಷ್ಟು ಪಳಗಿದರೆ ಇಲ್ಲಿ ಉಳಿಯಬಲ್ಲರು...

ಈ ಚಿತ್ರದಲ್ಲಿ ಗಣೇಶ್ ತನ್ನ ಎಂದಿನ ಹುಡುಗಾಟ, ಚೆಲ್ಲಾಟ, ತುಂಟಾಟಗಳನ್ನು ಬದಿಗಿಟ್ಟು ಸ್ವಲ್ಪ ಗಂಭೀರವಾಗಿಯೇ ನಟಿಸಲು ಪ್ರಯತ್ನಿಸಿದ್ದಾರೆ. ಚಿಂದಿ ಚಿಂದಿಯಾದ ಒಂದು ಸಂಸಾರವನ್ನು ಮತ್ತೆ ಸೇರಿಸುವ ಈ ಕಥಾನಾಯಕ ಪ್ರೇಮದ ಸೆಳೆತಕ್ಕೆ ಸಿಲುಕಿದರೂ ಕೊನೆಗೆ ಅದನ್ನು ತ್ಯಾಗ ಮಾಡುವುದೇ ಚಿತ್ರದ ಕಥಾವಸ್ತು. ಇದನ್ನು ನೋಡಿ ಹಿಂದೆ ನಟ ಅರವಿಂದ್ ರಮೇಶ್ ನಿರ್ವಹಿಸುತ್ತಿದ್ದ 'ತ್ಯಾಗರಾಜ'ನ ಪಾತ್ರಗಳೆಲ್ಲಾ ಈಗ ಗಣೇಶನ ಪಾಲಾಗುತ್ತದೆ ಎನ್ನಿಸುತ್ತದೆ.

ಒಂದು ರೀತಿಯಲ್ಲಿ ಇಡೀ ಚಿತ್ರ 'ಮುಂಗಾರು ಮಳೆ'ಯ ಮುಂದುವರಿದ ಭಾಗದಂತೆ ಕಾಣಿಸಿದರೂ ಅದರಷ್ಟು ಆಹ್ಲಾದಕರ ಅನುಭವವನ್ನು ಮಾತ್ರ ನೀಡುವುದಿಲ್ಲ. ಮುಖ್ಯವಾಗಿ ಈ ಚಿತ್ರದಲ್ಲಿ ಹಾಡುಗಳು ಅಷ್ಟೊಂದು ಮಧುರವಾಗಿ ಮೂಡಿಬಂದಿಲ್ಲ. ಅದೇ ಈ ಚಿತ್ರದ ಮೈನಸ್ ಪಾಯಿಂಟ್. ಹಾಗೇ ಕೆಲವು ದೃಶ್ಯಗಳು ಮತ್ತೆ ಮತ್ತೆ ರಿಪೀಟ್ ಆಗಿವೆ. ಅದನ್ನು ನಾಗ್‌ಶೇಖರ್ ತಪ್ಪಿಸಬಹುದಿತ್ತು. ಸಂಭಾಷಣೆ ಇನ್ನಷ್ಟು ಭಾವಪೂರ್ಣವಾಗಿ ಇದ್ದಿದ್ದರೆ ಹೃದಯಕ್ಕೆ ನಾಟುತ್ತಿತ್ತೋ ಏನೋ?

ಈ ಚಿತ್ರ ಒಮ್ಮೆ ನೋಡಲು ಯಾವುದೇ ಮೋಸವಿಲ್ಲ, ನೋಡದಿದ್ದರೂ ಯಾವುದೇ ನಷ್ಟವಿಲ್ಲ!

ಗಣೇಶ್ ನಟಿಸಿರುವ 'ಗಾಳಿಪಟ' ನೂರು ದಿನಗಳ ಪ್ರದರ್ಶನಗಳನ್ನು ಕಾಣುವ ಮೂಲಕ ಆತ ಒಂದು ಅಪರೂಪದ ದಾಖಲೆಯನ್ನು ನಿರ್ಮಿಸಿದ್ದಾರೆ. ಹಿಂದೊಮ್ಮೆ ಸೈಡ್ ಆಕ್ಟರ್ ಆಗಿದ್ದ ಈತ ಈಗ ನಾಯಕ ನಟನಾಗಿ ನಟಿಸಿರುವ ಮೊದಲ ಆರೂ ಚಿತ್ರಗಳಾದ ಚೆಲ್ಲಾಟ, ಮುಂಗಾರು ಮಳೆ, ಹುಡುಗಾಟ, ಚೆಲುವಿನ ಚಿತ್ತಾರ, ಕೃಷ್ಣ ಮತ್ತು ಗಾಳಿಪಟ ಸೆಂಚುರಿ ಬಾರಿಸಿವೆ. ಕನ್ನಡ ಚಿತ್ರರಂಗದ ಇತಿಹಾಸದಲ್ಲೇ ಯಾವೊಬ್ಬ ನಾಯಕನಟನ ಮೊದಲ ಆರೂ ಚಿತ್ರಗಳೂ ಸೆಂಚುರಿ ಬಾರಿಸಿದ ಉದಾಹರಣೆ ಇಲ್ಲ.

ಶಿವರಾಜ್‌ಕುಮಾರ್‌ರ ಮೊದಲ ಮೂರು ಚಿತ್ರಗಳು ಸೆಂಚುರಿ ಬಾರಿಸಿದಾಗ ಅವರ ಅಭಿಮಾನಿಗಳು ಅವರಿಗೆ ಹ್ಯಾಟ್ರಿಕ್ ಹೀರೋ ಎಂದು ಬಿರುದು ನೀಡಿದರು. ಈಗ ಆರು ಚಿತ್ರಗಳ ಸೆಂಚುರಿ ಸರದಾರ ಗಣೇಶ್‌ನನ್ನು ಡಬಲ್ ಹ್ಯಾಟ್ರಿಕ್ ಹೀರೋ ಎಂದು ಕರೆಯುತ್ತಾರೆಯೇ?


'ರಾಜ್' ಗೆಟಪ್



"ಪುನೀತ್ ರಾಜ್‌ಕುಮಾರ್ ಅವರ ಹೊಸ ಗೆಟಪ್ ನೋಡಬೇಕೆಂದರೆ ಇಪ್ಪತ್ನಾಲ್ಕರಂದು ನ್ಯಾಷನಲ್ ಕಾಲೇಜ್ ಗ್ರೌಂಡಿಗೆ ಬನ್ನಿ ಸಾರ್" ಎಂದು 'ರಾಜ್' ಚಿತ್ರದ ನಿರ್ದೇಶಕ ಪ್ರೇಮ್ ಅನೇಕ ಬಾರಿ ಹೇಳಿದ್ದರಿಂದ ಆ ಚಿತ್ರದಲ್ಲಿ ಪುನೀತ್ ಗೆಟಪ್ ಹೇಗಿರಬಹುದು ಎಂಬುದರ ಬಗ್ಗೆ ಕುತೂಹಲವಿತ್ತು.

ಆದರೆ ಮೊನ್ನೆ 'ರಾಜ್' ಮುಹೂರ್ತದ ದಿನದಂದು ಪುನೀತ್ ಗೆಟಪ್ ನೋಡಿ 'ಇಷ್ಟೇನಾ?' ಎಂದೆನಿಸಿತು. ಯಾಕೆಂದರೆ ಪ್ರೇಮ್ ವರ್ಣಿಸಿದ ರೀತಿಯಲ್ಲಿ ಪುನೀತ್ ಗೆಟಪ್ ವಿಭಿನ್ನವಾಗಿರಲಿಲ್ಲ, ಆ ತರಹದ ಹೇರ್ ಸ್ಟೈಲ್ ಹೊಂದಿರುವ ನೂರಾರು ಹುಡುಗರು ಕೆಂಪೇಗೌಡ ರಸ್ತೆ ಮತ್ತು ಎಂಜಿ ರೋಡುಗಳಲ್ಲಿ ಕಾಣಸಿಗುತ್ತಾರೆ. ಅದಕ್ಕಿಂತ ಪುನೀತ್ ಗೆಟಪ್ ವಿಭಿನ್ನವಾಗೇನೂ ಇರಲಿಲ್ಲ.

ಇದೆಲ್ಲದರಿಂದ ಮತ್ತೆ ಸ್ಪಷ್ಟವಾದ ಅಂಶ ಯಾವುದೆಂದರೆ ಚಿಕ್ಕ ವಿಷಯವನ್ನೇ ದೊಡ್ಡದಾಗಿ ಮಾಡಿ ಪುಕ್ಕಟೆ ಪ್ರಚಾರ ಪಡೆಯುವ ಚಾಳಿಯನ್ನು ಪ್ರೇಮ್ ಇನ್ನೂ ಬಿಟ್ಟಿಲ್ಲ ಎಂಬುದು!



ಇಳಯರಾಜ 867

'ನನ್ನವನು' ಎಂಬ ಹೊಸ ಚಿತ್ರ ಮೊನ್ನೆ ಸೆಟ್ಟೇರಿತು. ಪ್ರಜ್ವಲ್ ದೇವರಾಜ್ ಈ ಚಿತ್ರದ ನಾಯಕನಟ. 'ಸಂಗಾತಿ' ಎಂಬ ಚಿತ್ರವನ್ನು ನಿರ್ದೇಶಿಸಿದ್ದ ಶ್ರೀನಿವಾಸ್ ರಾಜು ಪಾಲಿಗೆ ಇದು ಎರಡನೇ ಚಿತ್ರ. ಇಳಯರಾಜ ಈ ಚಿತ್ರಕ್ಕೆ ಸಂಗೀತ ನೀಡುತ್ತಿದ್ದಾರೆ.

ವಿಶೇಷವೆಂದರೆ, ಇದು ಇಳಯರಾಜ ಸಂಗೀತ ನಿರ್ದೇಶನದ 867ನೆಯ ಚಿತ್ರ. ಇಂತಹ ಸಂಗೀತ ನಿರ್ದೇಶಕರ ಜೊತೆ ಮಾತನಾಡುವಾಗ ಯೋಗಿಯ ಜೊತೆ ಮಾತನಾಡಿದ ಭಾವನೆಯಾಗುತ್ತದೆ ಎಂದು ನಿರ್ದೇಶಕ ಶ್ರೀನಿವಾಸ ರಾಜು ಹೇಳಿದರು. ಅದು ಅತಿಶಯೋಕ್ತಿ ಅಲ್ಲ. ಯಾಕೆಂದರೆ ಸಂಗೀತವನ್ನು ಒಂದು ತಪಸ್ಸಿನ ಹಾಗೆ ನೋಡುವ ಇಳಯರಾಜಾಗೆ ಈ ಗ್ಲಾಮರ್ ಲೋಕದ, ತಳಕುಬಳುಕಿನ ಯಾವುದೇ ಸೋಂಕು ತಾಗೇ ಇಲ್ಲ.

ಇದಕ್ಕಿಂತಲೂ ಮುಖ್ಯ ವಿಷಯವೆಂದರೆ, ಈ ಚಿತ್ರಕ್ಕಾಗಿ ಇಳಯರಾಜಾ ಅರವತ್ತೇಳು ಟ್ಯೂನ್‌ಗಳನ್ನು ನಿರ್ದೇಶಕರಿಗೆ ನೀಡಿದ್ದರಂತೆ. ಈ ಅರವತ್ತೇಳರಲ್ಲಿ ಆರನ್ನು ಆರಿಸುವುದೇ ನಿರ್ದೇಶಕರಿಗೆ ದೊಡ್ಡ ಸವಾಲಾಯಿತಂತೆ. ಇದು ಇಳಯರಾಜಾ ಶೈಲಿ. ಇಂತಹ ಶೈಲಿಯನ್ನು ಅನುಸರಿಸಲು ಗುರುಕಿರಣ್ ಇನ್ನೆಷ್ಟು ಶತಮಾನ ಸಂಗೀತ ಕಲಿಯಬೇಕೋ ಏನೋ.

'ಎದ್ದೇಳು ಮಂಜುನಾಥ'

ಯಜ್ಞಾ



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 26676427
Fax : 26604536, E-mail :lankesh70@rediffmail.com, Printed at Rajhans Enterprises, # 134, 4th M...